ಜಯಂತಕಾಯ್ಕಿಣಿಯವರ ಕಥೆಗಳು: ಒಂದು ಅಧ್ಯಯನ

ಕನ್ನಡ ಎಂ.ಫಿಲ್. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧಕರು
ಉಮಾ. ಎಸ್
ನೋಂದಣಿ ಸಂಖ್ಯೆ: ಕೆ.ಆರ್.ಎಸ್.ಎಂ.ಕೆ-೦೦೨

ಮಾರ್ಗದರ್ಶಕರು
ಡಾ॥ ಪಿ. ಬೆಟ್ಟೇಗೌಡ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಿಳಾ ಸರ್ಕಾರಿ ಪ್ರಥಮ ದರ್ಜೆಕಾಲೇಜು,
ವಿಜಯನಗರ, ಮೈಸೂರು

ಅಧ್ಯಯನ ಕೇಂದ್ರ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೪-೨೦೧೫

ಜಯಂತಕಾಯ್ಕಿಣಿಯವರ ಕಥೆಗಳು: ಒಂದು ಅಧ್ಯಯನ

ಕನ್ನಡ ಎಂ.ಫಿಲ್. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧಕರು
ಉಮಾ. ಎಸ್
ನೋಂದಣಿ ಸಂಖ್ಯೆ: ಕೆ.ಆರ್.ಎಸ್.ಎಂ.ಕೆ-೦೦೨

ಮಾರ್ಗದರ್ಶಕರು
ಡಾ॥ ಪಿ. ಬೆಟ್ಟೇಗೌಡ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಿಳಾ ಸರ್ಕಾರಿ ಪ್ರಥಮದರ್ಜೆ ಕಾಲೇಜು,
ವಿಜಯನಗರ, ಮೈಸೂರು

ಅಧ್ಯಯನ ಕೇಂದ್ರ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೪-೨೦೧೫

ದೃಢೀಕರಣ ಪತ್ರ

ಜಯಂತಕಾಯ್ಕಿಣಿಯವರ ಕಥೆಗಳು: ಒಂದು ಅಧ್ಯಯನ ಎಂಬ ವಿಷಯದ ಮೇಲೆ ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯದ ಎಂ.ಫಿಲ್ (ಕನ್ನಡ) ಪದವಿಗೆ ವಿದ್ಯಾರ್ಥಿನಿಯಾದ ಉಮಾ. ಎಸ್ ಅವರು ನನ್ನ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯಲ್ಲಿ ಬರೆದು ಒಪ್ಪಿಸುತ್ತಿದ್ದಾರೆಂದು ಹಾಗೂ ಈ ವಿಷಯದ ಬಗ್ಗೆ ಬೇರೆಯಾರಿಗೂ ನಾನು ಮಾರ್ಗದರ್ಶನ ಮಾಡಿರುವುದಿಲ್ಲವೆಂದು ಧೃಢೀಕರಿಸುತ್ತೇನೆ.

ಮಾರ್ಗದರ್ಶಕರ ಸಹಿ

ಡಾ॥ ಪಿ. ಬೆಟ್ಟೇಗೌಡ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ವಿಜಯನಗರ, ಮೈಸೂರು

ದಿನಾಂಕ : ೨೦/೮/೨೦೧೫
ಸ್ಥಳ : ಮಂಡ್ಯ

ಪ್ರಮಾಣ ಪತ್ರ

ಜಯಂತಕಾಯ್ಕಿಣಿಯವರ ಕಥೆಗಳು: ಒಂದು ಅಧ್ಯಯನ ಎಂಬ ವಿಷಯದ ಮೇಲೆ ಈ ನಿಭಂಧವನ್ನು ಡಾ॥ ಪಿ. ಬೆಟ್ಟೇಗೌಡಅವರ ಮಾರ್ಗದಶನದಲ್ಲಿ ನನ್ನ ಸಂಶೋಧನೆಯ ಫಲವಾಗಿ ರಚಿಸಲ್ಪಟ್ಟು ಕನ್ನಡ ವಿಶ್ವವಿದ್ಯಾನಿಲಯ ಎಂ.ಫಿಲ್ (ಕನ್ನಡ) ಪದವಿಗೆಅರ್ಪಿಸುತ್ತಿದ್ದೇನೆ. ಈ ನಿಭಂಧವನ್ನು ಹಿಂದಿನ ವರ್ಷಗಳಲ್ಲಿ ಯಾರು ಇಲ್ಲಿಯವರೆಗೆ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿಲ್ಲವೆಂದು ನಾನು ಇಲ್ಲಿ ಪ್ರಮಾಣೀಕರಿಸುತ್ತಿದ್ದೇನೆ.

Uma.S

ಉಮಾ. ಎಸ್
ಎಂ.ಫಿಲ್ ವಿದ್ಯಾರ್ಥಿನಿ
ನೋಂದಣಿ ಸಂಖ್ಯೆ:
ಕೆ.ಆರ್.ಎಸ್.ಎಂ.ಕೆ–೦೦೨

ದಿನಾಂಕ : ೨೦/೮/೨೦೧[illegible]
ಸ್ಥಳ : ಮಂಡ್ಯ

ಜಯಂತಕಾಯ್ಕಿಣಿಯವರ ಕಥೆಗಳು: ಒಂದು ಅಧ್ಯಯನ

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಮಹತ್ವ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಯು ಅತ್ಯಂತ ಜನಪ್ರಿಯ ಪ್ರಕಾರವಾಗಿ ಮೂಡಿಬಂದಿದೆ.ಸಣ್ಣಕಥೆಗೆ ಮನುಷ್ಯನ ವೈಯಕ್ತಿಕ ಅನುಭವದ ಪ್ರತಿಯೊಂದು ಕ್ಷಣಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಸಾಮರ್ಥ್ಯವಿದೆ. ಕಥೆಗಾರ ಜೀವನದಲ್ಲಿ ತಾನು ಕಂಡುಂಡ ಅನುಭವಗಳನ್ನು ಮಾತ್ರವಲ್ಲ, ತನ್ನ ನಂಬಿಕೆಗಳನ್ನು, ಕನಸುಗಳನ್ನು, ಸಮಸ್ಯೆಗಳನ್ನು ಅಂತೆಯೇ ಕಲ್ಪನೆಗಳನ್ನು ಸಹ ವಸ್ತುವನ್ನಾಗಿಸಿ ಕಥೆಗಳ ರೂಪದಲ್ಲಿ ಓದುಗರಿಗೆ ತಲುಪಿಸುವಲ್ಲಿ ಯಶಸ್ಸನ್ನು ಸಾಧಿಸಿದ್ದಾನೆ. "ಆಧುನಿಕ ಕನ್ನಡದ ಸಾಹಿತ್ಯದಲ್ಲಿ ಮೊದಲಿನಿಂದಲೂ ಸಣ್ಣಕತೆ ಅತ್ಯಂತ ಚೈತನ್ಯಶೀಲವಾದ ಸಾಹಿತ್ಯಪ್ರಕಾರವಾಗಿ ಬೆಳೆದು ಬಂದಿದೆ. ನವ್ಯದ ಕಾಲದಲ್ಲಂತೂ ಅದು ಕಾವ್ಯಕ್ಕಿಂತ ಒಂದು ಕೈ ಮಿಗಿಲಾಗಿಯೆ ಬೆಳೆಯಿತು.ಇಂದಿಗೂ ಅದರ ಪ್ರಯೋಗಶೀಲತೆ, ಉತ್ಸಾಹ ಮಾಸಿಲ್ಲ. ಕನ್ನಡ ಸಾಹಿತ್ಯದ ಆಧುನಿಕ ನೆಲೆಗಳೆಲ್ಲ ಹೆಚ್ಚಾಗಿ ತಾಕಲಾಡುತ್ತಿರುವುದು ಸಣ್ಣಕತೆಯಲ್ಲಿಯೇ ಎನ್ನಬಹುದು. ನಮ್ಮ ಸಾಹಿತ್ಯದ ವೈಚಾರಿಕ ನೆಲೆಗಳು ಹದಗೊಂಡು ಹರಳುಗಟ್ಟುವುದು ಕೂಡ ಈ ಸಾಹಿತ್ಯಪರಕಾರದಲ್ಲೇ".[೧] ಇವೇ ಕಾರಣಗಳಿಂದಾಗಿ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ನವ್ಯೋತ್ತರ ಹೀಗೆ ಹಲವಾರು ಘಟ್ಟಗಳನ್ನು ದಾಟುತ್ತಾ ಕಾಲಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಮೈಗೂಡಿಸಿಕೊಳ್ಳುತ್ತಾ ನವನವೋನ್ಮೇಷಶಾಲಿಯಾಗಿ ಮೂಡುತ್ತಾ ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಯು ತನ್ನ ಜನಪ್ರಿಯತೆಯನ್ನು ಸದಾ ಉಳಿಸಿಕೊಂಡು ಬಂದಂತಹ ಸಾಹಿತ್ಯಪ್ರಕಾರವೆನಿಸಿಕೊಂಡಿದೆ.

ಆಧುನಿಕ ಸಣ್ಣಕಥೆಗಳಿಗೆ ಒಂದು ವಿಶಿಷ್ಟವಾದ ಸ್ವರೂಪವನ್ನು ನೀಡಿ ಅದನ್ನು ಕನ್ನಡ ಸಾಹಿತ್ಯದ ಬಹುಮುಖ್ಯ-ಬಹುಚರ್ಚಿತ-ಅಂತೆಯೇ ಬಹುಜನಪ್ರಿಯ ಪ್ರಕಾರವನ್ನಾಗಿಸಿದವರು ಮಾಸ್ತಿಯವರು. ಮಾನವಸಹಜವಾದ ಆಸಕ್ತಿ ಹಾಗೂ ಕುತೂಹಲವನ್ನು ಅರಿತೇ ಕನ್ನಡದ ಸಣ್ಣ ಕಥೆಗಳ ಪಿತಾಮಹರಾದ ಮಾಸ್ತಿಯವರಂತೂ-"ಜೊತೆಯ ಜೀವದ ಜೀವನದಲ್ಲಿ ಸಹಾನುಭೂತಿಯಿಂದ ಬೆರೆತು ಅದರ ಸಂಗತಿಯನ್ನು ಬೇರೆ ಜೀವಕ್ಕೆ ತಿಳಿಸುವುದಕ್ಕಾದರೂ ಕತೆ ಬೇಕೇ ಬೇಕು, ಕತೆ ಮನುಷ್ಯನಿಗೆ ಮನುಷ್ಯನ ಕತೆ ಹೇಳುತ್ತದೆ".[೨] ಎಂದು ಅರ್ಥೈಸುತ್ತಾರೆ.

---

೧. ಕಲ್ಪಿತ ವಾಸ್ತವ (೨೦೦೯) ಪು.ಸಂ.೩೦೪

೨. ಕಲ್ಪಿತ ವಾಸ್ತವ – ಗಿರಡ್ಡಿ ಗೋವಿಂದರಾಜು (೨೦೦೯) ಪು.ಸಂ.೨೨

ವೈಯಕ್ತಿಕ ಬದುಕಿನ ಸೀಮಿತ ಪರಿಧಿಯಿಂದಾಚೆಗೆ ದೃಷ್ಟಿ ಹಾಯಿಸಿ ತಮ್ಮ ಅರಿವಿಗೆ ದಕ್ಕಿದ್ದನ್ನು ಇನ್ನಿತರರೊಂದಿಗೆ ಹಂಚಿಕೊಳ್ಳುವುದೇ ಜೀವನಧರ್ಮ; ಇದನ್ನು ತಿಳಿಹೇಳಲು ಕಥೆಯು ಉತ್ತಮವಾದ ಮಾರ್ಗ ಎನ್ನುವುದನ್ನು ಮಾಸ್ತಿಯವರ ಕಥಾಪರಂಪರೆಯು ಸೂಚಿಸುತ್ತದೆ.

ಮಾಸ್ತಿಯವರ ನಂತರ ಅವರ ಮನೋಧರ್ಮವನ್ನು ಚೆನ್ನಾಗಿ ಅರಿತು ಅದರೊಂದಿಗೆ ತಮ್ಮದೇ ಆದಂತಹ ನವ್ಯಸಂವೇದನೆಗಳನ್ನು ಜೋಡಿಸಿ, ಕಥೆಗಳಲ್ಲಿ ನೂತನ ಪ್ರಯೋಗಗಳನ್ನು ಮಾಡಿ ಯಶಸ್ವಿಯಾದ ಕಥೆಗಾರರೆಂದರೆ ಯಶವಂತಚಿತ್ತಾಲರು. ಮಾಸ್ತಿಯವರಂತೆಯೇ ಇನ್ನೊಬ್ಬರ ಅನುಭವ ವನ್ನು ಮುಟ್ಟುವ ಆಸಕ್ತಿ, ಆ ಅನುಭವವನ್ನು ಇತರರೊಂದಿಗೆ ಹಂಚಿಕೊಳ್ಳಬೇಕೆಂಬ ಮನೋಭಾವ ಚಿತ್ತಾಲರಲ್ಲಿಯೂ ಆಳವಾಗಿ ನೆಲೆಸಿವೆ. ಯಶವಂತ ಚಿತ್ತಾಲರು ಕಳೆದ ಆರು ದಶಕಗಳಿಂದ ಮುಂಬಯಿಯಲ್ಲಿ ನೆಲೆನಿಂತು ಅತ್ಯುತ್ತಮ ಸಣ್ಣಕಥೆಗಳನ್ನು ಬರೆಯುತ್ತಿದ್ದು, ಕನ್ನಡ ಸಾಹಿತ್ಯದಲ್ಲಿ ಅಪ್ರತಿಮ ಕಥೆಗಾರರೆಂದು ಮೆಚ್ಚುಗೆಯನ್ನು ಪಡೆದವರು. ತಮ್ಮ ಹುಟ್ಟೂರಾದ ಹನೇಹಳ್ಳಿ ಮತ್ತು ಮುಂಬಯಿಯ ಹಿನ್ನಲೆಯಲ್ಲಿ ಬರೆದಿರುವ ಇವರ ಕಥೆಗಳು ಓದುಗರಂತೆಯೇ ವಿಮರ್ಶಕರನ್ನು ಸಹ ಬೆರಗುಗೊಳಿಸಿವೆ.

ಯಶವಂತ ಚಿತ್ತಾಲರ ಹುಟ್ಟೂರಿನ ಸಮೀಪ ಊರಾದ ಗೋಕರ್ಣದ ಪ್ರತಿಭೆ ಜಯಂತ ಕಾಯ್ಕಿಣಿ.ಇವರು ಕೂಡಾ ಮಾಸ್ತಿ ಮತ್ತು ಚಿತ್ತಾಲರ ಜೀವನದರ್ಶನದ ಹಾದಿಯಲ್ಲೇ ಹೆಜ್ಜೆ ಇಟ್ಟವರು.ಆದರೆ ಮಾಸ್ತಿ ಮತ್ತು ಚಿತ್ತಾಲರಗಿಂತ ಭಿನ್ನವಾದ ಶೈಲಿಯಲ್ಲಿ, ವಿಶಿಷ್ಟವಾದ ಭಾಷೆಯಲ್ಲಿ ಓದುಗರಿಗೆ ಅನೂಹ್ಯವಾದ ಅನುಭವ ಜಗತ್ತನ್ನು ತಮ್ಮ ಕಥೆಗಳ ಮೂಲಕ ಕಟ್ಟಿ ಕೊಟ್ಟು ಕನ್ನಡ ಕಥಾವಿಶ್ವದ ಕ್ಷಿತಿಜವನ್ನು ವಿಸ್ತರಿಸಿದ, ಸಮೃದ್ಧಗೊಳಿಸಿದ ಶ್ರೇಯಸ್ಸು ಜಯಂತರದ್ದು.ಮಾಸ್ತಿಯವರಂತೆ ಜಯಂತರು ಕೂಡ ತಮ್ಮ ಜೊತೆಯ ಜೀವದ ಜೀವನದಲ್ಲಿ ಸಹಾನುಭೂತಿಯಿಂದ ಬೆರೆತು, ಆ ಜೀವದ ಕಥೆಯನ್ನು ಅದನ್ನು ತಿಳಿಯದಿರುವ ಇನ್ನೊಂದು ಜೀವಕ್ಕೆ ತಿಳಿಸುವ ಪ್ರಯತ್ನದಲ್ಲಿ ಅಚಲ ವಿಶ್ವಾಸ ಉಳ್ಳವರು.ಇವರು ಸ್ವಭಾವತಃ ಭಾವಜೀವಿ ಹಗೂ ಸೂಕ್ಷ್ಮಗ್ರಾಹಿ.ಪರೀಕ್ಷಕ ದೃಷ್ಟಿಯಿಂದ ತಮ್ಮ ಆಸುಪಾಸಿನಲ್ಲಿರುವ ಎಲ್ಲವನ್ನು ಎಲ್ಲರನ್ನೂ ಗಮನಿಸುವ ಕಲೆಯಲ್ಲಿ ಇವರು ಸಿದ್ಧಹಸ್ತರು.ಇವರ ಆಸಕ್ತಿಯ ಕೇಂದ್ರ- ಮಧ್ಯಮ ಹಾಗೂ ಕೆಳಮಧ್ಯಮವರ್ಗದ ಜನರು ಬದುಕುವ ಪರಿ.ಪ್ರತಿಯೊಂದು ಜೀವಿಯ ಬದುಕಿನಲ್ಲಿಯೂ ಕೂಡ ನೋವು ನಲಿವು, ಸೋಲು-ಗೆಲವು, ಹತಾಶೆ-ಅಸಹಾಯಕತೆ-ಒಂಟಿತನ-ದುಃಖ ಇದೆ, ಅದರೊಂದಿಗೆ ಇವುಗಳೆಲ್ಲವನ್ನೂ ಮೀರಬೇಕೆನ್ನುವ ಜೀವನೋತ್ಸಾಹವೂ ಇದೆ ಎನ್ನುವುದನ್ನು ಜಯಂತರ ಕಥೆಗಳು ಸಾರುತ್ತವೆ.

ಸಾಹಿತ್ಯ ನಿಂತ ನೀರಲ್ಲ; ಕಾಲದಿಂದ ಕಾಲಕ್ಕೆ, ಅನುಭವಗಳಿಂದ ಅನುಭವಗಳಿಗೆ ಬದಲಾಗುತ್ತದೆ, ತನ್ನ ಪಾತಳಿಗಳನ್ನು ಹಿಗ್ಗಿಸುತ್ತ, ಕಿರಿದಾಗಿಸುತ್ತ, ಬದಲಾಯಿಸುತ್ತ, ಹೊಸ-ಹೊಸ ಕವಲುಗಳನ್ನುಂಟು ಮಾಡುತ್ತ ತನಗೆ ಬೇಕಾದ ಹಾಗೆ, ಸಂದರ್ಭಕ್ಕೆ ತಕ್ಕ ಹಾಗೆ, ವಾತಾವರಣಕ್ಕೆ ಅನುಕೂಲಕರವಾಗುವ ಹಾಗೆ, ಓದುಗನಿಗೆ ರಂಜನೆಯನ್ನುಂಟು ಮಾಡುವ ಹಾಗೆ, ಕವಿಗೆ ಹೊಸ ಸ್ಫೂರ್ತಿಯನ್ನು ದೃಷ್ಟಿಕೋನವನ್ನು ತಂದು ಕೊಡುತ್ತ ಮೈದುಂಬಿ ಹರಿಯುತ್ತದೆ. ಹಾಗಾಗಿ ಒಂದು ಸಾಹಿತ್ಯದ ಅಧ್ಯಯನ ಕೇವಲ ಕೃತಿಯ ಅಧ್ಯಯನವಾಗದೆ ಒಂದು ಸಮಾಜದ,ರಾಜಕೀಯದ, ಆರ್ಥಿಕ ಮತ್ತು ಸಾಂಸ್ಕೃತಿಕ ಅಧ್ಯಯನವಾಗುತ್ತದೆ.ಆದ್ದರಿಂದಲೇ ಸಾಹಿತ್ಯ ಬದಲಾಗುವುದು ಕೇವಲ ಕವಿ ಅಥವಾ ಲೇಖಕನ ತುರ್ತು ಅಲ್ಲ. ಅದು ಸಮಾಜದ ತುರ್ತು, ಸಹೃದಯನ ತುರ್ತು ಕೂಡ ಹೌದು.ಒಂದು ಕಾವ್ಯ ರಚನೆಯಾದರೆ ಅದನ್ನು ಮೇಲೆ ಕಾಣಿಸಿದ ಎಲ್ಲ ವಿಭಾಗದ ವಿದ್ವಾಂಸರೂ ಆಯಾ ದೃಷ್ಟಿಯಿಂದ ಕೃತಿಯನ್ನು ಅಧ್ಯಯನಕ್ಕೆ ಒಳಪಡಿಸುತ್ತಾರೆ, ಹಾಗೆ ಅಧ್ಯಯನ ಮಾಡಿ ಲೇಖಕನ ಪ್ರಯೋಗ ಸಮವೆ ಎಂದು ತೂಗಿ ನೋಡುತ್ತಾರೆ.

ಆವಿಷ್ಕಾರ, ಸಂಶೋಧನೆಗಳು ಮಾನವ ಸಮಾಜದಲ್ಲಿ ಸತ್ಯವನ್ನು ನೆಲೆಗೊಳಿಸುತ್ತದೆ.ನಾಗರಿಕತೆಗೆ ಬೇಕಾದ ಸವಲತ್ತುಗಳನ್ನು ಒದಗಿಸಿಕೊಡುತ್ತವೆ. ವೈಜ್ಞಾನಿಕತೆ ಬೆಳೆದಂತೆ ಜ್ಞಾನದ ಶಾಖೋಪಶಾಖೆಗಳಲ್ಲಿ ಭಿನ್ನ-ಭಿನ್ನ ನೆಲೆಗಳಲ್ಲಿ ಹುಡುಕಾಟ ನಡೆಯುತ್ತಿದೆ.ಸಂಶೋಧನೆ ಎನ್ನುವುದು ಸತ್ಯವನ್ನು ಹೊರತೆಗೆಯುವ ಕ್ರಿಯೆಯಾಗಿದೆ.ಒಂದು ಸಾಂಸ್ಕೃತಿಕ ಸಮಾಜ ಲೇಖಕರನ್ನು ಹೇಗೆ ರೂಪಿಸಿದೆ ಎನ್ನುವ ಸತ್ಯವನ್ನು ಲೇಖಕನ ಬರಹ-ಬದುಕು ಎರಡನ್ನು ಶೋಧಿಸುವುದಾಗಿದೆ.ಒಂದು ಕೃತಿ ಪ್ರಕಟವಾದ ಮೇಲೆ ಸಮಾಜಕ್ಕೆ ಅದು ಪ್ರತಿಸ್ಪಂದಿಸಿದ ರೀತಿ ಹೇಗೆಂಬುದನ್ನು ಆ ಕೃತಿಯ ಕಾಲದ ಹಿನ್ನಲೆಯಲ್ಲಿ ಸಂಶೋಧಕನು ಗ್ರಹಿಸಬೇಕಾಗುತ್ತದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಮರ್ಶೆ, ಕಾದಂಬರಿ, ಕಥೆ, ನಾಟಕ, ಕಾವ್ಯ, ಜಾನಪದ ಮೊದಲಾದ ಹೊಸ ಪ್ರಕಾರಗಳು ಕಾಣಿಸಿಕೊಂಡಿವೆ. ಈ ಎಲ್ಲಾ ಪ್ರಕಾರಗಳು ತಮ್ಮ ತಮ್ಮದೇ ಆದಂತಹ ಗುಣ ಲಕ್ಷಣಗಳನ್ನು ಆಶಯಗಳನ್ನು, ಶೈಲಿಯನ್ನು ಒಳಗೊಂಡಿರುತ್ತವೆ. ಅಂತಹ ಪ್ರಕಾರಗಳಲ್ಲಿ ಮಾನವ ಭಾವಗಳನ್ನು ಸರಳವಾಗಿ, ಸೂಕ್ಷ್ಮವಾಗಿ, ಸವಿವರವಾಗಿ ಕಲಾತ್ಮಕ ಮಾದರಿಯಲ್ಲಿ ಕಟ್ಟಿಕೊಡುವಂತಹ ಒಂದು ಜನಪ್ರಿಯ ಪ್ರಕಾರವೇ 'ಕತೆ' ಎಂದು ಹೇಳಲಾಗಿದೆ.

ಕನ್ನಡ ಸಾಹಿತ್ಯವು ಅನೇಕ ಸ್ಥಿತ್ಯಂತರಗಳನ್ನು, ಕಾಲಘಟ್ಟಗಳನ್ನು ಸಾಮಾಜಿಕ, ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳೊಂದಿಗೆ ವಿಕಾಸವಾಗುತ್ತಾ ಬಂದಿದೆ. ಹೀಗೆ ಒಬ್ಬ ಸಾಹಿತಿಯನ್ನು ಆ ಕಾಲದ ಹಿನ್ನಲೆಯಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಸಂಶೋಧಿಸ

ಬೇಕಾಗುತ್ತದೆ.ಕನ್ನಡದ ಶ್ರೇಷ್ಠ ಕತೆಗಾರರ ಸಾಲಿನಲ್ಲಿ ನಿಲ್ಲುವಂತಹಜಯಂತ ಕಾಯ್ಕಿಣಿ ಯವರು ಅನೇಕ ಕಥಾಸಂಕಲನಗಳನ್ನು ಪ್ರಕಟಿಸುವ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರಕೊಡುಗೆಯನ್ನು ನೀಡಿದ್ದಾರೆ.ಇವರ ಕಥೆಗಳು ಒಳಗೊಂಡಿರುವಂತಹ ಸೂಕ್ಷ್ಮ ಸಂವೇದನೆಯೇ ಅಧ್ಯಯನಕ್ಕೆ ಕಾರಣವಾಗಿದೆ.

ಸಮಕಾಲೀನ ಕನ್ನಡದ ಪ್ರಮುಖ ಕಥೆಗಾರರಲ್ಲಿ ಜಯಂತ ಕಾಯ್ಕಿಣಿಯವರು ಒಬ್ಬರು.ಸಮಕಾಲೀನ ಸಂದರ್ಭದ ಬದುಕಿನ ವಾಸ್ತವಾಂಶಗಳನ್ನು ಜಯಂತ ಕಾಯ್ಕಿಣಿ ತಮ್ಮ ಬರವಣಿಯ ವಸ್ತುಗಳಾಗಿ ಮಾನವೀಯ ವಿನ್ಯಾಸಗೊಳಿಸಿರುವುದು ಕುತೂಹಲದ ಸಂಗತಿ.ಮನುಷ್ಯ ಮಾದರಿಗಳಲ್ಲಿ ನಂಬಿಕೆಯಿಲ್ಲದ ಜಯಂತರು ವ್ಯಕ್ತಿ ಸ್ವಭಾವದಲ್ಲಿ ಸ್ಪಂದಿಸುವುದು ವಿಶೇಷವಾಗಿ ಕಾಣುತ್ತದೆ.ಈ ಎಲ್ಲಾ ಅಂಶಗಳು ಅಧ್ಯಯನಕ್ಕೆ ಕುತೂಹಲವನ್ನು ಮೂಡಿಸಿದೆ.ಸಮಕಾಲೀನ ಸಂದರ್ಭದೊಡನೆ ಹೆಜ್ಜೆ ಹಾಕುತ್ತ ಹಿಂದಿನವನ್ನು ಒಮ್ಮೆ ಹೊರಳಿ ನೋಡುತ್ತ ನಡೆದರೆ ಕನ್ನಡ ಪರಂಪರೆಯೇ ವಿಶಿಷ್ಟವಾದದ್ದು, ಹೀಗೆ ಸಮಕಾಲೀನ ಬದುಕಿನ ಸಂಭಂದದೊಡನೆ ಸಹಚರ್ಯವಾಗಿರುವ ರಿಯಾಲಿಟಿ ಶೋಗಳು, ರೈಲು ನಿಲ್ದಾಣಗಳು, ಸಮುದ್ರ, ಹೆಸರಿಲ್ಲದವರು, ವಿಳಾಸವಿಲ್ಲದವರೆಲ್ಲ ಕಥೆಯ ಮುಖ್ಯ ಭೂಮಿಕೆಯಲ್ಲಿ ಸುಳಿದು ಮರೆಯಾಗುತ್ತಾರೆ.ಆದರೆ ಅವರ ಆ ವರ್ತನೆ, ಸ್ವಭಾವಗಳು ಮಾತ್ರ ಯಾಕೆ ಹೀಗೆ ಆಯಿತು ಎಂಬಂಥ ಪ್ರಶ್ನಾರ್ಥಕ ಚಿಹ್ನೆಯನ್ನು ಓದುಗರ ಮುಖದಲ್ಲಿ ಮೂಡಿಸುತ್ತದೆ.ಇಂತಹ ಕುತೂಹಲಗಳು ಲೇಖಕರಲ್ಲಿ ಮೂಡಿದ ನೆಲೆಗಳನ್ನು ಇಲ್ಲಿ ತಿಳಿಸಲಾಗಿದೆ.

ಲೇಖಕನು ಸಮಕಾಲೀನ ಸಂದರ್ಭದಲ್ಲಿದ್ದರೂ ಹಿಂದಿನ ಪ್ರಭಾವ ಪ್ರೇರಣೆಗಳಿಂದಲೇ ಹೊರತಾಗಿ ಬರೆಯಲು ಸಾಧ್ಯವಿಲ್ಲ. ಹೀಗಾಗಿ ಲೇಖಕನ ಮೇಲೆ ಹೆಚ್ಚು ಪ್ರಭಾವ ಬೀರಿರುವ ಲೇಖಕರು, ಕೃತಿಗಳು ಕೂಡ ಪ್ರಮುಖವಾಗುತ್ತವೆ. ಆ ಮೂಲಕ ಬದುಕಿನ ಯಾವ ಮೌಲ್ಯಗಳಿಗೆ ಲೇಖಕನ ತುಡಿತವಿದೆ, ಅದು ಅವನ ಜೀವನದಲ್ಲಿ ಎಷ್ಟರ ಮಟ್ಟಿಗೆ ಸಾಕಾರಗೊಂಡಿದೆ. ಲೇಖಕನು ಆ ಪ್ರಭಾವಗಳಿಂದ ವಿಭಿನ್ನವಾದದ್ದನ್ನು ಕಂಡುಕೊಂಡಿರುವ ಬಗೆಯೇನಾದರೂ ಸಾಧ್ಯವೇ?ಎಂಬುದಾಗಿ ಹಿಂದಿನದನ್ನು ಅರಿತು ಸಮಕಾಲೀನ ಬದುಕಿನ ಸತ್ಯಾಸತ್ಯಗಳನ್ನು ಶೋಧಿಸುವ ಬಗೆಯನ್ನು ತಿಳಿಸಲಾಗಿದೆ.ಈ ನೆಲೆಯಲ್ಲಿಯೆ ಅಧ್ಯಯನದ ವ್ಯಾಪ್ತಿಯೊಳಗೆ ಸಮಕಾಲೀನ ಸಾಹಿತ್ಯದ ಸಾಧ್ಯತೆಗಳ ಮಹತ್ವವನ್ನು ತಿಳಿಸಲಾಗಿದೆ.

ಸಮಕಾಲೀನತೆಯಲ್ಲಿ ಬರೆಯುವವರಿಗೆ ಸಮಕಾಲೀನ ಸವಾಲುಗಳು, ಹೊಸ ತಲೆಮಾರಿನ ತಲ್ಲಣಗಳು ಎದುರಾಗುತ್ತವೆ. ಆ ಮೂಲಕ ಬರವಣಿಗೆಗೆ ತೊಡಗಿಕೊಂಡು ಚಿಂತನಶೀಲನಾಗಿ ಧ್ಯಾನಿಸುವ ವಸ್ತು ವಿಷಯಗಳು ವಿವಿಧ ಬಹುರೂಪ ವಿನ್ಯಾಸಗಳಲ್ಲಿ ವಿಹರಿಸುತ್ತ ಯಾವುದೋ ಒಂದು ಹುಡುಕಾಟದಲ್ಲಿ ತೊಡಗಿರುವುದು ಸಹಜವಾಗಿರುತ್ತದೆ.ತಲೆಮಾರಿನ ಹೊಸ ತಲ್ಲಣಗಳಾಗಿ ತಾವು

ಬದುಕಿರುವ ಸಮಕಾಲಿಕ ಜಗತ್ತಿನ ಜತೆಗೆ ಯಾವುದೇ ಸಂಘರ್ಷವಿಲ್ಲದೆ ಅನುಸಂಧಾನದ ಒಡನಾಟವನ್ನು ಹೊಂದಿರುತ್ತದೆ.

ಇಷ್ಟೊಂದು ಸಾಧ್ಯತೆಗಳಿಗೆ ವಿಶೇಷವಾದ ಚಾಪನ್ನು ಮೂಡಿಸಿದ ಜಯಂತಕಾಯ್ಕಿಣಿಯವರ ಕಥೆಗಳು ಸೂಕ್ಷ್ಮ ಸಂವೇದನೆಯಾಗಿರುವುದೇ ಅಧ್ಯಯನಕ್ಕೆ ಕಾರಣವಾಗಿದೆ.ಒಳಹೊಕ್ಕಂತೆ ಸಮಕಾಲೀನ ಪ್ರಪಂಚವೊಂದು ತಲೆಮರೆಸಿಕೊಂಡಿರುವುದನ್ನು, ಅನಾಮಧೇಯರನ್ನು ವಿಳಾಸವಿಲ್ಲದವರನ್ನು ಕುರಿತ ಸಾಮಾಜಿಕವಾದ ಜವಾಬ್ದಾರಿಗಳೇನು?ಎಂಬುದನ್ನು ತಿಳಿಯಲು ಕತೆಗಳ ಆಳದಲ್ಲಿ ಕ್ರಿಯಾಶೀಲವಾಗಿದೆ, ಹಾಗಾದರೆ ಜಯಂತರ ಕತೆಗಳ ನೆಲೆಗಳು ಯಾವ ಹಿನ್ನಲೆಯವು?ಪ್ರಭಾವವೇನು?ಅದರಿಂದಾದ ಪರಿಣಾಮಗಳೇನು?ಎಂಬುದನ್ನು ಈ ಅಧ್ಯಯನದ ಮೂಲಕ ತಿಳಿಯಲಾಗಿದೆ.ಕನ್ನಡ ಸಾಹಿತ್ಯ ಲೋಕದಲ್ಲಿ ಜಯಂತರ ಕತೆಗಳ ನಿಲುವು, ಧೋರಣೆ, ವರ್ತಮಾನದ ತಲ್ಲಣಗಳೇನು?ಎಂಬುದು ಕೂಡ ಮತ್ತೆ-ಮತ್ತೆ ಅಧ್ಯಯನಕ್ಕೆ ಅವಕಾಶ ಒದಗಿಸಿವೆ. ಜಯಂತರ ಎಲ್ಲಾ ಕಥೆಗಳನ್ನು ಸಮಗ್ರವಾಗಿ ಈ ಅಧ್ಯಯನಕ್ಕೆ ಒಳಪಡಿಸಿ, ವೈಜ್ಞಾನಿಕವಾಗಿ, ವಿಚಾರ-ಬದ್ಧವಾಗಿ, ಸತ್ಯಾಸತ್ಯತೆಗಳನ್ನು ತಿಳಿಯುವುದೇ ಈ ಅಧ್ಯಯನದ ಮುಖ್ಯ ಗುರಿಯಾಗಿದೆ.

ಜಯಂತರು ಕನ್ನಡದ ಮಹತ್ವದ ಕಥೆಗಾರರಲ್ಲಿ ಒಬ್ಬರು.ಇವರ ಕಥೆ ಮತ್ತು ಕಾವ್ಯಗಳನ್ನು ನೋಡಿದಾಗ ಒಂದು ಕುತೂಹಲದ ಸಂಗತಿಯು ಗಮನಕ್ಕೆ ಬರುತ್ತದೆ. ಈ ಎರಡೂ ಪ್ರಕಾರಗಳಲ್ಲಿ ಸಂಪೂರ್ಣವಾಗಿ ವರ್ತಮಾನದ ವಾಸ್ತವಕ್ಕೆ ಕಟ್ಟಿಬಿದ್ದಿದ್ದರೂ, ಒಟ್ಟಾರೆಯಾಗಿ ಇರುವ ಕಾವ್ಯದ ಲೋಕದ ದೃಷ್ಟಿ, ಹತಾಶೆ, ಹಾಗೂ ಗಾಢ ವಿಷಾದದಿಂದ ಕೂಡಿದ್ದರೆ ಇವರ ಕಥೆಗಳು ಅದೇ ನೋವು, ವಿಷಾಧಗಳನ್ನು ದಾಖಲಿಸುತ್ತಲೇ ಎಲ್ಲೋ ಒಂದು ಕಡೆ ಮಾನವ ಚೇತನ ತನ್ನ ಸುತ್ತಲೂ ಇರುವ ವ್ಯವಸ್ಥೆಯನ್ನು ಮೀರುವ ಪ್ರಯತ್ನವನ್ನು ತಂದು ಕೊಡುವುದನ್ನು ದಾಖಲಿಸುತ್ತದೆ. ಈ ಭಿನ್ನತೆಗೆ ಭಿನ್ನ ಪ್ರಕಾರಗಳ ಸಾಧ್ಯತೆಗಳು ಕಾರಣವೇ ಎಂಬುದು ಚಾರ್ಚಾಸ್ಪದ ಸಂಗತಿಯಾಗಿ ಅಧ್ಯಯನಕ್ಕೆ ಕಾರಣವಾಗಿದೆ.

ಮತ್ತೊಂದು ಅಂಶವೆಂದರೆ, ಬದಲಾದ ವೈಚಾರಿಕತೆ ಕಥೆಗಳ ಶಿಲ್ಪವನ್ನು ಹಾಗೂ ನಿರೂಪಣಾ ಶೈಲಿಯನ್ನು ಬದಲಾಯಿಸುತ್ತದೆ.ಇವರ ಕಥೆಗಳಲ್ಲಿ ಒಂದು ಕೇಂದ್ರ ಪಾತ್ರವಿಲ್ಲದೆ, ಒಂದಕ್ಕಿಂತ ಹೆಚ್ಚು ಪಾತ್ರಗಳು ಸಮಾನಾಗಿ ಬೆಳೆಯುತ್ತವೆ ಮತ್ತು ಕಥೆಯ ಗತಿಯು ತೀವ್ರವಾಗಿ ನಿರ್ಧಾರಕ ಕ್ಷಣದತ್ತ ಓಡುವುದರ ಬದಲಿಗೆ ನಾವು ಒಂದೇ ಸನ್ನಿವೇಶದ ವಿವಿಧ ಮುಖಗಳನ್ನು ನೋಡುತ್ತೇವೆ ಮತ್ತು

ಕಥೆಯೂ ಖಚಿತವಾದಂತಹ ಮುಕ್ತಾಯವಿಲ್ಲದೆ ಕೊನೆಯಾಗುತ್ತದೆ.ಈ ಕಥೆಗಳು ಧ್ವನಿಸುವ ವೈಚಾರಿಕತೆಯೇನೆಂದರೆ ಅಸಂಗತ ಬದುಕಿನಲ್ಲಿ ವ್ಯಕ್ತಿಗೆ ಸಾಧ್ಯವಿರುವುದು ತನ್ನ ಸರಳುಗಳಿಂದ ಹೊರಬಂದು, ತನ್ನ ಸೀಮಿತ ನೆಲೆಯಲ್ಲಿ ಇತರರಿಗೆ ನೆರವಾಗುವುದು.

ಈ ನೆಲೆಗಳ ಹಿನ್ನಲೆಯಿಂದ ಜಯಂತ ಕಾಯ್ಕಿಣಿಯವರ ಕಥಾಸಂಕಲನಗಳನ್ನು ಅಧ್ಯಯನ ಮಾಡಬೇಕೆಂದಿದ್ದೇನೆ. ಈ ಅಧ್ಯಯನದ ವಿನ್ಯಾಸವು ಈ ಕೆಳಕಂಡಂತಿದೆ.

೧. ಜಯಂತಕಾಯ್ಕಿಣಿ ನಡೆದು ಬಂದ ಹಾದಿ.

೩. ಕನ್ನಡ ಕಥಾ ಸಾಹಿತ್ಯಕ್ಕೆ ಜಯಂತರ ಕೊಡುಗೆ.

೪. ಜಯಂತಕಾಯ್ಕಿಣಿ ಕಥೆಗಳ ನೆಲೆಗಳು.

೫. ಕಥಾವಸ್ತು, ವಿನ್ಯಾಸ ಮತ್ತು ಶೈಲಿ

೬. ಸಮರೋಪ.

ಅಧ್ಯಾಯ ೨

ಜಯಂತ ಕಾಯ್ಕಿಣಿ ನಡೆದು ಬಂದ ಹಾದಿ

ಜಯಂತ ಕಾಯ್ಕಿಣಿ ೧೪ ಜನವರಿ ೧೯೫೫ ರಂದು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಲ್ಲಿ ಜನಿಸಿದರು.ಇವರ ತಂದೆ ವಿಚಾರವಂತ ಸಾಹಿತಿ ಗೌರೀಶ್ ಕಾಯ್ಕಿಣಿಯವರು.ವೃತ್ತಿಯಲ್ಲಿ ಪ್ರೌಢ ಶಾಲಾಶಿಕ್ಷಕರು.ತಾಯಿ ಶಾಂತಾ ಕಾಯ್ಕಿಣಿ ಇವರು ಕೂಡ ಪ್ರೌಢಶಾಲಾ ಶಿಕ್ಷಕಿ ಮತ್ತು ಸಮಾಜ ಸೇವಕಿಯಾಗಿ ದುಡಿದವರು.ಪ್ರೈಮರಿ ಮತ್ತು ಹೈಸ್ಕೂಲ್ ಶಾಲಾ ಶಿಕ್ಷಣವನ್ನು ಗೋಕರ್ಣ 'ಭದ್ರಕಾಳಿ' ವಿದ್ಯಾಸಂಸ್ಥೆಯಲ್ಲಿ ಪಡೆದುಕೊಂಡರು.ಅನಂತರ ಎಂ.ಎಸ್ಸಿ ಬಯೋ ಕೆಮಿಸ್ಟ್ರಿಯನ್ನು ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಚಿನ್ನದ ಪದಕಗಳಿಸುವುದರೊಂದಿಗೆ ೧೯೭೬ರಲ್ಲಿ ಪೂರೈಸಿದರು.ಜಯಂತರ ಬರಹದ ಆಸಕ್ತಿ ೧೯೭೦ ರಿಂದಲೇ ಶುರುವಾಗಿದ್ದು, ಆಗಲೇ ಕವಿ, ಸಣ್ಣ ಕಥೆಗಳ ಬರಹಗಾರ, ನಾಟಕಕಾರ ಮತ್ತು ಅಂಕಣಕಾರ ಹೀಗೆ ನಾನಾ ರೂಪಧಾರಿ. ಕನ್ನಡ ಸಾಹಿತ್ಯದಲ್ಲಿ ಮೇರು ಪ್ರಶಸ್ತಿಯೆಂದು ಹೆಸರಾದ 'ಕರ್ನಾಟಕ ಸಾಹಿತ್ಯ ಅಕಾಡೆಮಿ'ಯ ಪುರಸ್ಕಾರವು ಜಯಂತರಿಗೆ ೧೯ನೇ ವಯಸ್ಸಿನಲ್ಲಿಯೇ ರಂಗದಿಂದೊಂದಿಷ್ಟು ದೂರ, ಎಂಬ ಕವನ ಸಂಕಲನಕ್ಕೆ ೧೯೭೪ರಲ್ಲಿ ಪ್ರಥಮಬಾರಿಗೆ ದೊರೆಕಿತು, ಅಂಥ ಅಭಿಜಾತ ಪ್ರತಿಭೆ ಜಯಂತರದು.ತಂದೆಯೇಅವರಿಗೆ ಆದರ್ಶಪ್ರಾಯ ಅವರೊಂದಿಗೆ ಯಶವಂತ ಚಿತ್ತಾಲರೂ ಸಹ ಜಯಂತರ ಮೇಲೆ ಬಹಳ ಪ್ರಭಾವ ಬೀರಿರುವರು.

ಕನ್ನಡ ಸಾಹಿತ್ಯ ಲೋಕದಲ್ಲಿ ಡಿ.ವಿ.ಜಿ– ಬಿ.ಜಿ.ಎಲ್.ಸ್ವಾಮಿ ಮತ್ತು ಕುವೆಂಪು–ತೇಜಸ್ವಿ ಇವರಂತೆಯೇ ಗೌರೀಶ– ಜಯಂತ ಕಾಯ್ಕಿಣಿಯವರದ್ದು ತಂದೆ – ಮಗನ ಅಪರೂಪದ ಜೋಡಿ. ಪ್ರತಿಭಾವಂತ ಸಾಹಿತಿಯ ಮಗನಾಗಿ ಹುಟ್ಟಿದರೂ ಅವರ ನೆರಳಿನಿಂದ ಹೊರಬಂದು ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಅಸ್ತಿತ್ವವನ್ನು ದಾಖಲಿಸುವಲ್ಲಿ ತೇಜಸ್ವಿಯವರಂತೆಯೇ ಜಯಂತರೂ ಕೂಡ ಯಶಸ್ವಿಯಾದವರು.ಜಯಂತರು ಬಾಲ್ಯದಿಂದಲ್ಲೇ ಸಾಹಿತ್ಯಕ್ಕಿಂತಲೂ, ತಂದೆಯವರು ಕಲಿಸಿದ ಬದುಕಿನ ಪಾಠದಲ್ಲಿ ಹೆಚ್ಚು ಆಸಕ್ತರಾಗಿದ್ದರು. ಬದುಕಿನ ಪ್ರತಿಯೊಂದು ಬಿಡಿಗಳನ್ನು ಸೂಕ್ಷ್ಮವಾಗಿ ಗ್ರಹಿಸುತ್ತಾ, ಸಹಜತೆಯಿಂದ ಪರಿಪೂರ್ಣತೆಯಿಂದ ಅದನ್ನು ಆಳವಾಗಿ ಅನುಭವಿಸುವತ್ತ ಅವರ ಗಮನವಿತ್ತು ಗೆಳೆಯರೊಡನೆ ಕೂಡಿ ಬಿಡುವಿನ ವೇಳೆಯಲ್ಲಿ ಗೋಕರ್ಣದ ಊರಿಡಿ ಪಸರಿಸಿರುವ ದೇವಸ್ಥಾನಗಳಲ್ಲಿ ಆಟವಾಡುವುದು ಬಾಲ್ಯಸಹಜ ಕ್ರಿಯೆಯಾಗಿತ್ತು. ಕಲ್ಪನಾಟೂರಿಂಗ್ ಟಾಕೀಸ್‌ನಲ್ಲಿ ಸಿನೆಮಾ ನೋಡುವುದು, ಶಿವರಾತ್ರಿಯಲ್ಲಿ ಊರಿಗೆ ಬರುತ್ತಿದ್ದ ಕಂಪನಿ ನಾಟಕಗಳನ್ನೆಲ್ಲವನ್ನೂ ತಪ್ಪದೆ ವೀಕ್ಷಿಸುವುದು, ತಂದೆಯೊಡನೆ

ಯಕ್ಷಗಾನ–ಹರಿಕಥೆಗಳಿಗೆ ಹೋಗುವುದು, ಯಾತ್ರಾಸ್ಥಾನವಾದ ಗೋಕರ್ಣಕ್ಕೆ ಬರುತ್ತಿದ್ದ ವೈವಿಧ್ಯಮಯ ಜನರ ಚಲನವಲನಗಳನ್ನು ಕುತೂಹಲದಿಂದ ಗಮನಿಸುವುದು, ಗುಡ್ಡಗಳಲ್ಲಿ, ಸಮುದ್ರ ತೀರದಲ್ಲಿ ಮನಸೋಕ್ತವಾಗಿ ಸುತ್ತಾಡುವುದು, ಇವೆಲ್ಲ ಅವರ ಆಸಕ್ತಿಯ ಕೇಂದ್ರಗಳಾಗಿದ್ದವು. ಇನ್ನು ಶಾಲೆಗೆ ರಜೆ ಬಂದ ಕೊಡಲೇ ತದಡಿಯಲ್ಲಿರುವ ಸೋದರಮಾವನ ಮನೆಗೆ ಹೋಗುವುದೆಂದರೆ ಜಯಂತರಿಗೆ ಬಹಳ ಇಷ್ಟದ ವಿಷಯವಾಗಿತ್ತು.ತದಡಿಯ ಪರಿಸರ, ಆಪ್ತರೊಂದಿಗಿನ ಒಡನಾಟ ಅವರಿಗೆ ಬೇರೆಯೇ ಆದ ಅನುಭವಲೋಕವನ್ನು ಪರಿಚಯಿಸುತ್ತಿದ್ದವು.

ಶಾಲೆ ಮುಗಿಸಿ ಕುಮಟಾದ ಕಾಲೇಜಿಗೆ ಹೋದಾಗ ಜಯಂತರ ಬದುಕು ಹೊಸ ಪಲ್ಲಟಗಳನ್ನು ಕಂಡಿತು. ಸ್ವತಃ ಜಯಂತರೇ ಹೇಳಿಕೊಳ್ಳುವಂತೆ ಅವರ ಬದುಕು ಮೂರು ಆಘಾತಗಳನ್ನು ಎದುರಿಸಬೇಕಾಯಿತು– ಮೊತ್ತ ಮೊದಲಿಗೆ ಸಣ್ಣ ಊರಿನಿಂದ (ಅಂದರೆ ಒಂದು ಬಸ್ಸು ನಿಲ್ಲುವ ಬಸ್‌ಸ್ಟಾಂಡ್ ಇರುವ ಊರಿನಿಂದ), ದೊಡ್ಡ ಊರಿಗೆ ಸ್ಥಾನಾಂತರ (ಹಲವು ಬಸ್ಸುಗಳು ನಿಲ್ಲುವ ಬಸ್‌ಸ್ಟಾಂಡ್ ಇರುವ ಊರು), ಕನ್ನಡ ಮಾಧ್ಯವದಿಂದ ಇಂಗ್ಲಿಷ್ ಮಾಧ್ಯಮಕ್ಕೆ ಸೇರ್ಪಡೆಗೊಂಡದ್ದು, ಇನ್ನು ಮೂರನೆಯದಾಗಿ ಮನೆಯಿಂದ ದೂರದ ಹಾಸ್ಟೆಲ್ ವಾಸ ಪ್ರಾರಂಭವಾದದು. ಹೀಗೆ ಹೊಸ ಊರು, ಹೊಸಜಾಗ, ಹೊಸ ಪರಿಸರ, ಹೊಸ ಮಿತ್ರವರ್ಗ ಎಂದು ಹೊಂದಾಣಿಕೆ ನಡೆಸಲು ಹೆಣಗಾಡುತ್ತಿದ್ದಾಗ ಅಸೌಖ್ಯದ ಕಾರಣ ಮನೆಯ ನೆನಪು ತೀವ್ರವಾಗಿಮನೆಗೆ ಬಂದರು. ಮೆನೆಯಲ್ಲಿರುವಾಗ ತಂದೆಯವರಿಂದ ಮುನ್ನುಡಿ ಬರೆಯಿಸಲು ಬಂದಿದ್ದ ಆ ಕಾಲದ ಉತ್ತರ ಕನ್ನಡ ಜಿಲ್ಲೆಯ ಪ್ರಸಿದ್ಧ ನವ್ಯ ಕವಿ ಜಿ,ಎಸ್. ಅವಧಾನಿಯವರ ಕವನಸಂಕಲನ 'ಬೆಂಕಿಬಳ್ಳಿ' ಓದುವ ಸದವಕಾಶ ಲಭಿಸಿತು. ಈ ಕವನಸಂಕಲನ ಓದಿನಿಂದ ಜಯಂತರಿಗೆ ಕವನಗಳನ್ನು ಬರೆಯಲು ಆಸಕ್ತಿ ಮೂಡಿತು.೧೯೭೧ರಲ್ಲಿ ಬರೆದ 'ಬಸಳೆ' ಎನ್ನುವ ಮೊದಲ ಕವನವು 'ಸಾಕ್ಷಿ' ಪತ್ರಿಕೆಯಲ್ಲಿ ಪ್ರಕಟಗೊಂಡಿತು.ಇಂತು ಕವನಗಳನ್ನು ಬರೆಯಲಾರಂಭಿಸಿದ ಜಯಂತರ ಕವನಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡು ಅವರೊಬ್ಬ ಕವಿಯೆಂದು ಗಮನಸಳೆಯುವಷ್ಟರ ಮಟ್ಟಿಗೆ ಮುಂದುವರೆಯಿತು.ಜಯಂತರ ಪ್ರಥಮ ಕವನಸಂಕಲನ 'ರಂಗದಿಂದೊಂದಿಷ್ಟು ದೂರ' ಕ್ಕೆ ೧೯೭೪ಳ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರಶಸ್ತಿ ದೊರಕಿದ್ದು ಸಾಧಾರಣದ ಸಂಗತಿಯೇನಲ್ಲ. ಯಾಕೆಂದರೆ ಆಗ ಅವರಿಗೆ ಕೇವಲ ಹತ್ತೊಂಬತ್ತುವರ್ಷ ಪ್ರಾಯವಾಗಿತ್ತು.

ಸಾಹಿತ್ಯದ ಕುರಿತಾಗಿ ಜಯಂತರಲ್ಲಿ ಒಲವು ಮೂಡಿಸುವಲ್ಲಿ, ಪ್ರಭಾವ ಬೀರುವಲ್ಲಿ ಗೋಪಾಲಕೃಷ್ಣ ಅಡಿಗರು ಆ ಕಾಲದಲ್ಲಿ ನೆಡೆಸುತ್ತಿದ್ದ 'ಸಾಕ್ಷಿ' ಎನ್ನುವ ಸಾಹಿತ್ಯಿಕ ಪತ್ರಿಕೆಯೂ ಪ್ರಮುಖ ಪಾತ್ರವನ್ನು ವಹಿಸಿತು.ವಿದ್ಯಾರ್ಥಿ ಅವಸ್ಥೆಯಲ್ಲಿಯೇ ಕವನಗಳನ್ನು ಬರೆಯುತ್ತಾ ಕನ್ನಡ ಸಾಹಿತ್ಯಲೋಕ್ಕಕೆ ಪದಾರ್ಪಣೆ

ಮಾಡಿದ ಜಯಂತ ಕಾಯ್ಕಿಣಿ ಬಹು ಬೇಗನೆ ಕಥೆಗಳನ್ನೂ ಬರೆದು ಪತ್ರಿಕೆಗಳಿಗೆ ಕಳುಹಿಸಲಾರಂಭಿಸಿದರು.ಗೊತ್ತಿದುದ್ದನ್ನೇ ಹೇಳಲು ಕಥೆಯೇ ಬೇಕೆಂದಿಲ್ಲ. ಬೇರೆ ಯಾವ ಮಾಧ್ಯಮಕ್ಕೂ ದಕ್ಕದ ಬದುಕಿನ ಮಗ್ಗುಲುಗಳನ್ನು ಗ್ರಹಿಸುವ ತಾಕತ್ತು ಕಥೆಗೆ ಇದೆ ಎನ್ನುವುದರಲ್ಲಿಯೇ ಅದರ ವೈಶಿಷ್ಟ್ಯ ಹಾಗೂ ವಿಶೇಷತ್ವಗಳಿವೆ. ಜಯಂತ ಕಾಯ್ಕಿಣಿಯವರು ಕಾವ್ಯದ ಬೊಗಸೆಯಲ್ಲಿ ಹಿಡಿಯಲಾರದ ಬದುಕಿನ ವಿನ್ಯಾಸಗಳನ್ನು ವಿಸ್ತೃತವಾಗಿ ಪರಿಣಾಮಕಾರಿಯಾಗಿ ಚಿತ್ರಿಸಲು ಹಾಗೂ ಅದನ್ನು ಹೆಚ್ಚಿನ ಓದುಗರತ್ತ ತಲುಪಿಸಲು ಕಥಾಪ್ರಕಾರವನ್ನು ಆರಿಸಿದರು. 'ಕಾಯೋ ಆಟ' 'ದ್ವೀಪಗಳು' ಕೆಥೆಗಳನ್ನು ಮೊದಲು ಬರೆದಿದ್ದರೂ 'ಇದ್ದಾಗ ಇದ್ದಾಂಗ' ಕಥೆಯು ತಮ್ಮನ್ನು ಕಥೆಗಾರನೆಂದು ಪರಿಚಯಿಸುವಲ್ಲಿ ಯಶಸ್ವಿಯಾಯಿತೆಂದು ಜಯಂತರೇ ಒಪ್ಪಿಕೊಳ್ಳುತ್ತಾರೆ.ಗೋಕರ್ಣದಲ್ಲಿರುವಾಗಲೇ ಈ ಕಥೆಯನ್ನು ಬರೆದು ೧೯೭೬ರ ಉದಯವಾಣಿ ದೀಪಾವಳಿ ಕಥಾಸ್ಪರ್ಧೆಗೆ ಕಳುಹಿಸಿ ಉದ್ಯೋಗವನ್ನರಸುತ್ತಾ ಮುಂಬಯಿಗೆ ಬಂದ ಜಯಂತರಿಗೆ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಸುದ್ದಿ ಸಿಕ್ಕಿ, ಇನ್ನಷ್ಟು ಬರೆಯಲು ಹೊಸಹುರುಪು ಲಭಿಸಿತು.

ಕುಮಟಾದಲ್ಲಿ ಪದವಿ ದೊರೆತ ಮೇಲೆ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಯೋಕೆಮಿಸ್ಟ್ರಿಯಲ್ಲಿ ಸ್ನಾತಕೋತ್ತರ ವಿದ್ಯಾಭ್ಯಾಸವನ್ನು ಮುಗಿಸಿದರು.ಧಾರವಾಡದಲ್ಲಿದ್ದ ಎರಡು ವರ್ಷ ಕಾಲ ಸಾಕಷ್ಟು ಪ್ರಮಾಣದಲ್ಲಿ ಸಾಹಿತ್ಯಾಸಕ್ತಿಯನ್ನು ಮೈಗೂಡಿಸಿಕೊಂಡ ಜಯಂತರು ೧೯೭೬ರಲ್ಲಿ ಕೆಲಸವನ್ನು ಹುಡುಕುತ್ತಾ ಮುಂಬಯಿಗೆ ಬಂದರು.ಮುಂಬಯಿಯಲ್ಲಿ ಪ್ರಾಕ್ಟರ್ ಆ್ಯಂಡ್ ಗ್ಯಾಂಬಲ್, ಹೆಕ್ಸ್ಟ್ ಮುಂತಾದ ಪ್ರಸಿದ್ಧ ಕಂಪನಿಗಳಲ್ಲಿ ಫಾರ್ಮಾ ಪ್ರೊಡಕ್ಷನ್ ಎಕ್ಸಿಕ್ಯೂಟಿವ್ ಆಗಿ ೧೯೭೭ರಿಂದ ೧೯೯೭ರ ತನಕ ಸುಮಾರು ೨೩ ವರ್ಷಗಳ ಕಾಲ ಕೆಲಸ ಮಾಡಿದರು.೧೯೯೭ ರಿಂದ ೧೯೯೮ರ ವರೆಗೆ ಮುಂಯಿಯಲ್ಲಿಯೇ ಸ್ವತಂತ್ರ ಬರಹಗಾರಗಾಗಿ ಲಿಂಟಾಸ್, ಮುದ್ರಾ ಮತ್ತು ತ್ರಿಕಾಯ ಜಾಹೀರಾತು ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.ಇದೇ ಸಮಯದಲ್ಲಿ ಅಂದರೆ ೧೯೯೭ರಲ್ಲಿ ಚೀನಾ ದೇಶಕ್ಕೆ ಕಳಿಸಲ್ಪಟ್ಟ ಭಾರತೀಯ ಲೇಖಕರ ಪ್ರತಿನಿಧಿಯಾಗಿ ಕನ್ನಡದವರಾದ ಜಯಂತ ಕಾಯ್ಕಿಣಿಯವರೂ ಕೂಡ ಆಯ್ಕೆಗೊಂಡಿದ್ದರು ಎನ್ನುವುದು ಅಭಿಮಾನದ ಸಂಗತಿ. ಮುಂದೆ ೧೯೯೭ರಿಂದ ೧೯೯೯ರ ಕಾಲಾವಧಿಯಲ್ಲಿ ಈಟಿವಿ ಕನ್ನಡವಾಹಿನಿಯ ಕಾರ್ಯಕ್ರಮ ಸಮಿತಿಯ ಸದಸ್ಯರಾಗಿ, ರಾಮೋಜಿ ಫಿಲ್ಮ್ ಸಿಟಿ, ಹೈದರಾಬಾದ್‌ನಲ್ಲಿ ಕಾರ್ಯಭಾರವನ್ನು ಮುಂದುವರಿಸಿದರು.

ಪ್ರಾಕ್ಟರ್ ಆ್ಯಂಡ್ ಗ್ಯಾಂಬಲ್‌ನಲ್ಲಿ ಉದ್ಯೋಗದಲ್ಲಿದ್ದಾಗ, ಜಯಂತ ಕಾಯ್ಕಿಣಿಯವರು ತಮ್ಮ ಸಹೋದ್ಯೋಗಿಯಾಗಿದ್ದ ಸ್ಮಿತಾ ಅವರನ್ನು ಮೆಚ್ಚಿ ೧೭ ನವೆಂಬರ್,೧೯೮೫ರಲ್ಲಿ ಮದುವೆಯಾದರು, ಸ್ಮಿತಾ ಅನಾಲಿಟಿಕಲ್ ಕೆಮಿಸ್ಟ್ರಿಯಲ್ಲಿ ಚಿನ್ನದ ಪದಕ ಗಳಿಸಿದ ಸ್ನಾತಕೋತ್ತರ ಪದವೀಧರೆ.ಜಯಂತರ ಮಾತಿನಲ್ಲಿ

ಹೇಳಬೇಕಾದರೆ ಗೃಹರೂಪಿಣಿ, ಮಿತಭಾಷಿ, ಸೌಮ್ಯ ಸ್ವಭಾವದ ಸ್ಮಿತಾ ಕಾಯ್ಕಿಣಿ ಅವರು, ಜಯಂತ ಕಾಯ್ಕಿಣಿಯವರ ಯಶಸ್ಸಿನ ಹಾಗೂ ಸಾಧನೆಗಳ ಹಿಂದೆ ಸದ್ದಿಲ್ಲದ ಪ್ರೇರಣೆ ನೀಡುವ ವ್ಯಕ್ತಿ ಹಾಗೂ ಶಕ್ತಿ. ಜಯಂತ ಕಾಯ್ಕಿಣಿ ಅವರಿಗೆ ಇಬ್ಬರು ಮಕ್ಕಳು. ಸೃಜನಾ ಹಾಗೂ ಋತ್ವಿಕ್.ಸೃಜನಾ ಪ್ರಾಥಮಿಕ ಹಂತದ ಶಾಲಾ ಶಿಕ್ಷಣವನ್ನು ಮುಂಬಯಿಯಲ್ಲಿ ಮುಗಿಸಿದಳು. ನಂತರ ಬೆಂಗಳೂರಿನ ಆರ್.ವಿ.ಕಾಲೇಜಿನಲ್ಲಿ ಬಿ.ಆರ್ಕ್.ನಲ್ಲಿ ಪದವಿ ಹಾಗೂ ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಿಂದ ಕಲೆ ಮತ್ತು ಸೌಂದರ್ಯಶಾಸ್ತ್ರದಲ್ಲಿ ೨೦೧೨ರಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಳು. ಸಧ್ಯ ಹಾಲೆಂಡ್ ಆ್ಯಮ್‌ಸ್ಟರ್ ಡ್ಯಾಮ್‌ನಲ್ಲಿ 'ಕಲಾರಸಗ್ರಹಣ' ಹಾಗೂ ಕ್ಯೂರೇಟಿಂಗ್‌ನ ತರಬೇತಿಯಲ್ಲಿ ಪಾಲ್ಗೊಂಡ ಏಕೈಕ ಭಾರತೀಯ ವಿದ್ಯಾರ್ಥಿನಿ ಈಕೆ.ಬರವಣಿಗೆ, ಜಾಗತಿಕ ಸಿನೆಮಾ, ಸಂಗೀತ, ನೃತ್ಯ ಇವಳ ಆಸಕ್ತಿಯ ವಿಷಯಗಳು.ಒಡಸ್ಸಿ ನೃತ್ಯ ಪ್ರವೀಣೆ, ಗುರು ಕ್ಷಮಾರಾವ್ ಅವರ ಮಾರ್ಗದರ್ಶನದಲ್ಲಿ ರಂಗಪ್ರವೇಶವನ್ನು ಮಾಡಿದ ಸೃಜನಾ ನೃತ್ಯ ಪ್ರದರ್ಶನಗಳನ್ನು ಸಹ ನೀಡುತ್ತಾಳೆ.ಮಗ ಋತ್ವಿಕ್ ಬೆಂಗಳೂರಿನ ಬಿ.ಎಮ್.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಮುಗಿಸಿದ್ದಾನೆ. ಗಿಟಾರ್ ವಾದನವನ್ನು ಕಲಿತಿರುವ ಋತ್ವಿಕ್‌ಗೆ ಕೂಡ ಅಕ್ಕ ಸೃಜನಾಳಂತೆ ಜಾಗತಿಕ ಸಿನೆಮಾ ಹಾಗೂ ಸಂಗೀತದಲ್ಲಿ ಅಪಾರ ಆಸಕ್ತಿ.

ಹೈದರಾಬಾದಿನ ಈಟಿವಿಯವರು ಆರಂಭಿಸಬೇಕಿದ್ದ ಕನ್ನಡ ವಾಹಿನಿಯ ಸಲಹಾ ಸಮಿತಿಯ ಸದಸ್ಯರಾಗಲು ಕರೆ ಬಂದಾಗ ಜಯಂತ್ ಕಾಯ್ಕಿಣಿಯವರು ೨೦೦೦ರಲ್ಲಿ ಮುಂಬಯಿಯಿಂದ ಬೆಂಗಳೂರಿಗೆ ಬಂದು ನೆಲೆಸಿದರು. ನಂತರ ಅವರು ವಿಜಯ ಸಂಕೇಶ್ವರ್ ಹಾಗೂ ಸಂತೋಷ್ ಗುಲ್ವಾಡಿಯವರ ಒತ್ತಾಯಕ್ಕೆ ಮಣಿದು 'ಭಾವನಾ' ಮಾಸ ಪತ್ರಿಕೆಯ ಸಂಪಾದಕರಾಗಿ ಒಂದೂವರೆ ವರ್ಷ ಕಾಲ ಸೇವೆ ಸಲ್ಲಿಸಿದರು.ಈ ಎಲ್ಲ ಗಡಿಬಿಡಿಯಲ್ಲಿ 'ಹಾಯ್ ಬೆಂಗಳೂರು' ಪತ್ರಿಕೆಗೆ ಅಂಕಣವನ್ನೂ ಬರೆದರು, ಸೃಜನಾತ್ಮಕ ಹಾಗೂ ಕ್ರಿಯಾಶೀಲ ಬರವಣಿಗೆಗಾಗಿ ಜಯಂತರಿಗೆ ೨೦೦೧ರ 'ಋಜುವಾತು ಫೆಲೋಶಿಪ್' ದೊರಕಿತು.'ಭಾವನಾ ಪತ್ರಿಕೆ ನಿಂತ ಮೇಲೆ ಸದ್ಯಕ್ಕಂತೂ ಸ್ವತಂತ್ರರಾಗಿ ವೈವಿಧ್ಯಪೂರ್ಣಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.ಮುಂಬಯಿಯಲ್ಲಿರುವಾಗ ಕೇವಲ ಬರಹಗಾರರಾಗಿದ್ದ ಜಯಂತರು ಬೆಂಗಳೂರಿಗೆ ಬಂದ ಮೇಲೆ ಪ್ರಕಟಗೊಂಡ ತಮ್ಮ ಬಹುಮುಖಿ ಸೃಜನಶೀಲತೆಯಿಂದ ಅಭಿಮಾನಿಗಳನ್ನು ಬೆರಗುಗೊಳಿಸುತ್ತಾ ಬಂದಿದ್ದಾರೆ.ಕೇವಲ ಓದುಗರ ಮಟ್ಟಿಗೆ ಸೀಮಿತವಾಗಿದ್ದ ಅವರ ಅಭಿಮಾನಿಗಳ ಸಂಖ್ಯೆ ಇಂದು ಕನ್ನಡ ಬಲ್ಲ ಪ್ರತಿಯೊಂದು ಮನಸ್ಸನ್ನು ಕೂಡ ಒಳಗೊಂಡಿದೆ ಎನ್ನುವುದು ನಿಜಕ್ಕೂ ವಿಶೇಷವಾದ ಸಂಗತಿ.

ಕನ್ನಡ ಚಿರಸ್ಮರಣೀಯ ಪ್ರತಿಭೆಗಳ ಕುರಿತು ಈಟಿವಿಯವರು ಮಾಡಿದ ತಲಾ ೩೦ ಕಂತುಗಳ 'ನಮಸ್ಕಾರ' ಎಂಬ ವಿಶಿಷ್ಟವಾದ ಸಂವಾದ ಕಾರ್ಯಕ್ರಮದಲ್ಲಿ ಜಯಂತ ಕಾಯ್ಕಿಣಿಯವರು ಸಂದರ್ಶಕರಾಗಿ ಪ್ರೇಕ್ಷಕರ ಅಪಾರ ಮೆಚ್ಚುಗೆಯನ್ನು ಗಳಿಸಿದರು. 'ನಮಸ್ಕಾರ' ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಕುವೆಂಪು ಕುರಿತಾಗಿ 'ರಸಋಷಿಗೆ ನಮಸ್ಕಾರ'; ಶಿವರಾಮ ಕಾರಂತರ ಕುರಿತಾಗಿ 'ಕಡಲತೀರದ ಭಾರ್ಗವನಿಗೆ ನಮಸ್ಕಾರ' ಹಾಗೂ ಕನ್ನಡ ಜನತೆಯ ಕಣ್ಮಣಿ ಡಾ: ರಾಜ್‌ಕುಮಾರ್ ಅವರ ಕುರಿತು 'ನಟಸಾರ್ವಭೌಮನಿಗೆ ನಮಸ್ಕಾರ' ಎಂದು, ಕನ್ನಡದ ವರ ಕವಿ ಬೇಂದ್ರೆಯವರ ಕುರಿತು 'ಬೇಂದ್ರೆ ಮಾಸ್ತರರಿಗೆ ನಮಸ್ಕಾರ' ಹೀಗೆ ಕನ್ನಡದ ನಾಲ್ಕು ಮೇರು ವ್ಯಕ್ತಿತ್ವದ ಪರಿಚಯವನ್ನು ಮಾಡಿ ಜಯಂತರು ಕನ್ನಡಿಗರ ಮನಸ್ಸನ್ನು ತಟ್ಟಿದರು. 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದಲ್ಲಿ ಸುಪ್ರಸಿದ್ದ ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ಹಾಗೂ ನಾದಬ್ರಹ್ಮ ಎಂದೇ ಪರಿಚಿತರಾಗಿರುವ ಕನ್ನಡದ ಪ್ರಖ್ಯಾತ ಸಂಗೀತಕಾರ ಹಂಸಲೇಖ ಇವರೊಂದಿಗೆ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ ಮೇಲಂತೂ ಜಯಂತ ಕಾಯ್ಕಿಣಿ ಅವರು ಕನ್ನಡ ಜನಮನದಲ್ಲಿ ಶಾಶ್ವತವಾಗಿ ಮನೆ ಮಾಡಿದ್ದಾರೆ.ಜಯಂತ ಕಾಯ್ಕಿಣಿಯವರು ಚಿತ್ರಕಥೆ-ಸಂಭಾಷಣೆ (ದ್ವೀಪ, ಪೂರ್ವಾರ, ಚಿಗುರಿದ ಕನಸು, ರಮ್ಯಚೈತ್ರಕಾಲ), ಚಿತ್ರಗೀತೆ (ಮುಂಗಾರುಮಳೆ, ಮಿಲನ, ಅರಮನೆ, ಗಾಳಿಪಟ ಇತ್ಯಾದಿ) ಬರೆದು ಪ್ರಸಿದ್ಧಿಯನ್ನು ಹಾಗೂ ಹಲವಾರು ಪ್ರಶಸ್ತಿಗಳನ್ನೂ ಪಡೆದಿದ್ದಾರೆ. ಕನ್ನಡ ಚಲನಚಿತ್ರಗಳಿಗೆ ಸಾಹಿತ್ಯಿಕ ಮೌಲ್ಯಗಳಿಂದ ಕೂಡಿದ ಭಾವಪೂರ್ಣ ಹಾಗೂ ಅರ್ಥಪೂರ್ಣ ಹಾಡುಗಳನ್ನು ಬರೆದು ಕನ್ನಡ ಚಿತ್ರಗೀತೆಗಳಿಗೆ ಪುನರ್ಜನ್ಮವನ್ನು ನೀಡಿದ ಶ್ರೇಯಸ್ಸು ಇವರದ್ದು.

ಕವಿಯಾಗಿ, ಕತೆಗಾರರಾಗಿ, ನಾಟಕಕಾರರಾಗಿ, ಅಂಕಣಕಾರರಾಗಿ ಅವರ ಪ್ರಕಟಿತ ಕೃತಿಗಳು ಇಂತಿವೆ.

ಕವಿತಾ ಸಂಗ್ರಹಗಳು:ರಂಗದಿಂದೊಂದಿಷ್ಟು ದೂರ ೧೯೭೧), ಕೋಟಿತೀರ್ಥ(೧೯೮೨), ಶ್ರಾವಣ ಮಧ್ಯಾಹ್ನ(೧೯೮೭), ನೀಲಿ ಮಳೆ(೧೯೯೭), ಒಂದು ಜಿಲೇಬಿ(೨೦೦೮)

ಕಥಾ ಸಂಕಲನಗಳು: ತೆರೆದಷ್ಟೇ ಬಾಗಿಲು (೧೯೮೨), ಗಾಳ(೧೯೮೨), ದಗಡೂ ಪರಬನ ಅಶ್ವಮೇಧ(೧೯೮೯), ಅಮೃತಬಳ್ಳಿ ಕಷಾಯ (೧೯೯೬), ಬಣ್ಣದ ಕಾಲು (೧೯೯೯), ತೂಫಾನ್ ಮೇಲ್ (೨೦೦೫), ಚಾರ್ ಮಿನಾರ್ (೨೦೧೨).

ನಾಟಕಗಳು: ಸೇವಂತಿ ಪ್ರಸಂಗ (೧೯೯೫), ಜತೆಗಿರುವನು ಚಂದಿರ (೨೦೦೧), ಇತಿ ನಿನ್ನ ಅಮೃತಾ (೨೦೦೩), ಆಕಾಶ ಬುಟ್ಟಿ (೨೦೦೪).

ಅಂಕಣ ಬರಹಗಳು: ಬೊಗಸೆಯಲ್ಲಿ ಮಳೆ (೨೦೦೪), ಶಬ್ದತೀರ (೨೦೦೬), ಟೂರಿಂಗ್ ಟಾಕೀಸ್ (೨೦೧೩).

'ಅಮೃತಬಳ್ಳಿ ಕಷಾಯ' ಕಥಾಸಂಕಲವನ್ನು ಅಮೇರಿಕಾದಲ್ಲಿ ನೆಲೆಸಿರುವ ಡಾ.ವಿಶ್ವನಾಥ ಹುಲೀಕಲ್ ಮತ್ತು ಅವರ ಸಂಗಡಿಗರು ಇಂಗ್ಲಿಷಿಗೆ ಅನುವಾದ ಮಾಡಿ, ಅಮೆರಿಕೆಯ 'ಸಾಹಿತ್ಯ ಗೋಷ್ಠಿ' ಎಂಬ ಸಂಸ್ಥೆಯಿಂದ 'Dots and lines' ಎಂಬ ಹೆಸರಿನಲ್ಲಿ ೨೦೦೪ರಲ್ಲಿ ಪ್ರಕಟಗೊಳಿಸಿದ್ದಾರೆ.ಜಯಂತ್ ಕಾಯ್ಕಿಣಿಯವರ ಹಲವಾರು ಬಿಡಿ ಕಥೆಗಳು ಮರಾಠಿ ಭಾಷೆಗೆ ಅನುವಾದಗೊಂಡು ಮರಾಠಿ ದೀಪಾವಳಿ ಸಂಚಿಕೆಗಳಲ್ಲಿ ಪ್ರಕಟಗೊಂಡು ಮೆಚ್ಚುಗೆಯನ್ನು ಪಡೆದಿವೆ.

ಮುಂಬಯಿಯ ಬದುಕು ಜಯಂತರ ಅನುಭವ ಕ್ಷಿತಿಜವನ್ನು ವಿಸ್ತರಿಸಿತು.ಅವರ ಕಥೇ–ಕವನಗಳಿಗೆ ಹೊಸ ದಿಕ್ಕನ್ನು ತೋರಿಸಿತು.ಹೊಸ ಶೈಲಿ, ಹೊಸ ಭಾಷೆ, ಹೊಸ ವಸ್ತುಗಳನ್ನು ಒಳಗೊಂಡ ಜಯಂತರ ಸಾಹಿತ್ಯ ಅನನ್ಯತೆಯನ್ನು ಪಡೆಯಿತು.ಕನ್ನಡಕ್ಕೆ ನಗರ ಸಂವವೇದನೆಯನ್ನು ವಿಶಿಷ್ಟ ರೀತಿಯಿಂದ ಪರಿಚಯಿಸಿತು.ಮುಟ್ಟಿದ್ದೆಲ್ಲಾ ಚಿನ್ನ ಮಾಡುವ ಮಾಂತ್ರಿಕ ಶಕ್ತಿಯುಳ್ಳ ಜಯಂತ ಕಾಯ್ಕಿಣಿಯವರನ್ನು ಅರಸಿಕೊಂಡುಬಂದ ವೈವಿಧ್ಯಮಯ ಸಾಹಿತ್ಯಿಕ ಹಾಗೂ ಚಲನಚಿತ್ರ ಕ್ಷೇತ್ರದ ಪ್ರಶಸ್ತಿ–ಪುಸ್ಕಾರಗಳ ದೊಡ್ಡ ಪಟ್ಟಿಯೇ ಇದೆ.ನಾಸಿಕದಲ್ಲಿರುವ ಯಶವಂತರಾವ್ ಚವ್ಹಾಣ್ ಮುಕ್ತ ವಿದ್ಯಾಪೀಠವು ಆರಂಭಿಸಿದ ಅತ್ಯುತ್ತಮ ಭಾರತೀಯ ಲೇಖಕರಿಗೆ ಕೊಡ ಮಾಡುವ 'ಕುಸುಮಾಗ್ರಜ' ರಾಷ್ಟ್ರೀಯ ಸಾಹಿತ್ಯ ಪರುಸ್ಕಾರವನ್ನು (೨೦೧೦) ಪಡೆದ ಪ್ರಥಮ ಭಾರತೀಯ ಲೇಖಕ ಎನ್ನುವ ಹೆಗ್ಗಳಿಕೆಯೂ ಇವರದ್ದು.ಬಹುಮುಖ ಪ್ರತಿಭೆಯ ಇವರನ್ನು ತುಮಕೂರು ವಿಶ್ವವಿದ್ಯಾಲಯವು ಇತ್ತೀಚೆಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸನ್ಮಾನಿಸಿದೆ.

ಕವಿಯಾಗಿ ಜಯಂತ್ ಕಾಯ್ಕಿಣಿ

ವಿದ್ಯಾರ್ಥಿಯಾಗಿದ್ದಾಗಲೇ ಕಥೆ ಕವನಗಳ ರಚನೆಯನ್ನು ಆರಂಬಿಸಿದ್ದ ಜಯಂತರು ಮುಂಬೈಯಿಯಲ್ಲಿ ಯಶವಂತ ಚಿತ್ತಾಲ, ವ್ಯಾಸರಾಯ ಬಲ್ಲಾಳ ಮುಂತಾದ ಹಿರಿಯ ಲೇಖಕರ ಸಹವಾಸದಲ್ಲಿ ಪಳಗಿ, ಬಹು ಬೇಗ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧರಾದರು.ತಮ್ಮ ೧೯ನೇ ವಯಸ್ಸಿನಲ್ಲೇ ರಂಗದಿಂದೊಂದಿಷ್ಟು ದೂರ' ಎಂಬ ಕವನ ಸಂಕಲನವನ್ನು ೧೯೭೪ರಲ್ಲಿ ಪ್ರಕಟಿಸಿದರು. ೧೯೮೨ರಲ್ಲಿ 'ಕೋಟಿತೀರ್ಥ', ೧೯೮೭ರಲ್ಲಿ 'ಶ್ರಾವಣ ಮಧ್ಯಾಹ್ನ', ೧೯೯೭ರಲ್ಲಿ 'ನೀಲಿಮಳೆ', ೨೦೦೮ರಲ್ಲಿ 'ಒಂದು ಜಿಲೇಬಿ' ಎಂಬ ಜಯಂತರ ಕವನಸಂಕಲನಗಳು ಪ್ರಕಟಗೊಂಡಿವೆ.

ನವ್ಯವು ಉಚ್ಛ್ರಾಯದಲ್ಲಿದ್ದಾಗ ಮೊದಲ ಸಂಕಲನ ಹೊರಬಂದಿತು.ಅದುದರಿಂದ ನವ್ಯ ಮಾದರಿಯನ್ನು ಅನುಸರಿಸಿಕೊಂಡು ಬಂದಿರುವುದು ಅಚ್ಚರಿಯೇನಲ್ಲ. ಗೇಯತೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ, ಕಾವ್ಯತ್ಮಕ ಭಾಷೆ ಹಾಗೂ ನೇರ ನಿರೂಪಣೆ ಇವುಗಳನ್ನು ದೂರವಿಟ್ಟು ಜಯಂತರು ಸಾಮಾನ್ಯ ಜನರಾಡುವ ಭಾಷೆಯಲ್ಲಿಯೇ ಅವರ ಕ್ಷುಲ್ಲಕ ದೈನಿಕ ವಿವರಗಳಿಂದ ಕೂಡಿದ ಶಬ್ದ ಚಿತ್ರಗಳನ್ನು ನಿರ್ಮಿಸುತ್ತಾ ಹೋಗುತ್ತಾರೆ.ಕವನವು ಬೆಳೆದಂತೆಲ್ಲಾ ಈ ಶಬ್ದ ಚಿತ್ರಗಳೂ ಪರಸ್ಪರ ಸಂಬಂಧಗಳನ್ನು ಕಲ್ಪಿಸಿಕೊಳ್ಳುತ್ತಾ ರೂಪಕಗಳಾಗಿ ಬೆಳೆದು ವಿಶ್ವಭಾವನೆಗಳನ್ನು ಹಾಗೂ ಒಂದು ವಿಶಿಷ್ಟ ಅನುಭವವನ್ನು ಓದುಗರಿಗೆ ಕೊಡುತ್ತದೆ.ಅಮೂರ್ತ ವಿಚಾರಗಳಿಗೆ ಇಂದ್ರಿಯಗಮ್ಯ ವಿವರಗಳ ಮೂಲಕ ಮೂರ್ತರೂಪವನ್ನು ಕಲ್ಪಿಸಿ ಆ ಮೂಲಕ ವಿಚಾರಗಳನ್ನು ಓದುಗ ಅಥವಾ ಕೇಳುಗರಿಗೆ ತಲುಪಿಸಬೇಕು ಎನ್ನುವುದು ಕವಿಯಾಗಿ ಜಯಂತರು ಕೈಗೊಂಡ ವ್ರತ.ತಮ್ಮ ಅಂಕಣ ಬರಹವೊಂದರಲ್ಲಿ ಜಯಂತ ಕಾಯ್ಕಿಣಿಯವರು ತಮ್ಮ ಸಾಹಿತ್ಯ ರಚನಾಕ್ರಮ ಹಾಗೂ ಉದ್ದೇಶವನ್ನು ಹೀಗೆ ವಿವರಿಸುತ್ತಾರೆ "ಪ್ರತಿ ಅಂಕಣದಲ್ಲೂ ದೈನಿಕದ ಸಣ್ಣ ಪುಟ್ಟ ವಿವರಗಳ ಮೂಲಕ ಅನುಭವವೊಂದನ್ನು ಕಟ್ಟಿಕೊಡುವ ಪ್ರಯತ್ನವೊಂದು ನಡೆದಿದೆ.ಸಾಹಿತ್ಯ ಎಂದರೇನು?ಎಂದು ಯಾರಾದರೂ ಕೇಳಿದರೆ ಅದಕ್ಕೆ ಸ್ಪಷ್ಟ ಉತ್ತರ ನನ್ನ ಬಳಿ ಇಲ್ಲ. ಅದು ವಿಚಾರವನ್ನು ಅರ್ಥವನ್ನು ಅನುಭವವಾಗಿಸುವ ಒಂದು ನಮ್ರ ಯತ್ನ ಎಂದು ಸುಮಾರಾಗಿ ಹೇಳಬಹುದಾಗಿದೆ.ಈ ಮಾತುಗಳು ಅವರ ಅಂಕಣ ಬರಹಗಳಿಗೆ ಹೇಗೋ ಹಾಗೆ ಅವರ ಕವನಗಳಿಗೂ ಅನ್ವಯವಾಗುತ್ತದೆ.

ನವ್ಯ ಕವಿ ಮೂಲತಃ ತಿಳಿಗಣ್ಣಿನ ಜಿಜ್ಞಾಸು ತಿಳಿಗಣ್ಣಿಗೆ ಕಾಣದಿದ್ದಲ್ಲಿ 'ನೀತಿ ಬಾಹಿರ' ವಾದ ಕಲ್ಪಕತೆಯಿಂದ ಅಂಧಕಾರದಲ್ಲಿ ಕ್ಷಕಿರಣ ಬಿಟ್ಟು ನೋಡುತ್ತಾನೆ, ಅಥವಾ ಧೈರ್ಯದಿಂದ ನಗ್ನ ಕೈಗಳನ್ನು ಸುತ್ತಲೂ ಚಾಚಿ ತಡಕಾಡಿ ನೋಡುತ್ತಾನೆ. ಆತನಿಗೆ ಬೇರಿಲ್ಲ ಎಂದು ಹೇಳುವುದಕ್ಕಿಂತ ಇದ್ದ ಬೇರುಗಳಲ್ಲಿ ಅವನಿಗೆ ಸ್ಥೈರ್ಯ ಕೊಡುವ ಶಕ್ತಿಯಲ್ಲವೆಂದು ಹೇಳಬೇಕು.ಅದಕ್ಕೆಂದೇ ಆತ ಅನಿವಾರ್ಯವಾಗಿ ತನ್ನ ಸ್ವಂತ ದುರ್ದಮ್ಯವಾದ ಚೈತನ್ಯದ ಬಲದ ಮೇಲೆ ನಿಲ್ಲುತ್ತಾನೆ. ನಿಂತು ನಿರರ್ಥಕತೆಯ ತೀಕ್ಷ್ಣ ಪ್ರಜ್ಞೆಯಿಂದ ಸಾರ್ಥಕತೆಯತ್ತ, ಕೃತಾರ್ಥತೆಯತ್ತ ಹೆಜ್ಜೆಯಿಡುತ್ತಾನೆ. ಜಯಂತ ಕಾಯ್ಕಿಣಿಯವರ ಕಾವ್ಯ ಓದುವಾಗ ಈ ಮಾತು ಪದೇ ಪದೇ ಸ್ಪಷ್ಟವಾಗುತ್ತದೆ.ಹೊಸ ತರುಣ ಕವಿಗಳಲ್ಲಿ ತಿರುಮಲೇಶರ ನಂತರ ನನ್ನ ಮನಸ್ಸನ್ನು ಅತ್ಯಂತ ತೀಕ್ಷ್ಣವಾಗಿ, ಗಾಢವಾಗಿ ತಟ್ಟಿದ ಕವಿಯೆಂದರೆ ಜಯಂತ ಕಾಯ್ಕಿಣಿ ಇವರ ಕವಿತೆಗಳಲ್ಲಿ ಊರ್ಧ್ವಮುಖಿಯಾಗಿ ಬೆಳೆಯುವ ಒಂದು ಅತ್ಯಂತ ಸೂಕ್ಷ್ಮವಾದ ಜೀವನದ ದರ್ಶನವಾಗುತ್ತದೆ. ಅದರ ಬೆಳೆಯುವ ಹಂಬಲ, ಅದರ ದುಃಖಗಳು, ದ್ವಂದ್ವಗಳು, ಪ್ರಶ್ನೆಗಳು, ಉತ್ತರಗಳು, ಕೈಗೆ ಸಿಕ್ಕಿದ್ದನ್ನು ಹಿಡಿದು ನೋಡಿ ತನ್ನ ಶಕ್ತಿ ಬೆಳೆಸಿಕೊಂಡು, ಕಂಡು ಕೊಂಡು ಮುಂದೆ ಚಿಗುರಿ ಜಿಗಿಯುವ ಗಮ್ಮತ್ತು ಇವೆಲ್ಲ

ನೋಡಿದಾಗ ಮನಸ್ಸು ಕರಗಿ ನೀರಾಗುತ್ತದೆ, ಕವಿಯ ಬಗ್ಗೆ ಆತ್ಮೀಯತೆ ಮೂಡುತ್ತದೆ.ಬಸಳೆ–ನಾನು, ರಂಗದಿಂದೊಂದಿಷ್ಟು ದೂರ, ಅಸ್ತಿತ್ವ, ಬಿದಿರು ಕವಿತೆಗಳು ಮುಖ್ಯವಾದವು. "ಗೌರೀಶ್‌ಕಾಯ್ಕಿಣಿಯವರಿಗೆ ನನೊಮ್ಮೆ ಚೇಷ್ಟೆಯಿಂದ ಅಂದಿದ್ದೆ– 'ಬಹುಶಃ ಕನ್ನಡ ಸಾಹಿತ್ಯಕ್ಕೆ ನಿಮ್ಮ ಅತ್ಯಂತ ಮಹತ್ವ ಕೊಡುಗೆಯೆಂದರೆ–ಜಯಂತ' ಎಂದು ಯಶವಂತ ಚಿತ್ತಾಲರು ಹೇಳಿದ್ದಾರೆ."[೧]

ಜಯಂತ ಕಾಯ್ಕಿಣಿಯವರ ಕವನಗಳ ಕಾಳಜಿಗಳು ಹಾಗೂ ಕೇಂದ್ರ ಪ್ರಜ್ಞೆ ಸಂಕಲನದಿಂದ ಸಂಕಲನಕ್ಕೆ ಬದಲಾಗುತ್ತದೆ. ಕವಿಗೆ ಪರಂಪರೆಯೊಡನೆ ಇರುವ ಸಂಬಂಧ (ಅಪ್ಪನ ಚಪ್ಪಲಿ, ಅಜ್ಜಿ ಕವಿತೆ, ಉಡುಪಿ, ಕೋಟಿ ತೀರ್ಥ) ಮತ್ತು ಕಾವ್ಯ ಸ್ವರೂಪ (ಭಾವಗೀತೆ, ನನ್ನ ಕವಿತೆ, ನೀನಾಗಲು, ಅರ್ಥ, ಅನುಭವ ಇಲ್ಲದ ಕವಿತೆ) ಇತ್ಯಾದಿ ಸಂಗತಿಗಳನ್ನು ವಿಶ್ಲೇಷಿಸುತ್ತದೆ.ನಂತರದ ಕವಿತೆಗಳಲ್ಲಿ (ಪ್ರಾಯಃ ಮುಂಬಯಿ ವಾಸದ ಪರಿಣಾಮವಾಗಿ) ಕವಿಯ ಲಕ್ಷ್ಯ ಹಾಗೂ ಕಾಳಜಿಗಳು ಬದಲಾಗುತ್ತವೆ. ಬೇಂದ್ರೆಯವರ ಹರ್ಷೋಲ್ಲಾಸಗಳ 'ಶ್ರಾವಣ ಇಲ್ಲಿಲ್ಲ', ಬದಲಿಗೆ "ನೋವುಂಟು ಶ್ರಾವಣಕ್ಕೆ"[೨] ಎಂಬ ಭಾವ ಸರಿಸುಮಾರು ಎಲ್ಲಾ ಕವನಗಳನ್ನು ಆವರಿಸಿ, ವಿಷಾದ ಸ್ಥಾಯಿಯಾಗುತ್ತದೆ.ಈ ಕವನಗಳಲ್ಲಿ ಕವಿಯ ಲಕ್ಷ್ಯ ವ್ಯಕ್ತಿಯಿಂದ ಸಮಾಜದತ್ತ, ಹೊರಳಿ, ಆಧುನಿಕ ಮಹಾನಗರಗಳ ಕ್ರೌರ್ಯ, ವ್ಯಂಗ್ಯ ಹಾಗೂ ಬದುಕಿನ ಏಕತಾನತೆ ಇವುಗಳನ್ನು ಆ ಕವನಗಳು ಗಾಢ ವಿಷಾದದ ದನಿಯಲ್ಲಿ ಚಿತ್ರಿಸುತ್ತವೆ.

ಹತಾಶ ಹಾಗೂ ಬೀಭತ್ಸ ಅನುಭವಗಳಿಗೆ ರೂಪು ಕೊಡುವ ಪ್ರಜ್ಞೆಗೆ ವೈಯಕ್ತಿಕ ಹಾಗೂ ಸಾಮಾಜಿಕ ಎಂಬೆರಡು ಕಾರಣಗಳಿವೆ. ವೈಯಕ್ತಿಕ ನೆಲೆಯಲ್ಲಿ ಈ ಕವನಗಳ ನಿರೂಪಕ ತನ್ನ ಸರಳ, ಗ್ರಾಮೀಣ ಮತ್ತು ಹಸಿರು ಪರಿಸರದಿಂದ ಬೇರು ಸಹಿತ ಕಿತ್ತು ಮತ್ತೊಂದು ಅಪರಿಚಿತ ಹಾಗೂ ಕ್ರೂರ ಪರಿಸರದಲ್ಲಿ ನೆಡಲ್ಪಟ್ಟಿದ್ದಾನೆ. ಪರಿಣಾಮವಾಗಿ ತನ್ನ ಮೂಲ ಪರಿಸರವನ್ನು ಮರೆಯಲಾಗದೆ, ಹೊಸ ಪರಿಸರಕ್ಕೆ ಒಗ್ಗಿಕೊಳ್ಳಲಾಗಿದೆ ಹಾಗೂ ಅಲ್ಲಿಯ ಹೃದಯವೇಧಕ ನೋವಿಗೆ ಏನೂ ಪರಿಹಾರ ಒದಗಿಸಲಾರದೆ, ಈ ನಿರೂಪಕ ಹತಾಶೆ ಹಾಗೂ ಪರಕೀಯ ಪ್ರಜ್ಞೆಯಿಂದ ನರಳುತ್ತಾನೆ. 'ನೀಲಿಮಳೆ'ಯ ಊರು ನಾನು ಸಾವು ಕವಿತೆಯು ಪ್ರಾತಿನಿಧಿಕವಾಗಿ ಕವಿಯ ಈ ಪರಕೀಯ ಪ್ರಜ್ಞೆಯನ್ನು ಅತ್ಯಂತ ಯಶಸ್ವಿಯಾಗಿ ದಾಖಲಿಸುತ್ತದೆ. ಊರು ಬಿಟ್ಟು ಹೋದವನು ಮತ್ತು ಹುಟ್ಟೂರಿಗೆ ಬಂದಾಗ ತಬ್ಬಿಬ್ಬಾಗುತ್ತದೆ, ಸ್ವಾಗತವಿಲ್ಲ, ಕಿರುನಗೆಯಿಲ್ಲ ಯಾಕೆಬಂದೆ ಎಂಬ ಪ್ರಶ್ನೆಗೆ ಮುಖಗಳಿಲ್ಲ ಊರಲ್ಲಿ ಯಾರಾದರೂ ಸತ್ತಿರಬಹುದೇ? ಎಂದು ಯೋಚಿಸುತ್ತಾ ಅಲ್ಲಲ್ಲಿ ಅಲೆದಾಡಿ ಕೊನೆಗೆ ಹಿಂತಿರುಗಲು ಬಸ್ ಹತ್ತಿದಾಗ 'ಇದೇ ನನ್ನ ಸಾವೂ ಏನೋ' ಎಂಬುದು ನಿರೂಪಕನಿಗೆ ಅರಿವಾಗುತ್ತದೆ. ಜಯಂತ ಕಾಯ್ಕಿಣಿಯವರ ಕವನಗಳಲ್ಲಿ ಪುನರಾವರ್ತನೆಯಾಗುವ ಒಂದು ಅಂಶವೆಂದರೆ ಕಳೆದುಕೊಂಡ ಸ್ವರ್ಗ.

---

೧. ರಂಗದಿಂದೊಂದಿಷ್ಟು ದೂರ – (೧೯೭೪) ಜಯಂತ ಕಾಯ್ಕಿಣಿ (ಕವಿತೆ) ಮುನ್ನುಡಿಯಿಂದ

೨. ಶ್ರಾವಣ ಮಧ್ಯಾಹ್ನ –(೧೯೮೭) ಜಯಂತ ಕಾಯ್ಕಿಣಿ (ಕವಿತೆ) ಪು.ಸಂ.೪

ಈ ಆಶಯದ ಪ್ರಾತಿನಿಧಿಕ ಅಭಿವ್ಯಕ್ತಿಯಾಗಿ ಶಾಹಿ ಕವನ ನೋಡಬಹುದು ತಾನು ಬಾಲ್ಯದಲ್ಲಿ ಉಪಯೋಗಿಸುತ್ತಿದ್ದ ಇಂಕು ಪೆನ್ನು ಈಗೆಲ್ಲಿ ಹೋಯಿತು ಎಂದು ಚಿಂತಿಸುವ ನಿರೂಪಕ ಆ ಹಳೆಯ ಇಂಕುಪೆನ್ನನ್ನು ನೆನಪಿಸಿಕೊಳ್ಳುತ್ತಾನೆ. "ಖಾಲಿಯಾಗಲು ಬಂತೇ ಗುಡುಗಿದರೆ ನೀಲಿಮಳೆ ಅಥವಾ ಕಾಗದ ಮೇಲೆ ಹನಿಗಳ ಹಿಡಿದೆಳೆದೆಳೆದರೆ ನೂರುಕಾಲಿನ ನೀಲಿ ಜೀವ ತೆವಳವುದು ಬಳಿಗೆ".[೧] ಈ ಕವನದ ಮೂಲ ಪ್ರತಿಮೆಯಾದ 'ನೀಲಿಮಳೆ' ಅತ್ಯಂತ ಸಹಜವಾಗಿ, ಒಂದು ನೆಲೆಯಲ್ಲಿ ಬಾಲ್ಯವನ್ನು, ಇನ್ನೊಂದು ನೆಲೆಯಲ್ಲಿ ಗ್ರಾಮೀಣ ಸಂಸ್ಕೃತಿಯನ್ನು ಮತ್ತೊಂದು ನೆಲೆಯಲ್ಲಿ ಸೃಜನಶೀಲತೆಯನ್ನು ಸಂಕೇತಿಸುತ್ತದೆ. 'ಕಳೆದು ಕೊಂಡ ಸ್ವರ್ಗ' ಆಶಯದ ಸಾಮಾಜಿಕ ಆಯಾಮವೆಂದರೆ ಅಸಮಾನ ಅವಕಾಶ ಅಧಿಕಾಗಳನ್ನಾಧರಿಸಿರುವ ನಗರೀಕೃತ ಆಧುನಿಕ ವ್ಯವಸ್ಥೆ, ಈ ಕ್ರೂರ ವ್ಯವಸ್ಥೆಯ ಭೀಕರ ಮುಖಗಳನ್ನು ನಾವು ಮುಂಬಯಿ, ಕೊಲ್ಕತ್ತಾ ದೆಹಲಿ, ಬೆಂಗಳೂರು ಮುಂತಾದ ಆಧುನಿಕ ನಗರಗಳಲ್ಲಿ ಕಾಣುತ್ತೇವೆ. ಖಾಸಗೀ ಸ್ಥಳವೇ ಇಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿಯೇ ಸ್ನಾನ, ಸಂಭೋಗ, ಅವು ಇತ್ಯಾದಿಗಳನ್ನು ಅನುಭವಿಸುವ ನಿರ್ಗತಿಕರು. ಇತಂಹ ಕಾಂಕ್ರೀಟು ಕಾಡುಗಳ ಬದುಕನ್ನು ಮತ್ತು ಯಾವ ರೀತಿಯಿಂದಲೂ ವ್ಯಕ್ತಿಯೊಬ್ಬನು ಆ ವ್ಯವಸ್ಥೆಯನ್ನು ಬದಲಿಸಲಾಗದ ಅಸಹಾಯಕತೆಯನ್ನು ಜಯಂತರ ಕವನಗಳು ಹೃದಯಸ್ಪರ್ಶಿಯಾಗಿ ದಾಖಲಿಸುತ್ತದೆ.ಕವಿಯಾಗಿ ಬೆಳೆಯುತ್ತಾ ಹೋದಂತೆ ಇವರ ಶಬ್ದ ಚಿತ್ರಗಳು ಹೆಚ್ಚು ಖಚಿತವೂ ಹೆಚ್ಚು ಧ್ವನಿ ಪೂರ್ಣವೂ ಆಗುತ್ತಾ ಹೋಗುತ್ತವೆ. ಈ ಎಲ್ಲವನ್ನು ಗನಮದಲ್ಲಿಟ್ಟು ಹೇಳುವುದಾದರೆ 'ನೀಲಿಮಳೆ' ಜಯಂತರ ಅತ್ಯುತ್ತಮ ಕವನ ಸಂಕಲವಾಗಿದೆಂದು ಹೇಳಬಹುದು.ನಗರ ಪ್ರಜ್ಞೆ ಅನೇಕ ಯಶಸ್ವಿ ಕವಿಗಳು ಕನ್ನಡದಲ್ಲಿದ್ದಾರೆ, ನಿಸಾರ್ ಆಹಮ್ಮದ್, ಅರವಿಂದ ನಾಡಕರ್ಣಿ, ರಾಮಚಂದ್ರಶರ್ಮ, ರಾಮಚಂದ್ರದೇವ ಇತ್ಯಾದಿ, ಆದರೆ ಜಯಂತರ ಹಾಗೆ ಯಾವ ಹೇಳಿಕೆ ಹಾಗೂ ತಾತ್ವಿಕ ನೆಲೆಯ ಸಾಧಾರೀಕರಣವಿಲ್ಲದೆ, ಕುಶಲ ಹಾಗೂ ಸಹೃದಯ ಚಿತ್ರಕಾರನಂತೆ, ನಗರ ಜೀವನದ ಕ್ರೌರ್ಯ ಹಾಗೂ ಅಮಾನವೀಯತೆಯನ್ನು ಅಷ್ಟು ಪರಿಣಾಮಕರಿಯಾಗಿ ಚಿತ್ರಿಸಿರುವವರು ಕಡಿಮೆ.

ಅಂಕಣಕಾರನಾಗಿ ಜಯಂತ ಕಾಯ್ಕಿಣಿ

ಜಯಂತರ ಎರಡು ಪ್ರಬಂಧ ಸಂಕಲನಗಳು ಹೂರಬಂದಿವೆ. 'ಬೊಗಸೆಯಲ್ಲಿ ಮಳೆ' (೨೦೦೧) ಮತ್ತು 'ಶಬ್ದತೀರ' (೨೦೦೬) 'ಹಾಯ್ ಬೆಂಗಳೂರು' ವಾರ ಪ್ರತಿಕೆಗೆ ಪ್ರತಿವಾರವೂ ಬರೆದ ೯೧ ಅಂಕಣ ಬರಹಗಳ ಸಂಕಲನ 'ಬೊಗಸೆಯಲ್ಲಿ ಮಳೆ'ಈ ಬರಹಗಳು ಸಮಕಾಲೀನ ಸಮಾಜದ ಅನೇಕ ಗಂಭೀರ–ಕ್ಷುಲ್ಲಕ ಸಂಗತಿಗೆ ಸ್ಪಂದಿಸುತ್ತವೆ.

---

೧. ನೀಲಿಮಳೆ – (೧೯೯೭) ಜಯಂತ ಕಾಯ್ಕಿಣಿ (ಕವಿತೆ) – ಪು.ಸಂ.೮೦

ಶಬ್ದತೀರ ಅಂಕಣ ಬರಹಗಳಿಗಿಂತ ಧೀರ್ಘವಾದ ೫೮ ಲೇಖನಗಳ ಸಂಕಲನ. ಇದರಲ್ಲಿರುವ ಲೇಖನಗಳ ಹರವು, ಧೂಳು, ಹೆದ್ದಾರಿಯ ಹೆರಳಲ್ಲಿ, ಮುಂಬಯಿಗೀತೆ, ತಂತಿಯ ಮೇಲೆ ಮುಂತಾದ ಲಲಿತ ಪ್ರಬಂಧಗಳಿಂದ ಹಿಡಿದು ಚಲನಚಿತ್ರಗಳ ವ್ಯಾಖ್ಯಾನ ಹಾಗೂ ವಿರ್ಮಶೆ ಎಂದು ಕರೆಯಬಹುದಾದ ಲೇಖನಗಳನ್ನು ಒಳಗೊಳ್ಳುವಷ್ಟು ವಿಸ್ತಾರವಾಗಿದೆ.ಜಯಂತ ಕಾಯ್ಕಿಣಿಯವರ ಗದ್ಯ ಇಬ್ಬರು ಸಂವೇದನಾಶೀಲ ಗೆಳೆಯರ ನಡುವಿನ ದಿನನಿತ್ಯದ ಮಾತುಕತೆಯಂತೆ ನೇರ, ಸರಳ, ಹಾಗೂ ಭಾವಪೂರ್ಣ. ಈ ಬರಹಗಳು ನಾವು ಸಾಮಾನ್ಯವೆಂದು ಭಾವಿಸುವ ಘಟನೆ ವಿಚಾರಗಳ ಅಸಾಮನ್ಯತೆಯನ್ನು ಮತ್ತು ನಾವು ಕ್ಲಿಷ್ಟ ಹಾಗೂ ಅಸಾಮಾನ್ಯ ಎಂದು ಭಾವಿಸುವ ಸಂಗತಿಗಳ ಆಳದಲ್ಲಿರುವ ಸಾಮಾನ್ಯ ಅಂಶಗಳನ್ನು ಗುರುತಿಸಿ, ನಾವೂ ಅವುಗಳನ್ನು ಗುರುತಿರುವಂತೆ ಪ್ರಚೋದಿಸುತ್ತವೆ.

ನಾಟಕಕಾರರಾಗಿ –ಜಯಂತ ಕಾಯ್ಕಿಣಿ

ಇದುವರೆಗೂ ನಾಲ್ಕು ನಾಟಕಗಳನ್ನು ಜಯಂತರು ರಚಿಸಿದ್ದಾರೆ, ೨೦೦೪ರಲ್ಲಿ 'ಆಕಾಶಬುಟ್ಟಿ' ಎಂಬ ನಾಟಕ ಪ್ರಕಟವಾಯಿತು.ಉಳಿದವುಗಲೆಲ್ಲಾ ಅನುವಾದ ನಾಟಕಗಳೆ ೧೯೯೬ರಲ್ಲಿ 'ಸೇವಂತಿ ಪ್ರಸಂಗ' ನಾಟಕವು ಬರ್ನಾರ್ಡ್ ಶಾ ರಚಿಸಿದ (ಅನಂತರ 'ಮೈಫೇರ್ ಲೇಡಿ' ಎಂಬ ಜೆಸರೊನಲ್ಲಿ ಪ್ರಸಿದ್ಧ ಚಲನಚಿತ್ರವೂ ಆದ) 'ಸೈಮಲ್ಲಿನ್' ನಾಟಕದ ಯಶಸ್ವಿ ಅನುವಾದವಾಗಿದೆ.೨೦೦೪ರಲ್ಲಿ ರಚಿತವಾದ 'ಜತೆಗಿರುವನು ಚಂದಿರ' ಎಂಬ ನಾಟಕ, 'ಜೋಸೆಫ಼ ಸ್ಟೀನ್' ರಚಿಸಿದ 'ಫೈಡರ್ ಆನ್ ದಿ ರೂಟ್' ಎಂಬ ಸಂಗೀತ ನಾಟಕದ ಅನುವಾದವಾಗಿದೆ.೨೦೦೩ರಲ್ಲಿ ರಚಿಸಿದ 'ಇಂತಿ ನಿನ್ನ ಅಮೃತಾ' ಎಂಬುದು 'ಜಾವೇದ್ ಸಿದ್ಧಿಕಿ' ರಚಿಸಿದ 'ತುಮ್ಹಾರೀ ಅಮೃತಾ' ಎಂಬ ಹಿಂದಿ ನಾಟಕದ ಅನುವಾದವಾಗಿದೆ.ಜಯಂತರು ದುಡಿಸಿಕೊಳ್ಳುವ ಕನ್ನಡದ ಭಿನ್ನ ಭಾಷಾಸ್ತರಗಳು, ಅವರ ಸೃಜನಾತ್ಮಕ ಅನುವಾದ ಮತ್ತು ಮುಖ್ಯವಾಗಿ ಅವುಗಳಿಗೆ ಜಯಂತರೇ ರಚಿಸಿರುವ ರಂಗ ಗೀತೆಗಳು ಇವೆಲ್ಲಾ ಕಾರಣಗಳಿಂದ ಜಯಂತರ ನಾಟಕಗಳು ಮತ್ತೆ ಮತ್ತೆ ರಂಗಪ್ರದರ್ಶನಗೊಂಡು ಅಪಾರ ಜನಪ್ರಿಯತೆಯನ್ನು ಗಳಿಸಿವೆ.

ಕಥೆಗಾರರಾಗಿ ಜಯಂತ ಕಾಯ್ಕಿಣಿ

ಜಯಂತ ಕಾಯ್ಕಿಣಿಯವರು ಇದುವರೆಗು ಏಳು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವುಗಳೆಂದರೆ:–

೧. ತರೆದಷ್ಟು ಬಾಗಿಲು (೧೯೮೨)

೨. ಗಾಳ (೧೯೮೨)

೩. ದಗಡೂ ಪರಬನ ಅಶ್ವಮೇಧ (೧೯೮೯)

೪. ಅಮೃತಬಳ್ಳಿ ಕಷಾಯ (೧೯೯೬)

೫. ಬಣ್ಣದ ಕಾಲು (೧೯೯೯)

೬. ತೂಫಾನ್ ಮೇಲ್ (೨೦೦೫)

೭. ಚಾರ್ ಮಿನಾರ್ (೨೦೧೨)

ಕವನಗಳನ್ನು ಕಟ್ಟುವಂತೆಯೇ ಜಯಂತರು ಖಚಿತ ದೈನಿಕ ವಿವರಗಳ ಮೂಲಕ ತಮ್ಮ ಕಥೆಗಳನ್ನು ಕಟ್ಟುತ್ತಾರೆ. ಆದರೆ ಒಂದು ವ್ಯತ್ಯಾಸವಿದೆ. ಇವರ ಕವನಗಳು ನೇರವಾಗಿ ವಾಸ್ತವ ಪ್ರಪಂಚಕ್ಕೆ ಕನ್ನಡಿ ಹಿಡಿದರೆ, ಕಥೆಗಳಲ್ಲಿ ಬದುಕಿನ ಅಗೋಚಿತ ದಿವ್ಯ ವ್ಯಂಗ್ಯಗಳ ಕ್ಷಣಗಳನ್ನು ದಾಖಲಿಸಲು ಅವರೇ ಹೇಳುವಂತೆ – "ತುಸು ಪಕ್ಕ ಸರಿದು ಅಥವಾ ವಾರೆಯಾಗಿ ನೋಡುವುದರಿಂದಲೇ ಇಂತಹ ಕ್ಷಣಗಳ ಹುಲುತನ (ಖಿಡಿುತುಚಿ) ವನ್ನು ಮೀರಿ ನಾವು ಆಕ್ರೋಶದ ಅಸಂಗತೆಯನ್ನು ಮನಗಾಣಬಲ್ಲವು ಅಥವಾ ಅಸಂಗತತೆಯನ್ನು ಮನಗಾಣುವುದರ ಮೂಲಕವೇ ಆ ಕ್ಷಣವನ್ನು ಮೀರಬಲ್ಲೆವು"[೧] ಹೀಗೆ ಜಯಂತರ ಬದುಕು ಬರಹ,ಅವರು ನಡೆದು ಬಂದ ಹಾದಿಯನ್ನು ಈ ಮೇಲಿನವಂತೆ ನೋಡಬಹುದು.

೧.. ಶಬ್ದ ತೀರ – (೨೦೦೬) ಜಯಂತ ಕಾಯ್ಕಿಣಿ (ಅಂಕಣ ಬರಹ) –ಪು.ಸಂ.೭೦

ಅಧ್ಯಾಯ ೩

ಕನ್ನಡ ಕಥಾ ಸಾಹಿತ್ಯಕ್ಕೆ ಜಯಂತರ ಕೊಡುಗೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಿದ್ಧಮಾದರಿಗಿಂತ ಭಿನ್ನವಾದ ಸಂವೇದನೆಗಳನ್ನು, ಅಪರಿಚಿತ ಕೇಡುಗಳನ್ನು ಪರಿಚಯಿಸಲು, ಹೊಸ ಹೊಸ ಪ್ರತಿಮೆಗಳನ್ನು- ರೂಪಕಗಳನ್ನು ಬಳಸಲು ಹಾಗೂ ನೂತನ ತಂತ್ರಪ್ರಯೋಗಕ್ಕಾಗಿ ಕಥೆಗಾರರು ನವೋದಯದ ಕಾಲದಿಂದಲೂ ನಗರಾಭಿಮುಖಿಯಾಗುವುದನ್ನು ಕಾಣಬಹುದಾಗಿದೆ.ಜಯಂತ ಕಾಯ್ಕಣಿಯವರು ಕನ್ನಡದ ಪ್ರಮುಖ ಕಥೆಗಾರರಲ್ಲಿ ಒಬ್ಬರು. ಇದುವರೆಗೂ ಒಟ್ಟು ಏಳು ಕಥಾ ಸಂಕಲನಗಳು ಪ್ರಕಟಗೊಂಡಿವೆ. ನವ್ಯೋತ್ತರ ಕನ್ನಡ ಕತೆಗಾರರಲ್ಲಿ ಜಯಂತರು ಕೂಡ ಉತ್ತಮ ಕಥೆಗಾರರಾಗಿದ್ದಾರೆ.ಜಯಂತ ಕಾಯ್ಕಿಣಿಯವರ ಕತೆಗಳನ್ನು ಸ್ಥೂಲವಾಗಿ ನಾವು 'ನವ್ಯ ಕಥೆಗಳು' ಎಂದು ಗುರುತಿಸಬಹುದು. ಎಂದರೆ ಇವೆಲ್ಲಾ ಕಥೆಗಳು ಕೇಂದ್ರ ಪಾತ್ರದ ಬದುಕಿನ ನಿರ್ಣಾಯಕ ಕ್ಷಣಗಳ ಸುತ್ತ ಕಟ್ಟಲ್ಪಟ್ಟಿವೆ.ಕಥೆಯೊಂದು ಮುಖ್ಯ ಪಾತ್ರದ ಬದುಕಿನ ಕ್ಷುಲ್ಲಕ ಹಾಗೂ ನೀರಸ ವಿವರಗಳಿಂದ ಆರಂಭವಾಗಿ, ಬದುಕಿನಲ್ಲಿ ಅರ್ಥ ಮತ್ತು ಸಾಂಗತ್ಯಕ್ಕಾಗಿ ಆ ಪಾತ್ರವು ಕೈಗೊಳ್ಳುವ ನಿರ್ಧಾರದೊಂದಿಗೆ ಆ ಕಥೆ ಕೊನೆಯಾಗುತ್ತದೆ.

ಮಾನವ ವಿನ್ಯಾಸದ ವಿವಿಧ ಪದರುಗಳನ್ನು ಪರಿಚಯಿಸಿ ಜಯಂತರ ಅನುಭವವಿಶ್ವವನ್ನು ಹಿಗ್ಗಿಸಿ ಅವರನ್ನು ಕನ್ನಡದ ಪ್ರತಿಭಾವಂತ ಸಾಹಿತಿಯನ್ನಾಗಿ ಮುಖ್ಯವಾಗಿ ಸಂವೇದನಾಶೀಲ ಕಥೆಗಾರನ್ನಾಗಿ ಮಾಡುವಲ್ಲಿ ಮುಂಬಯಿಯ ಪಾತ್ರ ಬಹು ದೊಡ್ಡದು.ಮುಂಬಯಿಯಲ್ಲಿ ಬಹು ಕಾಲ ನೆಲೆಸಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಮುಂಬಯಿಯ ಕಥೆಗಳನ್ನು ಬರೆದಿರುವ ಜಯಂತ ಕಾಯ್ಕಿಣಿಯವರು ಮುಂಬಯಿಯ ಕಥೆಗಾರರು ಎಂದೇ ಗುರುತಿಸಲ್ಪಡುತ್ತಾರೆ.

ನವ್ಯ ಹಾಗೂ ಬಂಡಾಯದ ಪ್ರಭಾವದಿಂದ ತಮ್ಮನ್ನು ಕಳಚಿಕೊಳ್ಳುತ್ತಾ ತಮ್ಮದೇ ಆದ ಭಿನ್ನವಾದ ಶೈಲಿಯಲ್ಲಿ ಬರೆಯಲಾರಂಭಿಸಿದ ಕೆಲವೇ ಕೆಲವು ಸಾಹಿತಿಗಳಲ್ಲಿ ಜಯಂತರು ಪ್ರಮುಖರು. ಇವರು ಆದರ್ಶವಾದಿಗಳಲ್ಲ, ಧ್ಯೇಯವಾದಿಗಳಲ್ಲ. ಇವರ ದೃಷ್ಟಿಕೋನದಲ್ಲಿ ನಿಷ್ಠುರತೆ ಅಥವಾ ಉದಾಸೀನತೆಗೆ ಅವಕಾಶವೇ ಇಲ್ಲ. ಒಟ್ಟಿನಲ್ಲಿ ಯಾವುದೇ ವಾದಗಳನ್ನು ಮಂಡಿಸುವಲ್ಲಿ ಇವರಿಗೆ ಆಸಕ್ತಿ ಇಲ್ಲ. ತಮ್ಮ ಕಥೆಗಳಿಗಾಗಿ ವಸ್ತುಗಳ ಹುಡುಕಾಟ ಅವರ ಜಾಯಮಾನದಲ್ಲಿಯೇ ಇಲ್ಲ. ನಿತ್ಯ ಬದುಕಿನ ಘಟನೆಗಳಂತೆಯೆ, ಸಹಜತೆಯಿಂದ ತಮ್ಮ ಸುತ್ತಮುತ್ತಲಿನ ಸಾಮಾನ್ಯ ಹಾಗೂ ಮಧ್ಯಮವರ್ಗೀಯ ಜನರ ಬದುಕನ್ನು ಗಮನಿಸುತ್ತಾ ತಮ್ಮ ಗಮನಸೆಳೆದ ವಿಷಯಗಳನ್ನು ದಾಖಲಿಸುವುದಷ್ಟೇ ಅವರ ಉದ್ದೇಶ. ಈ

ಸಹಜತೆ ಸರಳತೆಗಳೇ ಅವರ ಕಥನಶೈಲಿಗೆ ಭಿನ್ನವಾದ ಮೆರುಗನ್ನು ನೀಡಿವೆ. ತಮ್ಮ ವಿಶಿಷ್ಟವಾದ ಭಾಷೆ ಹಾಗೂ ಶೈಲಿಯ ಮೂಲಕ ನಗರ ಪ್ರಜ್ಞೆಯ ವಸ್ತುವನ್ನು ರೂಪಕಗಳೊಂದಿಗೆ ತಮ್ಮ ಬರಹಗಳಲ್ಲಿ ಅಭಿವ್ಯಕ್ತಿಸುತ್ತಿರುವ ಜಯಂತ ಕಾಯ್ಕಿಣಿಯವರು ನವ್ಯೋತ್ತರ ಬರಹಗಾರರಲ್ಲಿ ಪ್ರಮುಖರು.

ವಿಜ್ಞಾನದಲ್ಲಿ ಸ್ನಾತಕೋತರ ಪದವೀಧರರಾದ ಜಯಂತ ಕಾಯ್ಕಿಣಿಯವರು ತಮ್ಮ ಆಸುಪಾಸಿನ ಎಲ್ಲವನ್ನೂ ಅತ್ಯಂತ ಸೂಕ್ಷ್ಮ ಕಣ್ಣುಗಳಿಂದ ಗಮನಿಸುತ್ತಾ, ತಮ್ಮ ಅನುಭವದ ತೆಕ್ಕೆಯೊಳಗೆ ಬಂದದ್ದಕ್ಕೆಲ್ಲ ಕಥೆ –ಕವನಗಳ ರೂಪು ನೀಡುವ ಸಾಹಿತಿ. ಜಯಂತರು ತಮ್ಮ ಸಮಕಾಲೀನ ಕಥೆಗಾರರಿಗೆ ಅನೂಹ್ಯವಾದ ಅವರಿಗಿಂತ ಭಿನ್ನವಾದ ಕಥಾಜಗತ್ತನ್ನು ನಿರ್ಮಿಸಿದ್ದಾರೆ. ಅದಕ್ಕಾಗಿ ಅವರು ಬಳಸುವ ಭಾಷೆ, ಕಥನಶೈಲಿ, ವಸ್ತುವಿನ ಆಯ್ಕೆ ಕೂಡ ವಿಶಿಷ್ಟವಾದುದು.ಸ್ವಂತ ಬದುಕಿನ ಗ್ರಹಿಕೆಗಳನ್ನು ಅವರುತಮ್ಮ ಕಥೆಗಳಲ್ಲಿ ವ್ಯಕ್ತಪಡಿಸುವ ಪರಿ ಅನನ್ಯವಾದುದು.ಸಂಕೀರ್ಣವಾದ ಮನುಷ್ಯ ಸಂಬಂಧಗಳನ್ನು ಅತ್ಯಂತ ನಾಜೂಕಾಗಿ ಚಿತ್ರಿಸಿರುವುದನ್ನು ಗಮನಿಸಿದಾಗ, ಮಾನವೀಯತೆ ಮೇಲೆ ಅವರಿಗಿರುವ ಅಪಾರವಾದ ಆಸಕ್ತಿ, ವಿಶ್ವಾಸ, ಭರವಸೆ ನಮ್ಮನ್ನು ಬೆರಗಿಗೊಳಿಸುತ್ತದೆ.ಆದರೆ ಅವರು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಿಸುವ ಜೀವನದರ್ಶನವನ್ನು ಅವರಷ್ಟೇ ಶ್ರದ್ಧೆಯಿಂದ ಆಸಕ್ತಿಯಿಂದ ಗ್ರಹಿಸುವ ವ್ಯವಧಾನವು ಓದುಗರಲ್ಲಿಯೂ ಇರಬೇಕಾದುದು ಅತೀ ಅಗತ್ಯದ ಸಂಗತಿ.

ಮುಂಬಯಿಯ ಆಧುನಿಕ ಕತೆಗಾರರಲ್ಲಿ ಯಶವಂತ ಚಿತ್ತಾಲ, ವ್ಯಾಸರಾಯ ಬಲ್ಲಾಳ, ಶಾಂತಿನಾಥ ದೇಸಾಯಿ, ಡಾ॥ ವ್ಯಾಸರಾವ್ ನಿಜೂರು, ಜಯಂತ್ ಕಾಯ್ಕಿಣಿ, ತುಳಸಿ ವೇಣುಗೋಪಾಲ್, ಮಿತ್ರವೆಂಕಟ್ರಾಜ್ ಮುಂತಾದವರು ಒಳ್ಳೆಯ ಕಥೆಗಾರರೆಂದು ಗುರುತಿಸಿಕೊಳ್ಳುತ್ತಾರೆ.ಯಶವಂತ ಚಿತ್ತಾಲರಂತೆ ತಮ್ಮ ನೆನಪಿನ ಅವಿಭಾಜ್ಯ ಅಂಗವಾಗಿರುವ ಗೋಕರ್ಣದ ಕಡೆಗೆ ಆಗಾಗ ಮುಖ ಮಾಡಿದರು, ಜಯಂತರ ಕಥೆಗಳಲ್ಲಿ ಮುಂಬಯಿಯ ಬದುಕು ರೂಪುಗೊಂಡ ಪರಿ ಅನನ್ಯವಾದುದು.ಮುಂಬಯಿಯ ಇತರ ಕಥೆಗಾರರಿಗಿಂತಲೂ ಜಯಂತರದ್ದು ಭಿನ್ನವಾದ ಬಹುಮುಖಿ ಪ್ರತಿಭೆಯ ವ್ಯಕ್ತಿತ್ವ.ಪ್ರಾರಂಭದಲ್ಲಿ ಕವಿಯಾಗಿಯೇ ಗುರುತಿಸಿಕೊಂಡ ಜಯಂತ್ ಕಾಯ್ಕಿಣಿಯವರು ಕಾಲಕ್ರಮೇಣ ಕಥೆಗಾರರಾಗಿ, ನಾಟಕಕಾರರಾಗಿ, ಅಂಕಣಕಾರರಾಗಿ, ಅನುವಾದಕರಾಗಿ, ಸಂಪಾದಕರಾಗಿ, ದೂರದರ್ಶನದಲ್ಲಿ ಸಂದರ್ಶಕರಾಗಿ, ತೀರ್ಪುಗಾರರಾಗಿ ಎಲ್ಲರಿಗೂ ಚಿರಪರಿಚಿತರಾದವರು.ಮಾತ್ರವಲ್ಲದೆ ಕನ್ನಡ ಚಲನಚಿತ್ರರಂಗದಲ್ಲಿ ಚಿತ್ರಕತೆ, ಸಂಭಾಷಣೆ, ಜನಪ್ರಿಯ ಗೀತೆಗಳನ್ನು ರಚಿಸಿ ಕನ್ನಡಿಗರ ಮನಗೆದ್ದವರು.ಆದರೂ ಮುಖ್ಯವಾಗಿ ಕನ್ನಡ ಸಾಹಿತ್ಯದ ಅತ್ಯಂತ ಪ್ರತಿಭಾವಂತ ಕವಿಯಾಗಿ, ನಗರ ಪ್ರಜ್ಞೆಯನ್ನು ತಮ್ಮ ಕತೆಗಳ ಮೂಲಕ ಕನ್ನಡ ಸಾಹಿತ್ಯಲೋಕಕ್ಕೆ ಪರಿಚಯಿಸುತ್ತಿರುವ ಕತೆಗಾರ.ಜಯಂತರು ಹೆಚ್ಚಿನ ಸಂಖ್ಯೆಯಲ್ಲಿ ಮುಂಬಯಿಯ ಕತೆಗಳನ್ನು ಬರೆದರೂ ಅವರ ಕತೆಗಳಲ್ಲಿ ಹುದುಗಿರುವ ಕಾಣಿಕೆಯು

ಸಾರ್ವತ್ರಿಕವಾದುದು, ಸಾರ್ವಕಾಲಿಕವಾದುದು. ಇಂದು ಜಾಗತಿಕರಣದ ಆತಂಕಗಳಲ್ಲಿ ಮನುಜಕುಲ ಸಿಲುಕಿ ತತ್ತರಿಸುವ ಸಂದರ್ಭದಲ್ಲಿ ಮಗುವಿನಂಥ ಮುಗ್ಧತೆ ಹಾಗೂ ತಾಯಿಯ ಅಂತಃಕರಣದಿಂದ ಎಲ್ಲವನ್ನೂ ಗಮನಿಸುತ್ತಾ ಜಯಂತರು ಯಾಂತ್ರಿಕನಾಗುತ್ತಿರುವ ಮನುಷ್ಯನಲ್ಲಿ ಮನುಷ್ಯತ್ವವನ್ನು ಜಾಗೃತಗೊಳಿಸಿ ಅವನ ಭಾವ ಕೋಶಗಳನ್ನು ಮೀಟುವಂತಹ ಕಥೆಗಳನ್ನು ಬರೆಯುತ್ತಿರುವವರು.ಇಂದು ಈ ಜಗತಿನಲ್ಲಿ ಅದೂ ಮುಂಬಯಿಯಂತಹ ಮಹಾನಗರಗಳಲ್ಲಿಯು 'ಜೀವಕ್ಕೆ ಚೆಲೋದು' ಅನ್ನುವಂಥದ್ದು ಇನ್ನೂ ಇದೆ ಎನ್ನುವ ಭರವಸೆಯನ್ನು ಮೂಡಿಸುವ ಕಥೆಗಳನ್ನು ಬರದಿರುವ ಜಯಂತರು ಕನ್ನಡದ ಮಹತ್ವದ ಕತೆಗಾರರು.

ಜಯಂತ ಕಾಯ್ಕಿಣಿಯವರ ಪ್ರಥಮ ಕಥಾಸಂಕಲನ 'ತೆರೆದಷ್ಟೇ ಬಾಗಿಲು'ದಲ್ಲಿ ಸೇರ್ಪಡೆಯಾಗದೆ ಉಳಿದ ಕಥೆಗಳು ಅವರ 'ಗಾಳ' (೧೯೮೨) ಸಂಕಲನದಲ್ಲಿ ಪ್ರಕಟಗೊಂಡಿವೆ. 'ಹಾಗೆ ನೋಡಿದರೆ ಎಂದೋ ಬರಬೇಕಿತ್ತು ಈ ಸಂಕಲನ' ಎಂದು ಜಯಂತರು ಸಂಕಲನದ ಮುನ್ನುಡಿಯಲ್ಲಿ ಹೇಳಿರುವರು. 'ತೆರೆದಷ್ಟೇ ಬಾಗಿಲು' ಸಂಕಲವನ್ನು ಓದಿದವರಿಗೆ 'ಗಾಳ'ದಲ್ಲಿರುವ ಕಥೆಗಳು ಜಯಂತರು ಬಹಳ ಮೊದಲೇ (೧೯೭೩ ರಿಂದ ೧೯೭೬ರವರೆಗೆ ಬರೆದ) ಬರೆದ ಕಥೆಗಳು ಎನ್ನವುದು ಗಮನಕ್ಕೆ ಬರುವುದು ಸಹಜ.ಕಥೆಗಾರನಾಗ ಬಯಸಿದ ಕವಿ ಮನಸ್ಸು ಮಾಡಿದ ಪ್ರಥಮ ಪ್ರಯತ್ನಗಳ ಲಕ್ಷಣಗಳು ಇಲ್ಲಿವೆ. ಈ ಕಥೆಗಳೆಲ್ಲವೂ ಗೋಕರ್ಣದ ಹಿನ್ನೆಲೆಯಲ್ಲಿಯೇ ಬರೆಯಲ್ಪಟ್ಟವುಗಳು.ಈ ಕಾರಣದಿಂದಾಗಿ ಹಾಗೂ ವ್ಯಾಪಕ ಓದಿಗೆ ಒಳಪಡದ ಈ ಕಥೆಗಳನ್ನು ಗಮನಿಸುವುದು ಅಗತ್ಯವೆನಿಸುತ್ತದೆ.ಅವರ ಇನ್ನ್ಯಾವ ಕಥೆಗಳಲ್ಲಿಯೂ ಕಾಣದ ಯುವ ಮನಸ್ಸಿನ ನವಿರಾದ ಸಂವೇದನೆಗಳನ್ನು ನಾವಿಲ್ಲಿ ಕಾಣಬಹುದು.

ತೆರೆದಷ್ಟೇ ಬಾಗಿಲು (೧೯೮೨)

'ತೆರೆದಷ್ಟೇ ಬಾಗಿಲು' ಕಥಾ ಸಂಗ್ರಹವು ಜಯಂತರ ಮೊದಲ ಕಥಾ ಸಂಗ್ರಹವಾಗಿದೆ.೧೯೮೨ರ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡಮಿಯ ಪುಸ್ತಕ ಪ್ರಶಸ್ತಿ ಪಡೆದ ಕೃತಿಯಾಗಿದೆ.ಇದರಲ್ಲಿ ಒಟ್ಟು ಏಳು ಕಥೆಗಳಿವೆ. 'ಇದ್ದಾಗ ಇದ್ದಾಂಗ', 'ದಿಗಂಬರ', ತೆರೆದಷ್ಟೇ ಬಾಗಿಲು', 'ಭೋಟು', 'ಧನಂಜಯ', 'ದ್ವೀಪಗಳು', 'ಕಾಯೋ ಆಟ' ಎಂಬ ಕಥೆಗಳನ್ನು ಒಳಗೊಂಡಿದೆ.ಈ ಸಂಕಲನದ ಕಥೆಗಳಲ್ಲಿನಾವು ಎರಡು ಘಟಕಗಳನ್ನು ಗುರುತಿಸಬಹುದು.ಮೊದಲು ಬರೆದಂತಹ ಕಥೆಗಳು ನವ್ಯದ ಕತೆಗಳು ಅಂದರೆ ನವ್ಯದ ಪ್ರಭಾವದಿಂದಾಗಿ ಚಿತ್ತಾಲ, ಮುಂತಾದವರ ಪ್ರಭಾವದಿಂದ ಒಡಮೂಡಿತೆಂದು ಗುರುತಿಸ ಬಹುದು. ಈ ಸಂಕಲನದ ಮೂರು ಕಥೆಗಳು ದೀಪಾವಳಿ ಕಥಾ ಸ್ಪರ್ಧೆಯಲ್ಲಿ ಬಹುಮಾನಿತ ಕಥೆಗಳಾಗಿವೆ. 'ಇದ್ದಾಗ ಇದ್ದಾಂಗ' ಕಥೆಯು ೧೯೭೬ರ ಉದಯವಾಣಿ ದೀಪಾವಳಿ ಕಥಾ ಸ್ಪರ್ಧೆಯ ಮೊದಲ ಬಹುಮಾನಿತ ಕಥೆ. 'ತೆರೆದಷ್ಟೇಬಾಗಿಲು' ೧೯೮೦ರ ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆಯ ವಿಶೇಷ ಬಹಮಾನಿತ

ಕತೆ.'ದ್ವೀಪಗಳು' ೧೯೭೪ರ ಉದಯವಾಣಿ ದೀಪಾವಳಿ ಕಥಾ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ, ಹೀಗೆ ನಾಡಿನ ಪ್ರತಿಷ್ಠಿತ ಮತ್ತು ಪ್ರತಿಭಾನ್ವೇಷಣಾ ಸಂಚಿಕೆಗಳ ಸ್ಪರ್ಧೆಯಲ್ಲಿ ಬಹುಮಾನಿತ ಕಥೆಗಳನ್ನೊಳಗೊಂಡ ಸಂಕಲನವೇ 'ತೆರೆದಷ್ಟೇ ಬಾಗಿಲು' ಕಥಾಸಂಗ್ರಹವಾಗಿದೆ.

ಈ ಸಂಕಲನದ ಎಲ್ಲಾ ಕಥೆಗಳನ್ನು ಗಮನಿಸಿದರೆ ಎಲ್ಲಾ ಕಥೆಗಳು ಕೂಡ ಒಂದು ಇರುವಿಕೆಗಾಗಿ ನಿರಂತರವಾದ ಹುಡುಕಾಟದಲ್ಲಿ ತೊಡಗಿರುವುದು ಮೊದಲ ನೋಟಕ್ಕೆ ಗೋಚರಿಸದೆ ಇರುವುದಿಲ್ಲ. ಹೆದ್ದಾರಿ, ಶಹರ, ಬಾಲ್ಯ, ಅನಾಮಿಕರ ಬದುಕಿನ ವಿವಿಧ ಸ್ತರಗಳನ್ನು ತರೆದಿಡುತ್ತಾ ಹೋಗುವ ನಿರೂಪಣೆಯೇ ಈ ಕಥಾಸಂಗ್ರಹದಲ್ಲಿ ಎದ್ದು ಕಾಣುವ ಅಂಶವಾಗಿದೆ. ಈ ರೀತಿಯ ನಿರೂಪಣಾ ವಿನ್ಯಾಸದ ನವ್ಯ ಮಾರ್ಗದಿಂದ ನಿರೂಪಕನು ಮುಕ್ತವಾಗಲು ಎಣಗಾಡಿರುವ ಪರಿಯನ್ನು ಕಾಣಬಹುದಾಗಿದೆ.'ದಿಗಂಬರ' ಕಥೆಯಲ್ಲಿ ಬ್ಯಾಚುಲರ್ ಲೈಫ್ ಚಿತ್ರಣ, ತೆರೆದಷ್ಟೆ ಬಾಗಿಲು ಕಥೆಯ ದಿನೊಮಾ ಇರಬಹುದು.ಇವರೆಲ್ಲರೂ ತನ್ನ ಇರುವಿಕೆಯನ್ನು ಹುಡುಕುತ್ತಾ ಹೊರಟವರು. ಹೀಗೆ ಈ ಬದುಕಿನ ಅಸಂಗತ ಆಸ್ತಿತ್ವವನ್ನು ಹರಸುತ್ತಾ ನಿರಂತರವಾಗಿ ಹೊಸತನದ ಹುಡುಕಾಟದಲ್ಲಿ ತೊಡಗಿದವರು."ಎಲ್ಲೂ ಏರುದನಿಯಿಲ್ಲದ, ಬದುಕಿನ ಎಲ್ಲಾ ಕ್ಷುದ್ರತೆಗಳ ಅರಿವಿರುವ ಮತ್ತು ಹಾಗಿದ್ದು ಅಂತಹ ಬದುಕನ್ನು ತುಸುವಾದರೂ ಹಸನುಗೊಳಿಸಲು ಪ್ರಯತ್ನಿಸುವ ಪ್ರೇಮಲ ಮನಸ್ಸು ಜಯಂತರ ಕಥೆಗಳ ಆಳದಲ್ಲಿ ಕ್ರಿಯಾಶೀಲವಾಗಿದೆ."[೧]

ದಗಡೂ ಪರಬನ ಅಶ್ವಮೇಧ (೧೯೮೯)

ಈ ಕಥಾಸಂಕಲನವು ಜಯಂತ ಕಾಯ್ಕಿಣಿಯವರ ಮೂರನೇ ಸಂಕಲನವಾಗಿದೆ.ನವ್ಯ ಚಳುವಳಿಯಿಂದ ದಟ್ಟ ಪ್ರಭಾವಕ್ಕೆ ಒಳಗಾದ ತರುಣ ಲೇಖಕ ಜಯಂತರು ತಮ್ಮ ಸಾಹಿತ್ಯ ಪ್ರಯೋಗಗಳಲ್ಲೆಲ್ಲ ತಮ್ಮದೇ ವಿಶಿಷ್ಟತೆಯನ್ನು ತೋರಲು ಯಾವತ್ತೂ ಪ್ರಯತ್ನಿಸುತ್ತಲೇ ಬಂದಿದ್ದಾರೆ.ತಮ್ಮ ಸುತ್ತಲ ಪ್ರಭಾವಗಳಿಗೆ ಮುಕ್ತವಾಗಿ ತೆರೆದುಕೊಂಡಿದ್ದು ತಮ್ಮತನವನ್ನು ಕಾಯ್ದುಕೊಳ್ಳಲು ಜಯಂತಕಾಯ್ಕಿಣಿಯವರು ನಡೆಸಿರುವ ಹೋರಾಟವೇ ಅವರನ್ನು ಇಂದಿಗೂ ಕ್ರಿಯಾಶೀಲರನ್ನಾಗಿಸಿದೆಯೆಂದು ಹೇಳಬಹುದು. ಹಾಗಾಗಿ ಇವರ ಬರವಣಿಗೆಯ ಸಾಪೇಕ್ಷ ಸೋಲು-ಗೆಲುವುಗಳೇನೇ ಇರಲಿ ಅವರ ಕಥೆ-ಕವನಗಳಲ್ಲಿನ ಸೃಜನಶೀಲ ಚಡಪಡಿಕೆಯೆ ಓದುಗರ ಅಂತಃಕರಣವನ್ನು ತಟ್ಟಬಹುದಾಗಿದೆ. ಜಯಂತಕಾಯ್ಕಿಣಿಯವರ ಜಗತ್ತು ವಿಸ್ತೃತವಾಗುತ್ತಿದೆ.

೧.ಜಯಂತ ಕಾಯ್ಕಿಣಿ ಕಥೆಗಳು – ಬೆನ್ನುಡಿ – ಸಿ.ಎನ್.ರಾಮಚಂದ್ರನ್

ಹಾಗೆಂದು ಆಯಾಕಾಲಕ್ಕೆ ಆಕರ್ಷಕವಾಗಿ ಕಾಣುವ ಘೋಷಣೆಗಳಿಗೆ ಏಕಾಏಕಿ ತಮ್ಮನ್ನು ಒಪ್ಪಿಸಿಕೊಂಡು ಬರೆಯುವ ಲೇಖಕರಲ್ಲ. ಇವರು ತಮ್ಮ ಮೂಲದ್ರವ್ಯದೊಡನೆ ಸರಳವಾಗಿ ರಾಜಿ ಮಾಡಿಕೊಳ್ಳದೆ ಅರಿವಿನ ಸಹಜ ವಿಕಸನಕಷ್ಟೇ ತೆರೆದು ಕುಳಿತಿರುವ ಈ ಲೇಖಕ ತಮ್ಮ ಹೊಸ ಕಥಾ ಸಂಕಲನದಿಂದ ಗಮನ ಸೆಳೆಯುತ್ತಾರೆ.

'ಸಮುದ್ರ' ಕಥೆಯ ಸೀತಮ್ಮನ ದಿನಚರಿಯನ್ನು ವರ್ಣಿಸುತ್ತಾ ಲೇಖಕರು "ಪ್ರತಿ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಾಳೆ, ಪ್ರತಿವರುಷ ಬೇಸಿಗೆಗೆ ಸ್ವತಃ ಕೂತು ಬರೆದು ಅಂಗಳ ಮಾಡಿಸುತ್ತಾಳೆ, ದಿನ ರಾತ್ರಿ ಕೂತು ಉರುಟು ಕಲ್ಲು ಹಿಡಿದು ನೆಲ ಒರೆಯುತ್ತಾಳೆ.ಎಲ್ಲಿಂದೆಲ್ಲಿಂದಲೋ ಅಂಚೆಯಲ್ಲಿ ಪತ್ರಿಕೆಗಳನ್ನು ತರಿಸಿ ಅಕ್ಷರ ಬಿಡದೇ ಓದುತ್ತಾಳೆ.ಯಾವ ಮಕ್ಕಳು ಇಂಗ್ಲಿಷ್ ಕಲಿಸಿ ಅಂತ ಬಂದರೂ ಕೈಲಾದ ಸಹಾಯ ಮಾಡುತ್ತಾಳೆ.ಮಳೆಗೆ ಅಂಗಳ ಹಾಳಾದ್ದಕ್ಕೆ ಹಳಹಳಿಸುತ್ತಾಳೆ.ಮಳೆಗೆ ಛಾವಣಿ ಹೊದೆಸಲು ಬಂದ ಆಳುಗಳನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಾಳೆ, ಬೇಸಿಗೆಯ ಚಪ್ಪರವನ್ನು ಮದುವೆ ಚಪ್ಪರದಂತೆ ನಿಲ್ಲಿಸುತ್ತಾಳೆ.ಮಕ್ಕಳಿಗಷ್ಟೇ ಅವರಿಗೆ ಬೇಕಾದ ಹೂ ಕೀಳಲು ಬಿಡುತ್ತಾಳೆ.ದೊಡ್ಡವರು ಕೀಳಲು ಬಂದರೆ ಉರಿದೇಳುತ್ತಾಳೆ. ತಾನು ಓದಿದ ಪುಸ್ತಕಗಳಲ್ಲಿ, ಪತ್ರಿಕೆಗಳಲ್ಲಿ ತನಗೆ ಹಿಡಿಸಿದ ವಾಕ್ಯಗಳನ್ನು, ಸಂಗತಿಗಳನ್ನು ತನ್ನದೇ ಒಂದು ಹಳೆ ನೋಟ್ ಪುಸ್ತಕದಲ್ಲಿ ಅಚ್ಚುಕಟ್ಟಾಗಿ ಬರೆದಿಡುತ್ತಾಳೆ. ಪೆನ್ನಿಗೆ ಅತಿ ಎಚ್ಚರಿಕೆಯಿಂದ ಶಾಯಿ ತುಂಬುತ್ತಾಳೆ.ಇಡೀ ದೊಡ್ಡ ಮನೆಯ ವಿಚಿತ್ರ ಕತ್ತಲೆಯನ್ನು ಎಡಬಿಡದೇ ಆಸ್ವಾದಿಸುತ್ತಾಳೆ."[೧] ಅಂದರೆ ಇದು ಸೀತಮ್ಮನ ಒಂಟಿತನದ ಕಥೆಯಲ್ಲ. ತನ್ನ ಬದುಕಿನ ಎಲ್ಲ ಗೊಂದಲಗಳನ್ನು, ವಿರೋಧಾಭಾಸಗಳನ್ನು ಕೇವಲ ಜೀವ ಪ್ರೀತಿಯಿಂದ ಮೆಟ್ಟಿನಿಂತ ವ್ಯಕ್ತಿಯೋರ್ವಳ ಕಥೆ.ಸೀತಮ್ಮನ ಆಳವಿಗೆ ಮೀರಿದ ಸಮುದ್ರ ಒಂದು ಕಡೆ.ಇನ್ನೊಂದು ಕಡೆ ಇವಳ ಜೀವಂತಿಕೆಗೆ ಸ್ಪಂದಿಸದ ಸಂಪ್ರದಾಯಬದ್ಧ ಸಮಾಜ. ವ್ಯಕ್ತಿ ಚಿತ್ರವಾಗಿ ಬಿಡಬಹುದಾಗಿದ್ದ ಬರವಣಿಗೆ ಕಥೆಯಾಗುತ್ತದೆ. ಸೀತಮ್ಮನ ಬದುಕಿನ ಸ್ಥಿತಿಯನ್ನು ನಿರೂಪಿಸುತ್ತಲೇ ಲೇಖಕರು ಸಾಧ್ಯತೆಯ ವಿನ್ಯಾಸವನ್ನು ಕಲೆಯಾಗಿಸಿಬಿಡುತ್ತಾರೆ.ವಾಸ್ತವಿಕ ವಿವರಗಳನ್ನು ಕಟ್ಟುತ್ತಲೇ ಅವುಗಳನ್ನು ಮೀರಿದ ಸ್ಥಿತಿಯೊಂದಕ್ಕೆ ಏರಿಸಿಬಿಡುತ್ತಾರೆ.ಕಥೆಯ ಕೊನೆಯಲ್ಲಿ ಸೀತಮ್ಮನೊಂದಿಗೆ ಓದುಗರೂ ಹೊಸ ಲೋಕಕ್ಕೆ ತುಡಿಯುವಂತಾಗುತ್ತದೆ.

ಇಳಿವಯಸ್ಸಿನಲ್ಲೂ, ತನ್ನ ಸಾಕು ಮಗಳೊಡನೆ ಸಮುದ್ರದೆದುರು ನಿಂತು, ತನ್ನ ಬಾಲ್ಯದ ಸ್ವಾತಂತ್ರ್ಯವನ್ನು ಮರಳಿ ಪಡೆಯಲು ಮತ್ತು ಆ ಮೂಲಕ ತನ್ನ ಒಂಟಿತನವನ್ನು ಮೀರಲು ನಿರ್ಧರಿಸುವ

---

೧. ಜಯಂತ ಕಾಯ್ಕಿಣಿ ಕಥೆಗಳು – (೨೦೦೩) ಪು.ಸಂ.೧೧೫

ಸೀತಮ್ಮ (ಸಮುದ್ರ), ಬದುಕು ಎಷ್ಟೇ ಕ್ಷುಲಕವಾಗಿದ್ದರೂ ಅದರಿಂದ ಓಡಿಹೋಗುವುದರಲ್ಲಿ ಅರ್ಥವಿಲ್ಲ ಎಂಬ ಸತ್ಯವನ್ನು ಮನಗಂಡು, ತನ್ನ ಊರಿಗೆ ಹಾಗೂ ಕುಟುಂಬಕ್ಕೆ ಮರಳಲು ನಿರ್ಧರಿಸುವ ಉನ್ನಿಕೃಷ್ಣನ್ (ಉನ್ನಿಕೃಷ್ಣನ್ ಬಂದು ಹೋದ) ತನ್ನ ಸುತ್ತಮುತ್ತಲಿನ ಜನರ ಸ್ವಾರ್ಥ- ಅಸೂಯೆಗಳೂ 'ನಿಜಗಳೇ' ಮತ್ತು ಆ ನಿಜಗಳನ್ನು ತಾನು ಒಪ್ಪಿಕೊಂಡೇ ಬದುಕಬೇಕು ಎಂದು ನಿರ್ಧರಿಸುವ ನಿರೂಪಕ (ಕಣ್ಣಿಗೊಂದು ಕ್ಷಿತಿಜ), ಇತ್ಯಾದಿ ಈ ಕಥೆಗಳೆಲ್ಲವೂ ತಮ್ಮ ನೈಜ ಹಾಗೂ ಖಚಿತ ವಿವರಗಳಿಂದ ಮತ್ತು ಶಕ್ತ ನಿರೂಪಣೆಯಿಂದ ಓದುಗರನ್ನು ಗಾಢವಾಗಿ ತಟ್ಟುತ್ತವೆ. ಒಂದೆರಡು ಕಥೆಗಳನ್ನು ಓದಿದ ನಂತರ ಅವುಗಳ ಗತಿ, ಮುಕ್ತಾಯ ಮತ್ತು ಪಾತ್ರಗಳ ವರ್ತನೆ ಎಲ್ಲವೂ ನಮ್ಮ ನಿರೀಕ್ಷೆಗಳಿಗೆ ಅನುಗುಣವಾಗಿಯೇ ಇರುತ್ತದೆ.

'ದಗಡೂ ಪರಮನ ಅಶ್ವಮೇಧ' ಕಥೆಯೂ ನವ್ಯ ಕಥೆಗಳ ಮಾದರಿಯನ್ನು ಮುರಿಯುತ್ತದೆ. ಮದುವೆಯ ದಿಬ್ಬಣದಲ್ಲಿ ಮದುಮಗನ ಕುದುರೆ ಬೀದಿಯಲ್ಲಿ ಆಕಸ್ಮಾತ್ತಾಗಿ ಆಗುವ ಶಬ್ದಕ್ಕೆ ಹೆದರಿ ಎತ್ತಲೋ ಓಡಿ ಹೋಗುತ್ತದೆ, ಆ ಕಾರಣದಿಂದ ಮದುಮಗನಾದ ದಗಡೂ ತಾನುಮದುವೆಯಾಗಬೇಕಿದ್ದ ತರುಣಿಯನ್ನು ಬಿಟ್ಟು ಬೇರೊಬ್ಬಳೊಡನೆ ಮದುವೆಯಾಗಬೇಕಾಗುತ್ತದೆ. ಈ ಕಥೆಯು ಧ್ವನಿಸುವ ವೈಚಾರಿಕತೆಯೆಂದರೆ ವ್ಯಕ್ತಿಗೆ ಆಯ್ಕೆಯ ಸ್ವಾತಂತ್ರ್ಯ ಇಲ್ಲ ಮತ್ತು ಪರಿಣಾಮದ ಜವಾಬ್ದರಿಯೂ ಇಲ್ಲ, ಅರ್ಥಾತ್ , ತನ್ನ ನಿರ್ಧಾರಗಳಿಂದ ವ್ಯಕ್ತಿಯೊಬ್ಬನು ತನ್ನ ಅಸ್ತಿತ್ವವನ್ನು ಕಟ್ಟಿಕೊಳ್ಳಬಹುದು ಎಂಬ ಅಸ್ತಿತ್ವವಾದದ ಮುಖ್ಯಗ್ರಹಿಕೆಯನ್ನು ಈ ಕಥೆ ತಿರಸ್ಕರಿಸುತ್ತದೆ. ಬದುಕಿಗೆ ತನ್ನದೇ ಆದ ಗತಿಯಿದೆ ಮತ್ತು ಈ ಗತಿ ಕಾರ್ಯಕಾರಣಗಳ ತರ್ಕವನ್ನು ಮೀರಿದುದು' ಎಂಬಂತಹ ಲೋಕದೃಷ್ಟಿಯನ್ನು ಈ ಕಥೆಯ ನಂತರ ಬಂದ ಕಥೆಗಳು ದಾಖಲಿಸುತ್ತವೆ.

ಅಮೃತಬಳ್ಳಿ ಕಷಾಯ (೧೯೯೬)

ಇದು ಜಯಂತ ಕಾಯ್ಕಿಣಿಯವರ ನಾಲ್ಕನೇ ಕಥಾಸಂಗ್ರಹವಾಗಿದೆ. ೧೯೯೬ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರಶಸ್ತಿ ಮತ್ತು ೧೯೯೭ರ ಬಿ.ಹೆಚ್. ಶ್ರೀಧರ್ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿಕೊಂಡ ಕೃತಿಯಾಗಿದೆ.ಈ ಸಂಕಲನದಲ್ಲಿ ಹದಿನಾಲ್ಕು ಕತೆಗಳಿವೆ. ಒಂದೊಂದು ಜೀವನಕ್ರಮವನ್ನು ಅನಾವರಣಗೊಳಿಸುತ್ತದೆ.ಬದಲಾದ ವೈಚಾರಿಕತೆ ಕಥೆಗಳ ಶಿಲ್ಪವನ್ನು ಹಾಗೂ ನಿರೂಪಣಾ ಶೈಲಿಯನ್ನೂ ಬದಲಾಯಿಸುತ್ತದೆ.ಈ ಘಟ್ಟದ ಹೆಚ್ಚಿನ ಕಥೆಗಳಲ್ಲಿ ಒಂದು ಕೇಂದ್ರ ಪಾತ್ರವಿಲ್ಲದೆ, ಒಂದಕ್ಕಿಂತ ಹೆಚ್ಚು ಪಾತ್ರಗಳು ಸಮಾನವಾಗಿ ಬೆಳೆಯುತ್ತವೆ.ಮತ್ತು ಕಥೆಯ ಗತಿ ತೀವ್ರವಾಗಿ ನಿರ್ಧಾರದ ಕ್ಷಣದತ್ತ ಓಡುವುದರ ಬದಲಿಗೆ ನಾವು ಒಂದೇ ಸನ್ನಿವೇಶದ ವಿವಿಧ ಮುಖಗಳನ್ನು ನೋಡುತ್ತೇವೆ ಮತ್ತು ಕಥೆಯೂ ಖಚಿತ ಮುಕ್ತಾಯವಿಲ್ಲದೆ ಕೊನೆಯಾಗುತ್ತದೆ.ಈ ಕತೆಗಳು ಧ್ವನಿಸುವ ವೈಚಾರಿಕತೆಯೇನೆಂದರೆ

ಅಸಂಗತ ಬದುಕಿನಲ್ಲಿ ವ್ಯಕ್ತಿಗೆ ಆಯ್ಕೆಗಳಿಲ್ಲ. ಆಯ್ಕೆ ಮಡುವ ಸ್ವಾತಂತ್ರ್ಯವು ಇಲ್ಲ, ವ್ಯಕ್ತಿಗೆ ಸಾಧ್ಯವಿರುವುದು ಸರಳುಗಳಿಂದ ಹೊರಬಂದು ತನ್ನ ಸೀಮಿತ ನೆಲೆಯಲ್ಲಿ ಇತರರಿಗೆ ನೆರವಾಗುವುದು.

'ಕೊಂಡಿ' ಕಥೆಯಲ್ಲಿ ಬಾಬಾ ನಾರಾಯಣ ಮಾಸ್ತರರ ಸಿಟ್ಟು ಮತ್ತು ಶಿಸ್ತು ಕ್ರೂರವೆನಿಸುವ ಖಚಿತ ನಿರ್ಲಿಪ್ತ ನಿಲುವು ಹೊಂದಿರುವವರೆಂದೆ ಊರಿಗೇ ಹೆಸರುವಾಸಿ.ಮಿಲಿಟ್ರಿಗೆ ಹೋದ ಮಧುಕರ ಮೊದಲು ಪತ್ರಗಳಲ್ಲಿ ತಂದೆಗೆ ಉಗಿಯುತ್ತಿದ್ದು 'ನಿಮ್ಮ ಬೇಜವಾಬ್ದಾರಿಯಿಂದಲೇ ನಮ್ಮ ತಾಯಿ ಹೋದಳು, ಮನೆ, ಮಠ ಬೇಡವಿದ್ದರೆ ಮದುವೆ ಯಾಕೆ ಮಾಡಿಕೊಂಡಿರಿ? ನಮ್ಮನ್ನು ಹೆತ್ತು ಕೈತೊಳೆದುಕೊಳ್ಳಲಿಕ್ಕೆ, ದಯವಿಟ್ಟು ನೀಲಕಂಠನನ್ನು ಯಾವುದಾದರೂ ಹಾಸ್ಟಲಿಗೆ ಹಾಕಿ, ನಿಮ್ಮ ಬಳಿಯೇ ಇಟ್ಟು ಜೀವ ತಿನ್ನಬೇಡಿ' (ಕೊಂಡಿ) ಎಂಬ ಮಾತುಗಳು ಆದರ್ಶ ಬದುಕಿನಿಂದಾದ ಅವಾಂತರಗಳನ್ನು ನೈಜ ಬದುಕಿನ ಅತಂಕಗಳನ್ನು ಪ್ರತಿಫಲನಗೊಳಿಸುತ್ತವೆ. 'ಆದರ್ಶ' ಎಂಬುದು ಕಥೆ ಕಾದಂಬರಿ, ಚಿತ್ರಗಳಲ್ಲಿ ನೋಡಲು ತುಂಬಾ ಖುಷಿ, ಅದರೆ, ಅದನ್ನು ಅನುಭವಿಸಲಿಕ್ಕೆ ಕಷ್ಟ, ಅಂತಹ ದುಃಸ್ಥಿತಿಯ ಆದರ್ಶದ ಬದುಕನ್ನು ನಾರಾಯಣ ಮಾಸ್ತರು ಅನುಭವಿಸಿದ್ದಾರೆ. ಹೀಗೆ ಕಥೆಯು 'ಒಂದರ್ಥದಲ್ಲಿ ಅಪ್ಪ ಎಲ್ಲ ಆಟಗಳಿಂದ ಸ್ವಂತದೆಡೆಗೆ ಓಡುತ್ತಿದ್ದರೆ–ನೀಲಕಂಠ ತದ್ವಿರುದ್ಧ ದಿಕ್ಕಿನಲ್ಲಿ ಓಡುತ್ತಿದ್ದ' (ಕೊಂಡಿ) ಹೀಗೆ ಬದುಕಿನ ವಿರೋಧಾಭಾಸಗಳನ್ನು ಈ ಕಥೆಯು ಚಿತ್ರಿಸುವಲ್ಲಿ ಯಶಸ್ವಿಯಾಗಿದೆ.ಜಾಗತಿಕ ಮಾರುಕಟ್ಟೆಯ ಬೀದಿ ಬೀದಿಯಲ್ಲಿ ಚಿತ್ರಪಟಗಳ ಮಾರುತ್ತಿದ್ದವನು ಈಗ ನಮ್ಮನ್ನೆ ಹರಾಜಿಗಿಡುವ ಹುನ್ನಾರ ಹೂಡಿರುವಂತಹ ವಾಸ್ತವ ಸಂಗತಿಗೆ ಈ ಕಥೆಯು ತೆರೆದುಕೊಂಡಿರುವುದು ಶೋಚನೀಯವಾದುದ್ದು.

'ತನ್ಮಯಿಯ ಸೂಟಿ' ಕಥೆಯಲ್ಲಿ ತನ್ಮಯಿಯು ನಗರ ಜೀವನದಿಂದ ಬೇಸೆತ್ತು ಧಾರವಾಡದ ಹಳ್ಳಿಗಾಡಿನ ಬದುಕಿಗೆ ಅವಳ ಮನಸ್ಸು ತುಡಿಯುತ್ತಿದ್ದರೆ, ಅಲ್ಲಿನ ಅವರ ಕಾಕಾ ಮತ್ತೆ ಆಧುನಿಕತೆಯ ಅವಸರದ ಬದುಕಿಗೆ ಮಗನನ್ನು ತಯಾರು ಮಾಡುವಂತಹ ರೀತಿಯು ಒಂದು ಕಡೆ, ಇನ್ನೊಂದು ಕಡೆ ತನ್ಮಯಿ ಬೇಸಿಗೆ ರಜೆಯ ಸಂಭ್ರಮವನ್ನ ಸವಿಯಲು ಬಂದು ಮತ್ತೆ ರಿಸಲ್ಟ್, ಎಂಟ್ರೆನ್ಸ್ ಪರೀಕ್ಷೆ ಹೇಗೆ ಅಸಹಜವಾದ ಭೂತಗಳಿಗೆ ಸಿಲುಕಿ ಬಾಲ್ಯವನ್ನು ಅಸಹಜವಾಗಿ ಕಳೆಯುತ್ತಾಳೆ. ನೆಮ್ಮದಿಯ ನಿದ್ದೆಯನ್ನು 'ಅಲಾರ್ಮ್' ಹಾಳು ಮಾಡುತ್ತದೆ.ಹೀಗೆ ತನ್ಮಯಿಯ ಆಹ್ಲಾದತೆಯೊಂದಿಗೆ ಮನಮಿಡಿವ ಕಥೆಯಾಗಿದೆ.

'ಡೈಮಂಡ್ ಸರ್ಕಸಿನಲ್ಲಿ ಒಂದು ಹೆರಿಗೆ' ಕಥೆಯಲ್ಲಿನ ಟ್ರೇಪೇಜ್ ಕಲಾವಿದೆ 'ಡಂಪಿ'ಯ ಪಾತ್ರವು ಒಂದು ಸಮಾಜವನ್ನು ನಡೆಸಿದ, ನಡೆಸುತ್ತಿರುವ ಮತ್ತು ಮುಂದೆಯೂ ನಡೆಸಲಿರುವ ವಿವೇಕ ಸ್ತ್ರೀಯಂತೆ ಭಾಸವಾಗುತ್ತಾಳೆ.ಕಂಪನಿಯ ಆರ್ಥಿಕ ಸ್ಥಿತಿಯು ಅಷ್ಟು ಸುಭದ್ರವಿಲ್ಲದ್ದರಿಂದ ಎಷ್ಟೇ ವರುಷಗಳಿಂದ ಬಾಣಂತನದ ಮಾತೇ ಇರದ ಡೈಮಂಡ್ ಸರ್ಕಸ್‌ನಲ್ಲಿ ಡಂಪಿಯ ಈ ವಾಂತಿಯ ಸದ್ದು ಜೆರ್ರಿಗೆ

ಕಠಿಣವಾಗುತ್ತದೆ.ಈ ಒಂದು ಸುದ್ದಿಯ ಸದ್ದಡಗಿಸಲು ಚೆರ್ರಿ ಅವನ ಗೆಳೆಯರು ಪ್ರಯತ್ನಿಸುತ್ತಾರೆ.ಆದರೆ ಅದೆಲ್ಲವನ್ನು ಸಹಿಸಿ ತೆಪ್ಪಗಿರುವ ಡಂಪಿಯ ಕರುಣೆಗೆಲ್ಲಿದೆ ಕೊನೆ?ಎಂದು ಓದುಗರ ಮನಸ್ಸು ಮಿಡಿಯುತ್ತದೆ.ಡಂಪಿ ಇಡೀ ಸ್ತ್ರೀಯರ ಪ್ರತೀಕವಾಗಿ, ಬಂಡಾಯವೆದ್ದು ತನ್ನ ಮಗುವನ್ನು ಉಳಿಸಿಕೊಳ್ಳುವ ಪರಿಗೆ ಹೃದಯವು ಕೃತಜ್ಞತಾಭಾವದೊಂದಿಗೆ ಚಡಪಡಿಸುತ್ತದೆ. ಟ್ರೆಪೀಜ್ ಕಲಾವಿದೆ ಡಂಪಿ ತನಗೆ ಹುಟ್ಟುವ ಮಗು ಸರ್ಕಸ್ ಕಂಪನಿಗೆ ಸೇರಬಾರದೆಂದು ಅತಿ ಕಷ್ಟಗಳಿಂದ ಸರ್ಕಸ್ ಡೇರೆಯ ಹೊರಗೆಹೋಗಿ ಮಗುವಿಗೆ ಜನ್ಮ ನೀಡುತ್ತಾಳೆ.ಆದರೆ ಹುಟ್ಟಿದ ಮಗುವಿಗೆ ನಾಲ್ಕು ಕೈಗಳಿದ್ದು' ಸರ್ಕಸ್ ಕಂಪನಿಗೆ ಹೇಳಿ ಮಾಡಿಸಿದ ಮಗು' ಎಂದು ಎಲ್ಲರಿಗೂ ಅದು ಭಾಸವಾಗುತ್ತದೆ, ಆದರೂ, ವೈದ್ಯರು ಅದರ ಕೈಕಾಲುಗಳನ್ನು ಸರಿಪಡಿಸಿ ಆ ಮಗು ಇತರ ಮನುಷ್ಯರಂತೆಯೇ ಬೆಳೆಯಬಹುದು ಎಂಬ ನಂಬಿಕೆಯಿಂದ ಡಂಪಿ ಮಗುವನ್ನಪ್ಪಿ ಮಲಗುತ್ತಾಳೆ.

ಇದ್ದಕ್ಕಿದ್ದಂತೆ ಆರಂಭವಾಗಿ ಅಪಾರ ಸಾವು ನೋವುಗಳಿಗೆ ಕಾರಣವಾಗುವ ಕೋಮು ಗಲಭೆಯನ್ನು ವಯಸ್ಸಾದ ಮಯಿಗೆ ಅರ್ಥೈಸುವುದಾಗಲಿ ಅದನ್ನು ನಿಯಂತ್ರಿಸುವುದಾಗಲಿ ಸಾಧ್ಯವಿಲ್ಲ. ಅವಳಿಗೆ ಸಾಧ್ಯವಿರುವುದೆಂದರೆ ಆಸ್ಪತ್ರೆಗೆ ಸೇರಿದವರ ಶುಸ್ರೂಷೆ ಮಾಡುವುದು ಮತ್ತು 'ಕೋಮು, ವಿಳಾಸ, ತೂಕ, ವಯಸ್ಸು, ಹೆಸರು, ಅಡ್ಡಹೆಸರು' ಏನು ಇಲ್ಲದ ೨೧೩೨ ಎಂಬ ಸಂಖ್ಯೆಯ ಶಿಶುವನ್ನು ಪಾಲಿಸುವುದು, ಹಾಗೆಯೇ, ಮಾಯಿಯ ಮಗ ತನ್ನ ತಂದೆಯ ಭಾವಚಿತ್ರವನ್ನೇ ಅನಾಥ ತರುಣನೊಬ್ಬನಿಗೆ ಕೊಟ್ಟು ಆ ಮೂಲಕ ಅವನ ವಿವಾಹಕ್ಕೆ ನೆರವಾಗುವುದು (ಅಮೃತ ಬಳ್ಳಿ ಕಷಾಯ) ಮತ್ತು 'ಎಲ್ಲಾ ಜೀವಿಗಳ ಒಳಗೂ ತನ್ನ ಆತ್ಮದ ಚಂದ್ರನ ಚೂರು ಹಂಚಿ ಹೋಗಿದೆ, ಒಂದು ಚೂರಿಗೆ ಇನ್ನೊಂದು ಚೂರು ತಗಲಿದರೂ ಸಾಕು' (ಚಂದಿರನೇತಕೆ ಓಡಿದನಮ್ಮ) ಎಂಬ ಪ್ರಬುದ್ಧ ಹಾಗೂ ಮಾನವೀಯ ನಿಲುವು ಇಂತಹ ಕಥೆಗಳನ್ನು ರೂಪಿಸಿದೆ. 'ಅಮೃತ ಬಳ್ಳಿ ಕಷಾಯ'ವು ೨೦೦೪ರಲ್ಲಿ 'ಡಾಟ್ಸ್ ಅಂಡ್ ಲೈನ್ಸ್' ಎಂಬ ಹೆಸರಿನಲ್ಲಿ ಇಂಗ್ಲೀಷ್‌ಗೆ ಅನುವಾದಗೊಂಡಿದೆ.ಹೀಗೆ ಈ ಸಂಕಲನವು ಒಂದು ಶ್ರೇಷ್ಠ ಸಂಕಲನವಾಗಿದೆ.ಇದಕ್ಕೆ ಅನೇಕ ಪುರಸ್ಕಾರಗಳು ಸಂದಿವೆ.

ಬಣ್ಣದ ಕಾಲು (೧೯೯೯)

ಜಯಂತರಕಾಯ್ಕಿಣಿಯವರ ಐದನೇ ಕಥಾ ಸಂಗ್ರಹವೇ 'ಬಣ್ಣದ ಕಾಲು' ಈ ಹೊತ್ತಿಗಾಗಲೇ ಜಯಂತಕಾಯ್ಕಿಣಿಯವರು ಮುಂಬಯಿ ಎಂಬ ದೈತ್ಯನಗರ ಜೀವನದಿಂದ ಬೆಂಗಳೂರಿಗೆ ಬರಲು ಅಣಿಯಾಗಿದ್ದರು. ಜಯಂತಕಾಯ್ಕಿಣಿಯರ ಬಹುತೇಕ ಕಥೆಗಳಲ್ಲಿ ನಗರಪ್ರಜ್ಞೆಯೇ ಕಾಣಸಿಗುವ ವಸ್ತುವಾಗಿದೆ.'ಬಣ್ಣದಕಾಲು' ಎಂಬ ಕಥಾ ಸಂಗ್ರಹವು ಎರಡು ಭಾಗಗಳಿಂದ ಒಟ್ಟು ೧೩ ಕಥೆಗಳನ್ನು ಒಳಗೊಂಡಿದೆ.

'ಬಣ್ಣದಕಾಲು' ಕಥೆಯಲ್ಲಿ ಎರಡು ಪರಿಸರಗಳಿವೆ. ಒಂದು, ಗೋಕರ್ಣದ ಬದಲು ಅದರಂಥೆಯೇ ನೆರೆಯ ಗೋವಾದ ಫರ್ಮಾ ಎಂಬ ಹಳ್ಳಿ ಇನ್ನೊಂದು ಮುಂಬಯಿ, ಅನೇಕ ಕಥೆಗಳಲ್ಲಿ ಈ ನೆಲೆಗಳು ಇದು ಇಲ್ಲವೆ ಅದು ಎಂಬಂತೆ ಚಿತ್ರಿತವಾಗಿದ್ದರೆ, ಈ ಕಥೆಯಲ್ಲಿ ಎರಡೂ ನೆಲೆಗಳು ಒಟ್ಟಿಗೆ ಕಾಣಿಸಿಕೊಳ್ಳುತ್ತವೆ. ಮತ್ತು ಪರಸ್ಪರ ಹೋಲಿಕೆ,ಮೌಲ್ಯಮಾಪನಗಳಿಗೆ ಒಳಗಾಗುತ್ತವೆ. ಇಂಥ ಕಥೆಯಲ್ಲಿ ನಾಯಕ ಯಾರೆಂದು ಹೇಳುವುದೇ ಕಷ್ಟ.ಎರಡು ಪಾತ್ರಗಳಿಗೂ ಕಾಣುವ ಅರಿವು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನಿಲ್ಲುವುದೇ ಈ ಕಥೆಯ ವೈಶಿಷ್ಟ್ಯವಾಗಿದೆ.

'ಚೌತಿ ಚಂದ್ರ' ಕಥೆಯಲ್ಲಿ ಪಾಂಡು ಚಾಲಕನವಾಗಿದ್ದು ತನ್ನೂರಿಗೆ ಗಣೇಶ ಹಬ್ಬಕ್ಕೆ ಸರ್ಕಾರಿ ಬಸ್ಸನ್ನೇ ಡಿಪೋದಿಂದ ತಂದು ಬಿಡುತ್ತಾನೆ. ಆ ನಂತರ ಆ ಊರಿನಲ್ಲಿ ನಾಟಕ ಕಂಪನಿಯ 'ನಟಿ ಜೀಜಾಭಾಯಿ'ಯ ಮೋಹಕತೆಗೆ ಸಿಕ್ಕಿ ಒಂದು ಸಹಜವಾದ ವಾತಾವರಣವೊಂದು ಸೃಷ್ಟಿಯಾಗುತ್ತದೆ. ಚಂದ್ರ ಶಾಲೆಯಲ್ಲಿ ಅವಳು ರವಿಕೆ ಮತ್ತು ಲಂಗದಲ್ಲಿ ಇದ್ದು ಬೀಸಣಿಕೆ ನಡೆಸಿದ್ದು, ಪಾಂಡು ಒಳಬಂದಾಗ ಅವನೆದುರೇ ಜಗಮಗ ಸೀರೆಯೊಂದನ್ನು ಸುತ್ತಿಕೊಂಡು ಅವನ ಮನೆಗೆ ಊಟಕ್ಕೆ ಹೋದದ್ದು. ಹೀಗೆ ಗ್ರಾಮೀಣ ಬದುಕಿನ ವಿವಿಧ ರೀತಿಯ ಹುಲುತನವನ್ನು ಕಥೆ ವಾಸ್ತವಿಕ ನೆಲೆಯಲ್ಲಿ ಪಡಿಮೂಡಿಸಿದೆ.

ಉಳಿದಂತೆ ಹೊಸ್ತಿಲು, ಅಪರಿಚಿತ, ಗಾಳಿಮರದ ನೆಳಲು, ಚಂದ್ರಶಾಲೆ, ಸೇವಂತಿ ಹೂವಿನ ಟ್ರಕ್ಕು, ತೀರ, ಚುಕ್ಕಾಣಿ ಕಥೆಗಳು ಕೂಡ ಮನುಷ್ಯ ಕುತೂಹಲದ ಕೇಂದ್ರದಲ್ಲೇ ನಾಗರಿಕರ ಅನಾಗರಿಕತೆಗಳನ್ನು ಕೃತಕತೆಯನ್ನು ಬಿಂಬಸುವಂತಹ ವ್ಯಕ್ತಿ ಸ್ವಭಾವ ಕೇಂದ್ರದಲ್ಲಿ ಸೂಕ್ಷ್ಮವಾದ ಭಾವಗ್ರಹಿಕೆಗಳನ್ನು ಸೆರೆಹಿಡಿದು ಬದುಕಿನ ಭಾವನೆಗಳನ್ನು ಅನಾವರಣಗೊಳಿಸುವ ಪರಿಯು ಸಹೃದಯ ಓದುಗನಲ್ಲಿ ಬದುಕಿನ ಕುರಿತಾದ ಒಂದು ಧ್ಯಾನವನ್ನು ಮೂಡಿಸುತ್ತದೆ. ಇದುವರೆಗಿದ್ದ ಉಡಾಫೆಯೊಂದು ಸಾಮಾಜಿಕ ಹೊಣೆಯಾಗುವತ್ತ ಮನಸ್ಸು ಮಾಡುತ್ತದೆ.

ತೂಫಾನ್ ಮೇಲ್ (೨೦೦೫)

'ಕತೆಗಿಂತ ಮಿಗಿಲಾದ ಸತ್ಯಯಾವುದಿದೆ?' ಹೌದಲ್ಲವೆ ಕಲೆಯೆಂಬುದು ಮನುಷ್ಯನನ್ನು ಮಾನವೀಯ ಮೌಲ್ಯಗಳಿಂದ ರೂಪಿಸುವಂತಹ ಅಸ್ತ್ರವಾಗಿದೆ. ಕಲೆ ಬದುಕಿನ ಅತ್ಯಂತ ಶ್ರೇಷ್ಠವಾದ ನೆಲೆ-ಬೆಲೆಯಾಗಿ ಬದುಕಿನಲ್ಲಿ ಅವತರಣಿಕೆಯಾಗಿ ಮೂಡುತ್ತದೆ.ಕಲೆ ಎಲ್ಲರನ್ನು ಕೈ ಬೀಸಿ ಕರೆಯುತ್ತದೆ.ಆದರೆ, ಕೆಲವರನ್ನು ಮಾತ್ರ ಆಯ್ಕೆ ಮಾಡಿಕೊಳ್ಳುತ್ತದೆ.ಈ ಕಲಾವಂತಿಕೆಯಲ್ಲಿ ಪ್ರಫುಲ್ಲವಾಗಿ ಮನಸ್ಸು ಅರಳುತ್ತದೆ,ಮಾಗುತ್ತದೆ ಮತ್ತು ಜೀವನವನ್ನು ಸಾರ್ಥಕದ ನೆಲೆಯಲ್ಲಿ ಬಾಳುವಂತೆ ಮಾಡುತ್ತದೆ.ಹೀಗಾಗಿ ಕಲೆಯು ಅನೇಕ ರೀತಿಯಲ್ಲಿ ಎಲ್ಲರ ಜೀವನದಲ್ಲೂ ಪ್ರಭಾವಿತಕ್ಕೊಳಗಾಗಿಸಿ ಒಂದು ಅಂತಿಮ

ಗುರಿಯನ್ನು ಮೆಟ್ಟಿ ನಿಂತು ಬದುಕಿನ ಗೆರೆಯನ್ನು ದಾಟಿ ಕುತೂಹಲವನ್ನು ಒಂದು ಬಗೆಯ ಅನಂತತೆಯ ಮೌನವನ್ನು ತಂದು ಎರಕ ಹೊಯ್ಯುತ್ತದೆ.ಕತ್ತಲಿಗೆ ಬೆಳಕಿನ ಬಟ್ಟೆಯನ್ನು, ಮೌನಕ್ಕೆ ಮಾತಿನ ಬಟ್ಟೆಯನ್ನು ತೊಡಸಿದಷ್ಟು ಮತ್ತೆ ಮತ್ತೆ ಬೆತ್ತಲಾಗುವ ಪರಿಮಾತುಗಳನ್ನು ದಾಟಿಸುವ ಮಹಾಮೌನಕ್ಕಿಂತ ಮಿಗಿಲಾದ ಸಾರ್ಥಕತೆಯೇನು ಬೇಕು ಕಲೆಗೆ?'ತೂಫಾನ್ ಮೇಲ್' ಎಂಬ ಕಥಾ ಸಂಕಲನದಲ್ಲಿ ಒಟ್ಟು ಹನ್ನೊಂದು ಕತೆಗಳಿವೆ. ಇವೆಲ್ಲವೂ ಮುಂಬಯಿಯನ್ನು ಬಿಟ್ಟು ಬಂದ ನಂತರ ಜಯಂತ ಕಾಯ್ಕಿಣಿಯವರು ಬರೆದ ಕಥೆಗಳಾಗಿವೆ. ಇದರಲ್ಲಿ 'ನೋ ಪ್ರೆಸೆಂಟ್ಸ್ ಪ್ಲೀಸ್', 'ಕಣ್ಮರೆಯಕಾಡು', 'ಪಾರ್ಟನರ್', 'ಭಾಮಿನಿ ಸಪ್ತಪದಿ', 'ಕನ್ನಡಿ ಇಲ್ಲದ ಊರಲ್ಲಿ', 'ತೂಫಾನ್ ಮೇಲ್', 'ಬಕುಲಗಂಧ', 'ಬಾವಿಯೊಲ್ಲೊಂದು ಬಾಗಿಲು', 'ಗೇಟ್ ವೇ', 'ಟಿಕ್ ಟಿಕ್‌ಗೆಳೆಯ', 'ಒಪೆರಾ ಹೌಸ್' ಎಂಬಂಥ ತಲೆಬರಹವಿರುವ ಕಥೆಗಳುಂಟು.

'ಕಣ್ಮರೆಯ ಕಾಡು'ವಿನಲ್ಲಿನ ಭೋಟು ಸಂಬಂಧದಲ್ಲಿ ಆತ್ಮೀಯನಾಗುವ ಮೂಲಕ ಓದುಗನಲ್ಲೊಂದು ಮಾನವೀಯ ಸ್ಪಂದನವನ್ನುಂಟು ಮಾಡುತ್ತಾನೆ. ಪೂರ್ವಿಯು ಸುಹಾಸನನ್ನು ಪ್ರೇಮ ವಿವಾಹ ಮಾಡಿಕೊಂಡಾಗ ಸುಹಾಸನು ಪರುಳೇಕರ ಮತ್ತು ಯಮುನಾಬಾಯಿಯವರನ್ನು ಸರಿಯಾಗಿ ನೋಡಿಕೊಳ್ಳದೆ ಬೇಸರ, ಜಿಗುಪ್ಸೆಯನ್ನುಂಟು ಮಾಡುತ್ತಾನೆ, ಕಥೆಗಾರನ ಸೂಕ್ಷ್ಮ ಗ್ರಹಿಕೆಯು ಅವನ ಇಲ್ಲದ ತಿಳಿ ಹಳದಿ ಟೀಶರ್ಟಿನ ಒಣಗು ತಂತಿಯ ನಿರಿಗೆ ಗೆರೆ ಮನದಲ್ಲಿ ಮೂಡುತ್ತಿತ್ತು. (ಕಣ್ಮರೆಯ ಕಾಡು) ಹೀಗೆ ಬದುಕಿನ ಸೂಕ್ಷ್ಮವಾದ ಸಂಗತಿಗಳನ್ನು ಗ್ರಹಿಸಿ ಹಿಡಿದು ಹೆಕ್ಕಿ ತಂದು ಕಥಾ ಹಂದರಕ್ಕೆ ಸಹಜವಾಗಿಡುವ ಕೆಲೆಗಾರಿಕೆಯು ಇವರ ಕಲಾವಂತಿಕೆಗೆ ಹಿಡಿದ ಕನ್ನಡಿಯಾಗಿದೆ.

'ಭಾಮಿನಿ ಸಪ್ತಪದಿ' ಯಲ್ಲಿ ಭಾಮಿನಿಯ ವೈವಾಹಿಕ ಜೀವನದ ವ್ಯಥೆಯನ್ನುಕುರಿತು ಹೇಳುತ್ತದೆ.ಭಾಮಿನಿ ಮುನ್ಸಿಪಲ್ ಚುನಾವಣೆಗೆ ನಿಂತು ಚೂರು ಪ್ರಚಾರವಿಲ್ಲದೆ ಗೆದ್ದು ಬಿಡುವ, ಚಂದದ ಮೋರೆ ತೋರಿಸಿ ಗೆದ್ದಿದ್ದಾಳೆ ಎಂದರು. ನಗರ ಪಾಲಿಕೆಯಲ್ಲಿ ಮುಖ್ಯ ವಿಷಯಗಳ ಬಗ್ಗೆ ಆಕೆ ಮಾತಾಡಲು ತೊಡಗಿದರೆ ಅಧ್ಯಕ್ಷರ ಸಮೇತ ಎಲ್ಲರೂ ಅವಳನ್ನೇ ಬಾಯಿಬಿಟ್ಟುಕೊಂಡು ನೋಡುತ್ತಾ ಕೂತುಬಿಡುತ್ತಿದ್ದರೇ ಹೊರತು ಅವಳ ಮಾತನ್ನು ಕೇಳುತ್ತಿರಲಿಲ್ಲ. "ಸಾದಾ ನೂಲಿನ ಸೀರೆಯನ್ನು ಗಂಜಿ ಹಾಕಿ ಉಡುವ ಅವಳ ಗತ್ತು,ತುರುಬು, ಆಗಾಗ ಕನ್ನಡಕ ತೆಗೆದು ಅದನ್ನು ಪುಟ್ಟ ಕರವಸ್ತ್ರದಿಂದ ಒರೆಸುವ ಶೈಲಿ, ಅಹಮದಾಬಾದಿನ ಬಿಸಿಲಿಗೂ ಕಂಕುಳ ಒದ್ದೆಯಾಗದ ಆಕೆಯ ಕುಪ್ಪಸ ಇವುಗಳಲ್ಲೇ ಏನೋ ವಿಶೇಷವಿತ್ತು."[೧](ಭಾಮಿನಿ ಸಪ್ತಪದಿ) ಹೀಗೆ ಅವಳ ಸೌಂದರ್ಯ ಮತ್ತು ಕ್ರಮೇಣದ ಇವರಿಬ್ಬರ ವೈವಾಹಿಕ ಜೀವನದಲ್ಲಿ ಈ ಏರು-ಪೇರುಗಳೇ ಬಿರುಕುಂಟಾಗಲು ಕಾರಣವಾಗುತ್ತದೆ.

೧.ತೂಫಾನ್ ಮೇಲ್ – (೨೦೦೮) ಜಯಂತ ಕಾಯ್ಕಿಣಿ ಕಥೆಗಳು ಮೂರನೇ ಮುದ್ರಣ ಪು.ಸಂ.೪೨

ಇಡೀ ಸಂಕಲನದಲ್ಲಿ ನನ್ನನ್ನು ಕಾಡಿದ, ಪದೇ ಪದೇ ಓದಿಸಿಕೊಂಡ ಕತೆಯೆಂದರೆ 'ಟಿಕ್ ಟಿಕ್ ಗೆಳೆಯ' ಒಮ್ಮೆ ವರ್ತಮಾನದಲ್ಲಿ, ಮತ್ತೊಮ್ಮೆ ಭವಿಷ್ಯದ ಕುರಿತು ಯೋಚಿಸುತ್ತದೆ.ಮಗದೊಮ್ಮೆ ಭೂತಕಾಲದಲ್ಲಿ ಸಿಕ್ಕೆ ಗದ್ಗಿಸಿ ಮೂಕವಾಗಿಬಿಡುತ್ತದೆ.ಹೀಗೆ ಈ ಮೂರು ಕಾಲದ ನೆಲೆಯಲ್ಲಿ ಕಾಡಿದ ಈ ಕಥೆಯು ನನ್ನೊಳಗೊಂದು ಗಡಿಯಾರವಾಗಿ ಮಿಡಿದಿದೆ.ಸಮಯ ಮತ್ತು ವಯಸ್ಸು ತನ್ನ ಪಾಡಿಗೆ ನಡೆಯುತ್ತಿರುತ್ತದೆ.ಯಾರಿಗೂ ಕಾಯುವುದಿಲ್ಲ ಮತ್ತು ಯಾರ ಅಪ್ಪಣೆಯೂ ಬೇಕಿಲ್ಲ. ಇಂಥ ಕಾಲದ ಜೊತೆಗೆ ಮಾನವನ ಬದುಕಿನ ಅನಂತಾನಂತಗಳು, ನಲಿವು-ನೋವುಗಳು, ಸೋಲು-ಗೆಲುವುಗಳು, ಸುಖ-ದುಃಖಗಳು, ಸರಸ-ವಿರಸಗಳು ಸಾಗುತ್ತಿರುವುದು ಕಾಲಾತೀತ ಸತ್ಯವಾಗಿದೆ.ಈ ಸಂಕಲನದ ಅತ್ಯುತ್ತಮ ಕಥೆಯೆಂದರೆ ಇದೆ ಎಂದು ಹೇಳಬಹುದು.

ಮುಂಬಯಿಯ ನಾನಾವತಿ ಅಸ್ಪತ್ರೆಯ ಒಂದು ಭಾಗದಲ್ಲಿ ನಡೆಯುತ್ತಿರುವ ಕ್ವಿಜ್ ಸ್ಪರ್ಧೆಯಲ್ಲಿ ಭಾಗವಹಿಸಲು ಮಧುಬನಿ ಎಂಬ ಕಿಶೋರಿ ಮತ್ತವಳ ತಂದೆ ಅಲ್ಲಿಗೆ ಬರುತ್ತಾರೆ.ಸ್ಪರ್ಧೆಯಲ್ಲಿ ಎಲ್ಲಾ ಪ್ರಶ್ನೆಗಳಿಗೂ ಸರಾಗವಾಗಿ ಉತ್ತರಿಸುವ ಮಧುಬನಿಗೆ 'ಭೊಪಾಲ್ ಗ್ಯಾಸ್ ದುರಂತದ ದಿನ ಯಾವುದು?'ಎಂಬ ಪ್ರಶ್ನೆಗೆ ಉತ್ತರಿಸಲಾಗಲಿಲ್ಲ; ಏಕೆಂದರೆ, ಆ ದುರಂತದೊಡನೆಯೇ ಅವಳಿಗೆ ಶವವಾಗಿ ಮನೆಗೆ ಹಿಂದಿರುಗಿದ ಜ್ಯೋತ್ಸ್ನ ಭಾಭಿ ಮತ್ತು ಅವಳ ಮಗಳು ಸೇಜಲ್ ಎಲ್ಲರೂ ನೆನಪಿಗೆ ಬರುತ್ತಾರೆ.ಕನ್ನಡದ ಶ್ರೇಷ್ಠ ಕಥೆಗಳಲ್ಲಿ ಒಂದಾಗಿರುವ ಈ ಕಥೆ ಒಂದು ನೆಲೆಯಲ್ಲಿ ಸಮಾಜದ ಪ್ರತಿಷ್ಠಿತ ವರ್ಗದವರ ಹೃದಯ ಹೀನತೆಯನ್ನು ಕುರಿತ ವಿಡಂಭಣೆಯಾಗುತ್ತದೆ.(ಭೂಪಾಲ್ ಗ್ಯಾಸ್ ದುರಂತ ಕ್ವಿಜ್ ಮಾಸ್ಟರನಿಗೆ ಒಂದು ಕ್ವಿಜ್ ಪ್ರಶ್ನೆ ಅಷ್ಟೆ, ಮಧುಬನಿಗೆ, ತನ್ನೆಲ್ಲಾ ಗೆಳೆತಿಯರು ಶವಗಳಾದ ದಿನ), ಮತ್ತೊಂದು ನಲೆಯಲ್ಲಿ, ಕಥೆ ಕಾಲದ ಅಗಣಿತ ಸಾಧ್ಯತೆಗಳ ದಾಖಲೆಯಾಗುತ್ತದೆ. ಬಾಲ್ಯದಲ್ಲಿ ತನಗಾದ ಅವಮಾನವನ್ನು ಇನ್ನೂ ಮೆರೆಯಲಾಗದ ಮಧುಬನಿಯ ತಂದೆ ಆಲ್‌ಜೈಮರ್ ರೋಗ ಕಾರಣ ಏನನ್ನೂ ನೆನಪಿಟ್ಟುಕೊಳ್ಳಲಾಗದ ಬುದ್ಧೂರಾಮ್, ಕಾಲವೆಂದರೆ ನಿರ್ಣಾಯಕ ಕ್ಷಣಗಳಾಗಿರುವ ಮಧು ಬನಿ, 'ಯುವರ್ ಟೈಮ್ಸ್ ಸ್ಟಾರ್ಟ್ಸ್ ನೌ' ಎಂದು ಟೀವಿಯಿಂದ ಹೇಳಿದ ಕ್ವಿಜ್ ಮಾಸ್ಟರ್ ಇವರೆಲ್ಲರೂ ಮಾನವ-ಕಾಲ ಸಂಬಂಧದ ಅನೇಕಾನೇಕ ವಿನ್ಯಾಸಗಳು, ಶಿಲಾಪ್ರತಿಮೆಗೆ ಹಾಕಿರುವ ನಿಜವಾದ ಕನ್ನಡಕ, ಕರೀನಾಗೆ ಕೊಡಲು ಬದ್ದೂರಾಮ್ ತಯಾರು ಮಾಡಿರುವ ಕಾಗದದ ದೋಣಿ-ಇವೆಲ್ಲವೂ ಕೃತಿಯಲ್ಲಿ ಧ್ವನಿ ತರಂಗಗಳನ್ನೇ ಸೃಜಿಸುವ ಅದ್ಭುತ ಸಂಕೇತಗಳಾಗುತ್ತವೆ. ಇಂದಿನ ಶ್ರೇಷ್ಠ ಕತೆಗಾರರಲ್ಲಿ ಜಯಂತಕಾಯ್ಕಿಣಿ ಒಬ್ಬರು ಎಂಬುದನ್ನು ಇಲ್ಲಿಯವರೆಗೆ ಬಂದಿರುವ ಅವರ ಸಂಕಲಗಳು ನಿರ್ವಿವಾದವಾಗಿ ದರ್ಶಿಸುತ್ತವೆ.

ಚಾರ್‌ಮಿನಾರ್ (೨೦೧೨)

ಚಾರ್‌ಮಿನಾರ್ ಜಯಂತ ಕಾಯ್ಕಿಣಿಯವರ ಇತ್ತೀಚಿನ ಕಥಾ ಸಂಕಲನವಾಗಿದೆ. "ವಿಳಾಸ ಸರಿಯರದೆ ಪ್ರತಿ ಅಂಚೆ – ಕಛೇರಿಯಲ್ಲೂ ಬಟವಡೆಯಾಗದೆ ಉಳಿಯುವ ಅನಾಥ ಕಾಗದಗಳಿಗೆ"[೧] ಅಂದರೆ ವಿಳಾಸವಿಲ್ಲದವರ ಕುರಿತು ಲೇಖಕನಿಗಿರುವ ನಿಲುವು ಮತ್ತು ಕಾಳಜಿಯನ್ನು ಈ ಸಾಲುಗಳು ತಿಳಿಸುತ್ತವೆ. ಚಾರ್‌ಮಿನಾರ್ ಎಂಬ ಕಥಾಸಂಕಲನದಲ್ಲಿ ಒಟ್ಟು ಎಂಟು ಕಥೆಗಳಿವೆ. ಮಧುಬಾಲಾ, ಅಭಂಗ ಅಭಿಸಾರ, ನೀರು, ಅಲ್ಪವಿರಾಮ, ಕೋಮಲ ಗಾಂಧಾರ, ಒಳಾಂಗಣ, ಬಣ್ಣದ ಬಾನುಲಿ, ಚಾರ್‌ಮಿನರ್ ಹೀಗೆ ಕಥೆಗಳು ತಲೆಬರಹವನ್ನು ಹೊಂದಿವೆ. ಜಯಂತರು ಸಿನಿಮಾ ಮಧ್ಯಮದಲ್ಲಿ ತೊಡಗಿಕೊಂಡಾಗ 'ಕನ್ನಡದಲ್ಲಿ ಜಯಂತ ಕಾಯ್ಕಿಣಿಯವರು ಕಳೆದು ಹೋಗಿದ್ದಾರೆ' ಎಂಬ ಕೂಗು ಎದ್ದಾಗಲೇ ಒಂದು ಜಿಲೇಬಿ ಮತ್ತು ಚಾರ್ ಮಿನಾರ್ ಎಂಬ ಕೃತಿಗಳು ಬಂದಿರುವುದು ಸಾಹಿತ್ಯದ ಕುರಿತು ಜಯಂತರ ಒಡನಾಟವನ್ನು ತಿಳಿಯ ಬಹುದಾಗಿದೆ.

ಚಾರ್ ಮಿನಾರ್ ಕಥೆಯಲ್ಲಿನ ನೈರುತ್ಯ ಗಾವಂಕರ್ ಒಬ್ಬ ಸಾಮಾಜಿಕ ಜವಾಬ್ದಾರಿಗೆ ತನ್ನನ್ನು ಅರ್ಪಿಸಿಕೊಂಡವನು.ಇಡೀ ಕಥೆಯಲ್ಲಿ ಚಾರ್‌ಮಿನಾರ್, ರೈಲುನಿಲ್ದಾಣ ಸಮುದ್ರ ಇವುಗಳು ಬದುಕಿಗೆ ಕ್ರಿಯಾಶೀಲ ಪ್ರತೀಕಗಳಾಗಿ ಕಥೆಯುದ್ದಕ್ಕೂ ಇದೆ. "ಮುಂದಿನ ಸಲಕ್ಕೆ ಅದೊಂದು ಇರಲಿ, ನಿತ್ಯದಲ್ಲೂ ಬಾಕಿ ಇರುವ ನಿಗೂಢದಂತೆ ಸದ್ಯ ನಾನು ನೋಡದಿರುವ ಎಷ್ಟೊಂದು ಅಕ್ಷೋಹಿಣಿ ಸಂಗತಿಗಳಿವೆಯಲ್ಲ"[೨](ಚಾರ್ ಮಿನಾರ್) ಎಂದು ನೈರುತ್ಯ ಹೇಳುವ ಮಾತು ಇಡೀ ಸಮುದಾಯದಲ್ಲಿನ ಜನರ ಬದುಕಿನ ಮಾತಾಗುತ್ತದೆ. 'ಬಾಕಿ'ಯಾಗಿ ಇರುವುದರಿಂದಲೇ ನಿತ್ಯ ಕ್ರಿಯಾಶೀಲವಗಿ ತೊಡಗಲು ಸಾಧ್ಯವಿರುವುದು ಎಂಬ ಅರಿವನ್ನು ತಿಳಿದವನಾಗಿ ನೈರುತ್ಯ ಪ್ರಕಾಶಿಸುತ್ತಾನೆ. ರೈಲಿನಲ್ಲಿ ಸಿಗುವ ಬೀಡಾಡಿ ಮಕ್ಕಳು ಮನೆ ಬಿಟ್ಟು ಓಡಿಬಂದವಾಗಿದ್ದು, ತಮ್ಮ ಊರುಗಳ ಮೂಲಕವೇ ಹಾಯುವ ರೈಲುಗಳಲ್ಲಿ ಕೆಲಸ ಮಾಡುವಂತಹವು.ಈ ಮಕ್ಕಳು ಮನೆ ತೊರೆಯುವದಕ್ಕೂ ಮತ್ತು ಹಗಲು ರಾತ್ರಿಗಳನ್ನು ಸೀಳುತ್ತ ಓಡುವ ಈ ರೈಲಿಗೂ ಏನೋ ಸಂಬಂಧ?ಒಬ್ಬ ಹುಡುಗ ಮಜ್ಜಿಗೆ ಮಾರುತ್ತ ಬರುವಾಗ ನೈರುತ್ಯ ಅಡ್ಡಗಾಲು ಚಾಚಿದ.'ಕಾಲು ಜರಾ ತೆಗೀರಿ' ಎಂದು.ಎಲ್ಲಿಡಲ್ಲಿ ಮರಾಯ ಎಂದಾಗ "ಎಲ್ಲಾರ ಇಡೀ ಸರ್ ನಿಮ್ಮ ಕಾಲು, ನನ್ನ ಹೊಟ್ಟೆ ಮ್ಯಾಲ ಇಡಬ್ಯಾಡ್ರೀ ಅಷ್ಟೆ"[೩]ಎನ್ನುವ ಮಾತುಗಳುಓದುಗನ ಹೃದಯಕ್ಕಿಳಿದು ಮನಸ್ಸಿಗೆ ನಾಟುತ್ತವೆ. ಬೀಡಾಡಿ ಮಕ್ಕಳ ಕುರಿತು ಏನೋ ಒಂದು ಸಹನೀಯ ಮರುಕ ಮತ್ತು ಬದುಕಿನ ಕುರಿತ ಒಂದು ಆತ್ಮೀಯತೆ, ಜೀವ ಪ್ರೀತಿಯು ಮೂಡುತ್ತದೆ.ಕಲೆ ಮಾಡುವುದು ಇದಲ್ಲದೆ ಮತ್ತೇನು?

---

೧. ಚಾರ್‌ಮಿನಾರ್ – ಜಯಂತ ಕಾಯ್ಕಿಣಿ ಕಥೆಗಳು –ಪು.ಸಂ.೫.

೨. ಅದೇ – ಪು.ಸಂ.೧೨೨.

೩. ಅದೇ –ಪು.ಸಂ.೧೨೩

ಈ ಮಕ್ಕಳೆಲ್ಲ ಸ್ಥಿತಿವಂತರ ಮಕ್ಕಳೆಂದು ತಿಳಿದಾಗ ಅಂದರೆ ಶಿಕ್ಷಕರು, ಗುಮಾಸ್ತರು, ಬ್ಯಾಂಕ್ ಕೆಲಸಗಾರರು, ಪೋಲಿಸರು, ಕಿರಾಣಿ ಅಂಗಡಿಯವರ ಇಂಥವರ ಮಕ್ಕಳೇ ಅಗಿದ್ದಾರೆಂದು ತಿಳಿದಾಗ ಮನಸ್ಸಿಗೇನೋ ಒಂದು ಬಗೆಯ ನಿರಾತಂಕದ ಭಾವ ಮೂಡುತ್ತದೆ.ರೈಲಿನ ಬೆನ್ನ ಹಿಂದೆ ಹೋಗಿ ಮುಂದಾವುದೋ ನಿಲ್ದಾಣದಲ್ಲಿ ಬೂಟ್‌ಪಾಲಿಷ್, ಕ್ಲೀನರ್ ಕೆಲಸ ಮಾಡಬೇಕೆಂದು ತಿಳಿದರೂ ಬೆಚ್ಚನೆ ಗೂಡು ತೊರೆದು ರೈಲಿಗೆ ಓಡಬೇಕೆನಿಸುತ್ತದೆ ಎಂಬ ನಿರೂಪಕನ ಮಾತುಗಳು ಆತ್ಮೀಯತೆಯನ್ನು, ಬದುಕನು ಕುರಿತ ಕುತೂಹಲವನ್ನು ನಿರಾತಂಕವನ್ನು ಒಮ್ಮೆಗೆ ಮೂಡಿಸಿ ಒಂದು ರೀತಿಯ ಔದಾರ್ಯವನ್ನು ಕಾಣುತ್ತೇವೆ.

ರೈಲು ಕೇವಲ ಒಂದು ರೈಲು ಅಲ್ಲ. ಅದೊಂದು ಜೀವನ ವಿಧಾನವಾಗಿ ನಮ್ಮೊಡನೆ ಅವಿಭಾಜ್ಯ ಅಂಗವಾಗಿದೆ. ಮಧ್ಯಮ ವರ್ಗದ ಬದುಕಿದೆ.ಈ ಕಥೆಯನ್ನು ಓದುತ್ತಾ ನಾವು ರೈಲಿನಲ್ಲಿ ಪಯಣಿಸುವಾಗ ಅನುಭವಗಳನ್ನು ನೆನಪಿಗೆ ತರುತ್ತವೆ. ಹೀಗಾಗಿ 'ರೈಲು' ಇಡೀ ಕಥೆಯುದ್ದಕ್ಕೂ ಜೀವನದ ಕುರಿತ ಕುತೂಹಲವಾಗಿ, ಆತಂಕವಾಗಿ ನಮ್ಮ ಎದೆಯೊಳಗು ಸದ್ದು ಮಾಡುತ್ತ ಓಡುತ್ತಿರುತ್ತದೆ.'ಜೀವನವೇ ರೈಲು ಪ್ರಯಾಣ, ದೇಹವೇ ಬೋಗಿ ಕಾಣಣ್ಣ ನಿನ್ನೆ ನಾಳೆ ಎರಡೆ ನಿಲ್ದಾಣ' ಎನ್ನುವ ಸಿನಿಮಾ ಹಾಡು ಅದೆಷ್ಟು ಜೀವಂತಿಕೆಯನ್ನು ಸಾರುತ್ತದೆ.ಹೀಗೆ ಬದುಕಿನ ಸಾಧ್ಯತೆಗಳ್ನು ತೆರೆದು ತೋರಿಸುವಂತಹ 'ಚಾರ್ ಮಿನಾರ್' ಕೂಡ ಪ್ರೇಮಿಯೊಬ್ಬನ ಜೀವಕ್ಕೆ ಎರಕವಾಗುತ್ತದೆ.ಪದೇ ಪದೇ ಸಮುದ್ರ ತೆರೆಗಳು ದಡಕ್ಕೆ ಹೊಮ್ಮುವ ರೀತಿಯಲ್ಲೂ ಕೂಡ ಜೀವನ ನಿರಂತರ ಹೊಸತನದ ಹುಡುಕಾಟವನ್ನು ತಿಳಿಸುತ್ತದೆ.

ಮಧುಬಾಲಾದಲ್ಲಿ ಶಹರ ಕುರಿತ ನಿರೂಪಕನು ಈ ರೀತಿ –ಕಿಂಚಿತ್ತೂ ಅಭ್ಯಾಸವಾಗದಂತೆ ಒಳಗಿನವನ್ನಾಡಿಸುವ ಸಲಿಗೆ ಈ ಶಹರದ ಈ ಇರುಳಿನ ಈ ಪ್ರಭೆಯಲ್ಲಷ್ಟೇ ಸಾಧ್ಯ ಅನಿಸಿತು ಏಕಾಂತನಿಗೆ (ಮಧುಬಾಲಾ) ಹೀಗೆ ಬದುಕಿನೊಟ್ಟಿಗೆ ಶಹರ, ಸಮುದ್ರ, ರೈಲು, ರೈಲುನಿಲ್ದಾಣ, ಬಿಸಿಲುಕೋಲು, ಪ್ರತೀಕಗಳು ಅರಿವಿಲ್ಲದೆ ಕಥಾ ನಿರೂಪಣೆಯಲ್ಲಿ ಸೇರಿ ಒಂದು ಹೊಸದಾದ ಪ್ರತಿಮೆಯಾಗಿ ವಿನೂತನ ಅರ್ಥವನ್ನು ಹೊಳೆಸುವುದರಲ್ಲೇ ಏನೋ ಒಂದು ಮಜವಿದೆ. ಹೀಗೆ ಭಾರವಿಲ್ಲದ ಅಪರಿಚಿತತೆಯಲ್ಲಿ ಹುಟ್ಟುವ ಹೊಸ ಅಮಾಯಕತೆ ಇದು.

'ಮಳೆ' ಎಂದರೆ ಏನೋ ಪುಳಕಗೊಳ್ಳುತ್ತದೆ ಮನಸ್ಸು.ಮೊದಲ ಮಳೆಯೆಂದರೆ ಅದೇನೋ ಒಂದು ಹೊಸತನದ ಖಬರಿರುತ್ತದೆ.ಹಾಗೆಯೇ ಅದು ಮಾನವ ಬದುಕಿನೊಂದಿಗೆ ಹೊಂದಿರವ ಸಂಬಂಧ ಜೀವನ್ಮುಕ್ತವಾದದು, ನಿರಂತರವಾದ ಸಮ್ಮೋಹಿನಿಯಾಗಿದೆ.

ಹೀಗಿರುವಾಗ "ಇಲ್ಲಿ ನನ್ನ ಟ್ಯಾಕ್ಸಿ ನೆಡೆದರೆ ಮಾತ್ರ ಅಲ್ಲಿ ನಮ್ಮ ಒಲೇ ಉರಿಯೋದು"[೧] ಎಂಬ ಸಾಬ್‌ನ ಮಾತು.ಬದುಕಿನ ಕುರಿತ ಅಸಂಗತತೆಯನ್ನು, ಬದುಕಿನ ಕುರಿತ ಸಾಧ್ಯತೆಗಳನ್ನು ವಾಸ್ತವದ ನೆಲೆಯಲ್ಲಿ ಶೋಧಿಸಲು ಹೊರಡುತ್ತದೆ.ಈ ಸಾಲೇ ಇಡಿ ಕಥೆಯ ಪ್ರತಿಬಿಂಬವಾಗಿ ಪ್ರತಿಫಲಿಸುತ್ತದೆ.

ಹೀಗೆ ಜಯಂತರ ಈ ಕಥಾ ಸಂಕಲನದಲ್ಲಿ ಈ ಮೇಲಿನ ಕಥೆಗಳು ಉತ್ತಮವಾದ ಕಥೆಗಳಾಗಿವೆ. ಇವರ ಕಥೆಗಳಲ್ಲಿ ಮುಂಬೈ, ಕಾರವಾರ, ಗೋಕರ್ಣ, ಬೆಂಗಳೂರು ಮತ್ತು ಬಿಸಿಲುಕೋಲು, ಕಾಮನಬಿಲ್ಲು, ರೈಲು, ರೈಲುನಿಲ್ದಾಣ, ಸಮುದ್ರ ಪದೇ ಪದೇ ಬದುಕಿಗೊಡ್ಡಿಕೊಂಡ ಬಗೆ ಮಾತ್ರ ತೀವ್ರ ಪರಿಣಾಮಕಾರಿಯಾದುದು.ಜಯಂತರ ಇದುವರೆಗಿನ ಕಥಾಚರ್ಚೆಯಲ್ಲಿ ಸಮಕಾಲೀನ ಸಂದರ್ಭದಲ್ಲಿನ ನಗರ ವ್ಯಕ್ತಿಗಳು, ಸಮಕಾಲೀನ ಸವಾಲುಗಳು, ಸಮಸ್ಯೆಗಳು, ರಿಯಾಲಿಟಿ ಷೋಗಳು, ಚಿತ್ರನಟರು, ಬೀದಿ ಮಕ್ಕಳು ಹೀಗೆ ಅನೇಕ ರೀತಿಯ ವಿಷಯಗಳು ಭಾವಭೂಮಿಕೆಯಲ್ಲಿ ಕಥೆಯಾಗಿ, ಕವಿತೆಯಾಗಿ ಅವತರಣಿಕೆಯಂತೆ ಪಡಿಮೂಡಿವೆ.

---

೧. ಚಾರ್ ಮಿನಾರ್ – ಜಯಂತ ಕಾಯ್ಕಿಣಿ ಕಥೆಗಳು (೨೦೧೨) – ಪು.ಸಂ.೫೧

ಅಧ್ಯಾಯ ೪

ಜಯಂತ ಕಾಯ್ಕಿಣಿ ಕಥೆಗಳ ನೆಲೆಗಳು

ಕನ್ನಡ ಪ್ರಮುಖ ಕಥೆಗಾರರಲ್ಲಿ ಜಯಂತ ಕಾಯ್ಕಿಣಿಯವರು ಕೂಡ ಒಬ್ಬರು.ತಮ್ಮ ಸೃಜನಶೀಲತೆ ಮತ್ತು ಸಂವೇದನಾಶೀಲತೆಯಿಂದ, ವಿಭಿನ್ನವಾದ ಸೂಕ್ಷ್ಮ ಗ್ರಹಿಕೆಯಿಂದಾಗಿ ವಿಭಿನ್ನವಾದ ಕಥಾಲೋಕವೊಂದು ಓದುಗನಿಗೆ ಲಭ್ಯವಾಗುತ್ತದೆ.ಕನ್ನಡದ ಯಾವ ಸಾಹಿತ್ಯ ಪಂಥಗಳಿಗೆ ತಗುಲಿ ಹಾಕಿಕೊಳ್ಳದೆ ಉಳಿದ ಲೇಖಕರು ಅನೇಕರು.ಯಾವುದೇ ಲೇಖಕರನ್ನು ನೀವು ಯಾವ ಪಂಥದ ಲೇಖಕರೆಂದು? ಕೇಳಿದರೆ ಎಲ್ಲರ ಉತ್ತರವೂ ಒಂದೆ ಲೇಖಕ ಅಷ್ಟೆ.ಎಂಬುದು.ಹೀಗಾಗಿ ಯಾವ ಲೇಖಕನೂ ಕೂಡ ಯಾವುದೇ ಬ್ರಾಂಡ್ ಆಗಿ ಉಳಿಯಲು ಇಚ್ಛಿಸುವುದಿಲ್ಲ. ಜಯಂತಕಾಯ್ಕಿಣಿಯವರು ನವೋದಯವು ಮುಗಿದ ನಂತರ ವಯಸ್ಸಿಗೆ ಬಂದವರು, ನವ್ಯದ ಕೊನೆಗಾದಲ್ಲಿ ಅದರ ಪ್ರಭಾವದಲ್ಲೇ ಬರವಣಿಗೆ ಅರಂಭಿಸಿದವರು, ಬಂಡಾಯದ ಬಿರುಗಾಳಿಯನ್ನು ಸ್ವಲ್ಪದೂರ ನಿಂತುಕೊಂಡೇ ಆತಂಕದಿಂದ ನೋಡಿ, ಪಕ್ಕದಲ್ಲಿ ಹಾಯ್ದು ಹೋಗಲು ಬಿಟ್ಟವರು.ಈಗ ಈ ಮೂರು ಮಾರ್ಗಗಳಿಗಿಂತ ಭಿನ್ನವಾದ ರೀತಿಯಲ್ಲಿ ತಮ್ಮ ಬರವಣಿಗೆಯನ್ನು ರೂಪಿಸಿಕೊಳ್ಳತೊಡಗಿದ್ದಾರೆ.ಇತ್ತೀಚಿನ ಸಾಹಿತ್ಯವನ್ನು ಏನೆಂದು ಕರೆಯುವುದು?ಎಂಬ ಪ್ರಶ್ನೆಯಂತು ನಮ್ಮ ಮುಂದಿದೆ.ಏಕೆಂದರೆ ಆಧುನಿಕ ಕನ್ನಡ ಸಾಹಿತ್ಯವು ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ, ಸ್ತ್ರೀವಾದ, ಮುಸ್ಲಿಂ ಸಂವೇದನೆ ಹೀಗೆ ವಿವಿಧ ಕಾಲಘಟ್ಟಗಳಲ್ಲಿ ವಿವಿಧ ರೀತಿಯ ದೃಷ್ಟಿಕೋನ, ನಿಲುವುಗಳಲ್ಲಿ ಬೆಳದು ಬಂದ ಬಗೆಯೇ, ಇತ್ತೀಚಿನ ಸಾಹಿತ್ಯ ಸಂದರ್ಭವನ್ನು ಏನೆಂದು ಕರೆಯಬೇಕು?ಎಂಬ ಪ್ರಶ್ನೆಯೊಂದನ್ನು ಹುಟ್ಟು ಹಾಕಿದೆ.

ಸಾಹಿತ್ಯವೆನ್ನುವುದು ಹರಿವ ನೀರು.ಅದಕ್ಕೆ ಪಂಥಗಳ ಅಣೆಕಟ್ಟುಗಳನ್ನೇಕೆ ಕಟ್ಟಬೇಕು.ಈ ಸಿದ್ಧಾಂತಗಳ ರಾದ್ಧಾಂತ ಯಾಕೆ?ಇದೇ ಸರಿ, ಎಂಬ ನಿಲುವು ಯಾಕೆ?ಎಂಬುದು ನಿರಂತರವಾಗಿ ಸಾಗಿದೆ.ಕನ್ನಡ ಸಾಹಿತ್ಯವನ್ನೆ ಉದಾಹರಣೆಗೆ ತೆಗೆದುಕೊಂಡರೆ ಗೊತ್ತಾಗುತ್ತದೆ.ಕನ್ನಡ ಸಾಹಿತ್ಯದ ನಡಿಗೆ, ಹಳೆಗನ್ನಡ, ಹೊಸಗನ್ನಡವೆಂದೂ, ಹೊಸಗನ್ನಡದಲ್ಲಿ ನವೋದಯ, ಪ್ರತಿಶೀಲ, ನವ್ಯ, ದಲಿತ ಬಂಡಾಯ, ಮುಸ್ಲಿಂ ಸಂವೇದನೆ ಹೀಗೆ ನಾನಾ ವಿಧವಾದ ಅಣೆಕಟ್ಟುನ್ನು ಕಟ್ಟಲಾಗಿದೆ.ಆದರೆ, ಈ ಸಾಹಿತ್ಯದ ನದಿ ಮಾತ್ರ ಯಾವ ಅಣೆಕಟ್ಟೆಗೂ ಕೊನೆಯಾಗದ, ಎಲ್ಲ ಕಟ್ಟೆಗಳನ್ನು ದಾಟಿ ಹರಿಯುತ್ತಲೇ ಇರುವುದು ಸತ್ಯದ ಸಂಗತಿ.

ಸ್ಥೂಲವಾಗಿ ಈ ಮಾರ್ಗಕ್ಕೆ ಸೇರುವ ಜಯಂತ ಕಾಯ್ಕಿಣಿವರು ತಮ್ಮ ಬರವಣಿಗೆಯನ್ನು ಆರಂಭಿಸಿದ್ದು ನವ್ಯದ ರೀತಿಯಲ್ಲಿ, ಅವರ 'ತೆರೆದಷ್ಟೇಬಾಗಿಲು' ಸಂಕಲನದ ಕಥೆಗಳು ಈ ಮಾರ್ಗದಲ್ಲಿ ಬರೆದವುಗಳಾಗಿವೆ. ಕೇಂದ್ರಪಾತ್ರವೊಂದರ ಪ್ರಜ್ಞೆಯಲ್ಲಾಗುವ ಸಂಚಲನಗಳನ್ನು ಅನ್ವೇಷಿಸುವ ನವ್ಯದ ಮಾದರಿ ಇಲ್ಲಿ ಒಡೆದು ಕಾಣುತ್ತದೆ. ಹೆಚ್ಚಿನ ಕಥೆಗಳಲ್ಲಿ ಉತ್ತಮ ಪುರುಷ ನಿರೂಪಣೆಯಿರುವುದರಿಂದ ಒಂದು ಪಾತ್ರದ ಪ್ರಜ್ಞೆಗೆ ಮಾತ್ರ ನಿರೂಪಣೆಯ ದೃಷ್ಟಿಕೋನ ಸೀಮಿತವಾಗಿದೆ. ಮಾನವ ಸಂಬಂಧಗಳ ಸೂಕ್ಷ್ಮಗಳನ್ನು ಹಿಡಿಯುವ ಪ್ರಾಮುಖ್ಯತೆ ಈ ಕಥೆಗಳಲ್ಲಿದೆ.

'ಅಮೃತಬಳ್ಳಿಯ ಕಷಾಯ' ಹೊತ್ತಿಗೆ ನಿರೂಪಣೆಯ ದೃಷ್ಟಿಕೋನದಲ್ಲಿ ಬದಲಾವಣೆಯಾಗಿಸ್ವಲ್ಪಮಟ್ಟಿಗೆ ಬಂಡಾಯದ ಅಕರ್ಷಣೆಗೊಳಗಾದ ಕುರುಹುಗಳು ಇಲ್ಲಿ ಕಾಣಿಸಿಕೊಂಡಿದೆ.ಆದರೆ ಬಂಡಾಯದ ಧ್ವನಿರಹಿತವಾಸ್ತವದ ಬದಲು ಇನ್ನು ನವ್ಯದ ಪರಿಕರಗಳು ಉಳಿದು ಕೊಂಡಿವೆ. 'ದಗಡೂ ಪರಬನ ಅಶ್ವಮೇಧ' ಮತ್ತು 'ಬಣ್ಣದ ಕಾಲು' ಸಂಗ್ರಹಗಳ ಕೆಲವು ಕಥೆಗಳಲ್ಲಿ ಜಯಂತ ಕಾಯ್ಕಿಣಿಯವರು ಹೊಸ ಜೆಗಿತಗಳಿಗೆ ಪ್ರಯತ್ನಿಸಿದ್ದಾರೆ.ಹೀಗೆ ಜಯಂತರು ಕಥೆಯಿಂದ ಕಥೆಗೆ ಏನನ್ನೋ ಕುರಿತು ಧ್ಯಾನಿಸುವ ಪರಿಯು ವಿಭಿನ್ನವಾಗಿದೆ.

ಜಯಂತರ ಕಥೆಗಳ ಅನನ್ಯತೆ

ಜಯಂತ ಕಾಯ್ಕಿಣಿಯವರ ಕಥೆಗಳು ಅಂದರೆ ಓದುಗರ ಅಂತಃಕರಣವನ್ನು ತಟ್ಟುವ ಸಾಮರ್ಥ್ಯವುಳ್ಳ ಮಾನವ ಜೀವದ ವಿನ್ಯಾಸಗಳು. ಜಯಂತರಿಗೆ ತಮಗೆ ಆಪ್ತವಾದ, ಸಂವೇದನೆಯನ್ನು ಹಿಗ್ಗಿಸುವ ಅನುಭವಗಳನ್ನು ತಿಳಿಯುತ್ತಲೇ ಹಂಚಿಕೊಳ್ಳುವ ತುರ್ತು ಅಪರಿಮಿತ. ತಮ್ಮ ಕಣ್ಣಿಗೆ ಬೀಳುವ ಪ್ರತಿಯೊಬ್ಬನ ಮನಸ್ಸಿನ ಮೂಲಕ ಇಡಿಯ ಮನುಜಕುಲದ ಪಾಡನ್ನು ತಿಳಿಯುವ ದಾಹ, ಅದುದರಿಂದಲೇ ಅವರ ಕಥೆಗಳನ್ನೆಲ್ಲವನ್ನೂ ಗಮನಿಸಿದಾಗ ಜಯಂತರು ವಿಶಿಷ್ಟವಾದ ಶೈಲಿಯಲ್ಲಿ ತಮ್ಮದೇ ಆದಂತಹ ಕಥನ ಪ್ರಪಂಚವನ್ನು ಕಟ್ಟಿಕೊಂಡಿರುವುದು ಸ್ಪಷ್ಟವಾಗುತ್ತದೆ. ನವೋದಯ ಕಾಲದಲ್ಲಿ ಪ್ರಾರಂಭವಾಗಿ ನವ್ಯದ ಹಂತಕ್ಕೆ ಬರುವಷ್ಟರಲ್ಲಿ ಸಾಹಿತಿಗಳಲ್ಲಿ ಹಲವಾರು ಆತಂಕಗಳಿಗೆ ಕಾರಣೀಭೂತವಾದ ನಗರೀಕರಣವು ಈಗ ವ್ಯಾಪಕತೆಯನ್ನು ಪಡೆದಿದೆ.ಅದರ ಸ್ವರೂಪವು ಬದಲಾಗಿದೆ.ಈಗ ಎಲ್ಲಾ ಊರು, ರಾಜ್ಯ, ರಾಷ್ಟ್ರಗಳ ಸೀಮೆಗಳನ್ನು ಉಲ್ಲಂಘಿಸಿ ವ್ಯಾಪಿಸುತ್ತಿರುವ ಜಾಗತೀಕರಣದ ಪರಿಣಾಮಗಳನ್ನು ಕಂಡು ಮನುಜಕುಲವು ಕಂಗೆಟ್ಟಿದೆ.ಮನುಷ್ಯ ಮನುಷ್ಯನಾಗಿ ಉಳಿದಿಲ್ಲ. ಆತ ಒಂದು ವಸ್ತುವಾಗಿದ್ದಾನೆ, ಒಂದು ಸರಕು ಆಗಿದ್ದಾನೆ. ಆತನ ಭಾವನೆಗಳಿಗೆ, ಆಸೆ-ಆಕಾಂಕ್ಷೆಗಳಿಗೆ ದನಿಯಿಲ್ಲದಾಗಿದೆ.ಬದುಕಿನಲ್ಲಿ ಮುಖ್ಯವೆನಿಸುವ ಮೌಲ್ಯಗಳನ್ನು ಆದ್ಯಾವಾಗಲೋ ಕಳಚಿಕೊಂಡ

ಮಾನವನನ್ನು ಅನಾಥಪ್ರಜ್ಞೆಯು ಹೊಸ ಪರಿಯಿಂದ ಕಾಡಲಾರಂಭಿಸಿದೆ.ಅಂತಿರುವಾಗ ಸಮುದಾಯದ ಪ್ರತಿ, ಸಾಹಿತ್ಯದ ಕೆಲಸವೇನು ಎನ್ನುವುದು ದೊಡ್ಡ ಪ್ರಶ್ನೆಯಾಗಿ ಮೂಡುತ್ತದೆ. ಪ್ರಸ್ತುತ ಪರಿಸ್ಥಿತಿಯಲ್ಲಿ, ವ್ಯಾವಹಾರಿಕ ಜಗತ್ತಿನಲ್ಲಿ ಮಗುವಿನಂತಹ ಮುಗ್ದತೆ ಹಾಗೂ ತಾಯಿಯ ಅಂತಃಕರಣದೊಂದಿಗೆ ಸ್ವಂತ ಬದುಕಿಗಿಂತಲೂ ಮಿಗಿಲಾಗಿ ತಮ್ಮ ಸುತ್ತಮುತ್ತಲಿನ ಜನರ ಸಂವೇದನೆಗಳಿಗೆ ಸ್ಪಂದಿಸುವಂತಹ ಹೃದಯವಂತಿಕೆಯ ಸಾಹಿತಿಯಾಗಿ ಜಯಂತ ಕಾಯ್ಕಿಣಿಯವರು ಮುಖ್ಯವೆನಿಸುತ್ತಾರೆ.

ಜಯಂತರಿಗೆ ತಾವು ಬೆಳದು ಬಂದ ಪರಿಸರ, ಬಾಲ್ಯದಿಂದಲೇ ರಕ್ತಗತಗೊಳಿಸಿದ ಮಾನವ್ಯದ ಪಾಠ, ಎಲ್ಲವನ್ನೂ ಎಲ್ಲರನ್ನೂ ಪ್ರೀತಿಸಬೇಕೆಂಬ ಅದಮ್ಯ ಆಸೆ, ಯಾವ ಪರಿಯ ಅನುಭವಕ್ಕೂ ತೆರೆದುಕೊಳ್ಳಬೇಕೆನ್ನುವ ಮಗುವಿನಂತಹ ಹಂಬಲ–ಕುತೂಹಲ, ಸ್ನೇಹಪರ ಮನೋಭಾವಗಳಿಂದಾಗಿ ಅತ್ಯಂತ ಭಿನ್ನವಾದ ಆಶಯಗಳನ್ನು ತಮ್ಮ ಕಥೆಗಳ ಮೂಲಕ ನೀಡಲು ಸಾಧ್ಯವಾಯಿತು. ಮಾನವೀಯತೆಯನ್ನು ಉಳಿಸಬೇಕದರೆ ನಿಸರ್ಗದತ್ತವಾದುದನ್ನು ಗಮನಿಸುವ ಅದನ್ನು ಸಹ್ಯಗೊಳಿಸುವ ಅದನ್ನು ಪ್ರೀತಿಸುವ ಅಗತ್ಯವಿದೆ ಎನ್ನುವುದನ್ನು ಬಲವಾಗಿ ನಂಬಿದವರು ಇವರು. ಹೆಸರಿಲ್ಲದ ಮುಖಗಳನ್ನು ಅರಿಯುವ, ತಮ್ಮ ಸಹಜೀವಿಗಳತ್ತ ಆತ್ಮೀಯತೆಯ ಹಸ್ತವನ್ನು ಚಾಚುವ, ತಮಗಿಂತಲೂ ಹೆಚ್ಚಾಗಿ ಪರರ ಒಳಿತಿಗಾಗಿ ಹಾರೈಸುತ್ತಾ ಬರಡಾದ ಹೃದಯಗಳನ್ನು ಪುನಶ್ಚೇತರಿಸುವತ್ತ ಇವರ ಆಸಕ್ತಿ ಅಪಾರ.

ತಂದೆ ಗೌರೀಶ ಕಾಯ್ಕಿಣಿಯವರ ಸರಳತೆ, ಅವರ ವೈಚಾರಿಕತೆ, ಸಾಹಿತ್ಯಾಸಕ್ತಿ, ಆದಕ್ಕಿಂತಲೂ ಮುಖ್ಯವಾಗಿ ಬದುಕಿನ ಎಲ್ಲಾ ಮಗ್ಗಲುಗಳ ಕುರಿತಾದ ಅದಮ್ಯ ಪ್ರೀತಿ ಎಲ್ಲವೂ ಜಯಂತರ ಅರಿವಿಲ್ಲದೇ ಹನಿಹನಿಯಾಗಿ ಅವರ ಪ್ರಜ್ಞಾಕೇಂದ್ರವನ್ನು ಹಸನಾಗಿಸುತ್ತಾ ಇತ್ತು. ನಿರ್ಮಲಾಂತಃಕರಣದಲ್ಲಿ ಮೂಡಿದ ಜಯಂತರ ಸಾಹಿತ್ಯವು ಓದುಗರನ್ನು ಮುಕ್ತವಾಗಿ ಮಾನವೀಯಗೊಳಿಸಿದರೆ ಅದರಲ್ಲಿ ಆಶ್ಚರ್ಯವೇನಿಲ್ಲ. 'ಸಾಹಿತ್ಯ ಎಂದರೇನು? ಎಂದು ಯಾರಾದರೂ ಕೇಳಿದರೆ ಅದಕ್ಕೆ ಸ್ಪಷ್ಟ ಉತ್ತರ ನನ್ನ ಬಳಿ ಇಲ್ಲ. ಆದರೆ ಅದು 'ವಿಚಾರ'ವನ್ನು ಅಥವಾ ' ಅರ್ಥ'ವನ್ನು ಅನುಭವಕ್ಕೆ ತರುವ ನಮ್ರ ಯತ್ನ ಎಂದು ಸುಮಾರಾಗಿ ಹೇಳಬಹುದೇನೋ, ಎನ್ನುವ ಜಯಂತ ಕಾಯ್ಕಿಣಿಯವರು ತಮ್ಮ ಕಥೆಗಳ ಮೂಲಕ ಪರಿಚಯಿಸುವ ಅನುಭವದ ವಿಶ್ವವು ಬೆರಗೊಳಿಸುವಂತಹದ್ದು.

ಜೀವನದಲ್ಲಿ ಯಾವುದೇ ಒಂದು ಅನುಭವ ಪುನಃ ದಕ್ಕುವುದಿಲ್ಲ. ಅದು ನಮಗೆ ದಕ್ಕಿದಾಗಲೇ ಮೈಯೆಲ್ಲಾ ಕಣ್ಣಾಗಿಸಿ ಅದನ್ನು ಪರಿಪೂರ್ಣವಾಗಿ ಅನುಭವಿಸುವುದೇ ಜೀವನ ಮಾನವೀಯ ನೆಲೆಯಲ್ಲಿ ನಮ್ಮನ್ನು ಪುನಶ್ಚೇತರಿಸುವಂತಹ ಅನುಭವಗಳೆಲ್ಲವೂ ಅವಿಸ್ಮರಣೀಯವಾದವುಗಳು. ಆದರೆ ಇಂದಿನ

ಯಾಂತ್ರಿಕ ಜೀವನದಲ್ಲಿ 'ವ್ಯವಹಾರಮಯತೆಯಲ್ಲಿ ನಾವು ಎಷ್ಟೊಂದು ಮೊಂಡಾಗಿದ್ದೇವೆಂದರೆ ಅತ್ಯಂತ ಸಹಜ ಸಂತಸಗಳನ್ನು ತಪ್ಪಿಸಿಕೊಳ್ಳುತ್ತೇವೆ. ನಿಮ್ಮೊಡನೊಬ್ಬ ಚೆನ್ನಾಗಿ ಅನುಕೂಲಕರವಾಗಿ ವರ್ತಿಸಿದರೆ ಅವನ ಈ ಸಹಯೋಗವನ್ನು ಅದನೆಲ್ಲಿ ಪ್ರತಿಯಾಗಿ ಮರುಕಳಿಸಬೇಕಾದೀತೋ ಎಂಬ ಮಾನಸಿಕ ಒತ್ತಡದಲ್ಲೇ ಕಳಕೊಂಡು ಬಿಡುತ್ತೇವೆ. ಎನ್ನುವ ಜಯಂತರ ಅನುಭವಗಳನ್ನು ಗ್ರಹಿಸುವ ರೀತಿ ಅದನ್ನು ಅಭಿವ್ಯಕ್ತಿಸುವ ಶೈಲಿಯನ್ನು ಕನ್ನಡದ ಸಾಂಪ್ರದಾಯಿಕ ಮಾರ್ಗಗಳಿಗಿಂತ ಭಿನ್ನವಾದುದು.

"ಯಾವುದನ್ನೂ ಮುಟ್ಟಿ ಮಿಡಿಸಬಲ್ಲ ಜಯಂತರ ಬರಹಗಳ ಶಕ್ತಿ ಇರುವುದು ಯಾರಿಗೂ ಕಾಣದ ವಿವರಗಳನ್ನು ಗ್ರಹಿಸುವಲ್ಲಿ. ಅವರ ಹಾಗೆ ಎಂಥ ಸಾಮಾನ್ಯ ಸಂಗತಿಯನ್ನೂ ಸೂಕ್ಷ್ಮವಾದ ವಿನೋದದಲ್ಲಿ, ವಿಶಿಷ್ಟವಾದ ವಿವರಗಳಲ್ಲಿ, ಮಾಂತ್ರಿಕ ಸ್ಪರ್ಶ ಕೊಟ್ಟು ಹೇಳಬಲ್ಲ ಲೇಖಕರು ಕನ್ನಡದಲ್ಲಿಲ್ಲ. ಹಂಚಿಕೊಳ್ಳುವ ಖುಷಿಯನ್ನು ಉಳಿಸಿಕೊಂಡದ್ದರಿಂದಲೇ, ಲೇಖಕನೆಂಬ ಅಹಂಕಾರ ಅವರನ್ನು ಬಾಧಿಸದೆ, ತಮ್ಮ ಬೆರಗನ್ನು, ಕಾಣ್ಕೆಯನ್ನು ಮತ್ತೆ ಮತ್ತೆ ನಿರಾಯಾಸವಾಗಿ ಹೇಳಬಲ್ಲ ಸಾರ್ಮರ್ಥ್ಯ ಅವರಿಗೆ ಒದಗಿ ಬಂದಿದೆ".[೧] ಎಂದು ವಿವೇಕ ಶಾನಭಾಗರು 'ಬೊಗಸೆಯಲ್ಲಿ ಮಳೆ' ಹಿನ್ನುಡಿಯಲ್ಲಿ ಹೇಳಿರುವುದು ಸೂಕ್ತವಾಗಿದೆ. ಸಿ.ಎನ್. ರಾಮಚಂದ್ರನ್ ಅವರು "ಒಟ್ಟಾರೆಯಾಗಿ ಹೇಳಬಹುದಾದರೆ, ಕವನಗಳನ್ನು ಕಟ್ಟುವಂತೆಯೇ ಜಯಂತ್ ಖಚಿತ ದೈನಿಕ ವಿವರಗಳ ಮೂಲಕ ತಮ್ಮ ಕಥೆಗಳನ್ನೂ ಕಟ್ಟುತ್ತಾರೆ, ಆದರೆ, ಒಂದು ವ್ಯತ್ಯಾಸವಿದೆ, ಇವರ ಕವನಗಳು ನೇರವಾಗಿ ವಾಸ್ತವ ಪ್ರಪಂಚಕ್ಕೆ ಕನ್ನಡಿ ಹಿಡಿದರೆ, ಕಥೆಗಳಲ್ಲಿ ಬದುಕಿನ 'ಅಗಣಿತ ದಿವ್ಯ ವ್ಯಂಗ್ಯಗಳ ಕ್ಷಣ'ಗಳನ್ನು ದಾಖಲಿಸುತ್ತವೆ"[೨]ಎಂದಿದ್ದಾರೆ.

ಜಯಂತರು ತಮ್ಮ ಕಥೆಗಳನ್ನು ಅರ್ಪಿಸುವುದರಲ್ಲಿಯೂ ಕೂಡ ವಿಭಿನ್ನವಾದ ನೆಲೆಯನ್ನು ಗ್ರಹಿಸಬಹುದಾಗಿದೆ. ಬೇರೆ-ಬೇರೆ ಬರಹಗಾರರು ತಂದೆ-ತಾಯಿ, ಗುರುಗಳಿಗೆ, ಮಕ್ಕಳು, ಮೊಮ್ಮಕಳಿಗೆ, ಅರ್ಪಿಸಿರುವುದು ಸರ್ವೇಸಾಮಾನ್ಯ.ಕೆಲವೊಂದು ಸಂಕಲನಗಳನ್ನು ಅರ್ಪಿಸುವುದರಲ್ಲಿ ಜಯಂತರು ವಿಭಿನ್ನವಾಗಿ ಕಾಣುತ್ತಾರೆ.ಕಥೆಗಾರ ತನಗೆ ಒದಗಿಬಂದ ಅನುಭವ ಲೋಕವೊಂದನ್ನು ಸಹೃದಯನಿಗೆ ತಲುಪಿಸುವುದರಲ್ಲಿ ವಿಭಿನ್ನವಾಗದೆ, ಬದುಕಿನ ಸಾಧ್ಯತೆಗಳಿಗೆ ಮೆಟ್ಟಿಲಾದ ಬದುಕಿನ ಭಾವಭೂಮಿಕೆಯನ್ನು ನೆನೆದು, ವರ್ತಮಾನದ ಸಂಗತಿಗಳಿಗೆ ಭವಿಷ್ಯದ ತಿರುವನ್ನು ನೀಡಲು ಸಹಕಾರಿಯಾದ ಭೂತದ ಘಟನೆಗಳನ್ನು ಅವು ಉಳಿಸಿಕೊಂಡು ಬಂದಿರುವ ಬಗೆಯನ್ನು ಕುರಿತು ಅರ್ಪಿಸುವಾಗ ಒಂದು ರೀತಿ ಆಗುವ ಪ್ರಫುಲ್ಲವಾದ ಅಮೋಘವಾದ ಅನುಭವವೊಂದು ಆಕರ ಪಡೆಯುತ್ತದೆ.

೧.ಬೊಗಸೆಯಲ್ಲಿ ಮಳೆ (ಅಂಕಣ ಬರಹ) – ಜಯಂತ ಕಾಯ್ಕಿಣಿ (೨೦೦೭) – ಪು.ಸಂ.೮೮

೨. ಜಯಂತ್ ಕಾಯ್ಕಿಣಿ ವಾಚಿಕೆ – ಸಿ.ಎನ್.ರಾಮಚಂದ್ರನ್ (೨೦೧೦) –ಪು.ಸಂ.೧೧

"ನನ್ನ ಗೋಕರ್ಣದ ರಥಬೀದಿಯಿಂದ ಹೊರಡುತ್ತಳೇ ಇರುವ ಬಸ್ಸುಗಳಿಗೆ"[೧] (ಅಮೃತಬಳ್ಳಿ ಕಷಾಯ) ಎಂದು ಹೇಳುವಲ್ಲಿ ಲೇಖಕನು ತಾನು ಬೆಳೆದು ಆಡಿದ ಬೀದಿಯನ್ನು ಒಮ್ಮೆ ಹಾಗೆ ನೆನಪಿಸಿಕೊಳ್ಳುತ್ತಾರೆ.ಅದೇನೆಂದರೆ ತನ್ನ ಬಾಲ್ಯವನ್ನು ಕುರಿತು ರಥಬೀದಿಯಲ್ಲಿ ಅವುಗಳ ಗಾಲಿಚಕ್ರಗಳನ್ನು ಕಂಡು ವಿಸ್ಮಿತನಾದದು.

ಬಸ್ಸುಗಳ ಗಾಜುಗಳ ಮೇಲಿನ ಇಬ್ಬನಿಯಲ್ಲಿ ತನ್ನ ಹೆಸರನ್ನು ಗೀಚಿ ಸಂಭ್ರಮಿಸಿದ್ದು ಬಸ್ಸಿನಲ್ಲಿ ಕಾಗೆಯೊಂದು ಟಿಕೇಟಿಲ್ಲದೆ ಪಯಣಿಸಬಹುದೆಂದು ತಿಳಿದದ್ದು, ಕಾಗೆಗೆ ರೆಕ್ಕೆಯಿದ್ದು ಹಾರುತ್ತದೆಂಬುದನ್ನು ತಿಳಿಯದೆ ಹೀಗೆ ಅನೇಕ ಬಾಲ್ಯದ ಮುಗ್ಧ ಕಣ್ಣಿನ ಕುತೂಹಲಗಳು ಮತ್ತೆ-ಮತ್ತೆ ಹೊಸತನದ ಶೋಧದಲ್ಲಿ ತೊಡಗಿದ್ದು ಮಾತ್ರ ಚೇತೋಹಾರಿ.ಮನುಷ್ಯ ಎಷ್ಟೆ ಬೆಳೆದರೂ ಮಗುವಿನ ಕಣ್ಣನ್ನು ನಿರಂತರವಾಗಿ ಉಳ್ಳವನಾಗಿರಬೇಕು ಎಂಬ ಮಾತಿದೆ. ಹೀಗೆ ಕುತೂಹಲವಿರುವುದರಿಂದಲೇ ಎಲ್ಲವನ್ನೂ ಹೊಸದಾಗಿ ನೋಡುವ ಬಗೆಯು-"ಅದೇ ಭೂಮಿ ಅದೇ ಬಾನು ಈ ನಯನ ನೂತನ"[೨] ಎಂಬ ಜಯಂತ ಕಾಯ್ಕಿಣಿ ಚಿತ್ರಗೀತೆಯ ಸಾಲನ್ನು ಹೇಳಿದ ಮೇಲೆ ಮತ್ತೆ ವಿವರಿಸುವ ಅಗತ್ಯವಿಲ್ಲ ಅಲ್ಲವೇ?

"ಶ್ರದ್ಧೆ, ಮಮತೆ, ಘನತೆ, ಮೂರ್ತಿವೆತ್ತ ಪರಿಶ್ರಮ, ಕನಸುಗಳ ಕೈ ಹಿಡಿದ ಕ್ರಿಯಾಶೀಲ ಪರಾಕ್ರಮ ಅಥವಾ ಒಂದು ಪೀಳಿಗೆಯ ಸಂವೇದನೆ ಅಭಿರುಚಿಗಳನ್ನು ಸದ್ದಿರದೆ ರೂಪಿಸಿದ ತೆರೆಮರೆಯ ಧೀಮಂತ ಕೆ.ವಿ.ಸುಬ್ಬಣ್ಣ"[೩] (ದಗಡೂ ಪರಬನ ಅಶ್ವಮೇಧ) ಹೀಗೆ ಕೆ.ವಿ.ಸುಬ್ಬಣ್ಣ ಎಂಬ ದೈತ್ಯ ಪ್ರತಿಭೆಯಾಗಿ ಒಂದು ಸಂವೇದನೆಯಾಗಿದೆ ರಂಗಭೂಮಿಗೆ ಸಲ್ಲಿಸಿದ ಸೇವೆ ಅಪಾರವಾದುದು.ಈ ನಿಟ್ಟಿನಲ್ಲಿ ಕಥೆಗಾರನೊಬ್ಬನ ಒಳಹೊರಗು ಒಂದು ಭೂಮಿಕೆಯಿರುತ್ತದೆ ಅದು ಒಂದು ಅವ್ಯಕ್ತವಾದ ನೆರಳು-ಬೆಳಕಿನ ಆಟವಾಗಿರುತ್ತದೆ.ಅದೇ ರೀತಿಯಲ್ಲಿ ನೆರಳನ್ನು ಬೆಳಕು, ಬೆಳಕನ್ನು ನೆರಳು ಎರಡು ವಿಭಿನ್ನ ಸ್ತರದಲ್ಲಿ ತೆರೆದು ತೋರಿಸುವ ಧೀಮಂತ ವ್ಯಕ್ತಿತ್ವವೇ ಸುಬ್ಬಣ್ಣ.ಕತೆಗಾರ ಮತ್ತು ಸಬ್ಬಣ್ಣನ ನಡುವಿನ ವೈಯಕ್ತಿಕ ಸಂಬಂಧದ ಆಂತರ್ಯವು ತಿಳಿಯವುದಾಗಿದೆ.ರಂಗಭೂಮಿಯ ಮೇಲೆ ತನ್ನ ಅಂತರಂಗ ಬಹಿರಂಗ, ನೆರಳು-ಬೆಳಕಿನಾಟಕ್ಕೆ ಸಜ್ಜಾದ ಬಗೆಯನ್ನು ಕುತೂಹಲಭರಿತ ಕಣ್ಣಾಗಿಸಿದೆ."ಕಾಯಕದ ಕೈಲಾಸ ಮುಂಬಯಿಗೆ/ಕೈಲಾಸವೇ ಕಾಯಕವಾದ ಗೋಕರ್ಣಕ್ಕೆ"[೪] (ಬಣ್ಣದ ಕಾಲು)ಎಂಬಲ್ಲಿ ಕಥೆಗಾರ ತನ್ನ ಬದುಕಿಗೊಂದು ಭದ್ರತೆಯನ್ನು ಒದಗಿಸಿದ ನೆಲಗಳಿಗೆ ವಿನಮ್ರವಾಗಿ ಅರ್ಪಿಸಿದ್ದಾರೆ.ಲೇಖಕನಿಗೆ ಎರಡು ವಿಭಿನ್ನ ಪರಿಸರಗಳು ಒದಗಿ ಬಂದದ್ದು ಅನಿವಾರ್ಯ.

---

೧. ಅಮೃತ ಬಳ್ಳಿ ಕಷಾಯ – ಜಯಂತ ಕಾಯ್ಕಿಣಿ (೨೦೧೨) – ಪು.ಸಂ.೨೧೫
೨. ಈ ಬಂಧನ – ಚಲನಚಿತ್ರ (೨೦೧೦)
೩. ಜಯಂತ್ ಕಾಯ್ಕಿಣಿ ಕಥೆಗಳು (೨೦೧೨) – ಪು.ಸಂ.೧೧೧
೪. ಬಣ್ಣದ ಕಾಲು – ಜಯಂತ್ ಕಾಯ್ಕಿಣಿ ಕಥೆಗಳು (೨೦೧೨) – ಪು.ಸಂ.೭

ಜಯಂತಕಾಯ್ಕಿಣಿಯವರ ಗೋರ್ಣದಿಂದ ಬಂದು ಬಹುಕಾಲ ಮುಂಬಯಿಯಲ್ಲಿ ನೆಲೆಸಿದ್ದವರು (ಸುಮಾರು೨೩ವರ್ಷ). ಚಿತ್ತಾಲ ಪ್ರಭಾವದಿಂದಾಗಿಯೂ ಇರಬಹದು. ಇವೆರಡೂ ಜಯಂತಕಾಯ್ಕಿಣಿಯವರ ಸೃಜನಶೀಲತೆಯಲ್ಲೂ ಎರಡು ಮುಖ್ಯನೆಲೆಗಳಾಗಿ ಕೆಲಸ ಮಾಡುತ್ತದೆ.ಆದರೆ ಚಿತ್ತಾಲರಿಗಿಂತ ಈ ನೆಲೆಗಳ ಸ್ವರೂಪ ಭಿನ್ನವಾಗಿದೆ.ಗೋಕರ್ಣ ಮತ್ತು ಮುಂಬಯಿ ಜಯಂತಕಾಯ್ಕಿಣಿಯವರ ಕಥೆಗಳಿಗೆ ಗಟ್ಟಿಯಾದ ವಿವರಗಳನ್ನು ಒದಗಿಸುವ ಗಣಿಗಳಾಗಿದೆ.ದೂರದ ಆಕರ್ಷಣೆಯಾಗಿದೆ ಮುಂಬಯಿ ಗೋಕರ್ಣದಿಂದ ಸೆಳೆಯುತ್ತದೆ. ಗೋಕರ್ಣದ ಪರಿಸರದ ಬಗ್ಗೆ ಜಯಂತಕಾಯ್ಕಿಣಿಯವರಲ್ಲಿ ಆತ್ಮೀಯತೆ, ಗೌರವಗಳಿವೆ. ಮುಂಬಯಿ ತನ್ನೊಳಗೆ ಅನೇಕ ಅಮಾನವೀಯ ರಹಸ್ಯಗಳನ್ನು ಬಚ್ಚಿಟ್ಟುಕೊಂಡಿದೆ. ಹೀಗೆ ಕಾಯಕದ ಕೈಲಾಸವಾಗಿ ಮುಂಬಯಿ ಎಂಬ ದೈತ್ಯನಗರ ದಿನವಡೀ ಜಾಗರದ ಕಣ್ಣುಗಳಿಂದ ನಿದ್ರಿಸದೆ ಸದಾ ಎಚ್ಚರದ ಸ್ಥಿತಿಯಲ್ಲಿಯೇ ಇದೆ.ತಮ್ಮ ಹುಟ್ಟೂರಾದ ಗೋಕರ್ಣವು ಕೈಲಾಸವಾಗಿಯೇ ಇಂದಿಗೂ ಕಥೆಗಾರರ ಒಡಲಲ್ಲಿ ಮುಡಿಗೇರಿದ ರೀತಿಯು ಒಂದು ನಿರ್ಲಿಪ್ತವಾದ ಸ್ಥಿತಿಯನ್ನು ತಂದಿರುಸುತ್ತದೆ.ಗೋಕರ್ಣದ ರಥಬೀದಿಗಳಿಂದ ಹೆದ್ದಾರಿಯ ಜಾಗತಿಕ ಜಗತ್ತಿನೆಡೆಗೆ ಹೆಜ್ಜೆಯಿಡಬೇಕಾದ ಬದುಕಿನ ದುರ್ದು ಒಂದೆಡೆಯದರೆ, ಮುಂಬಯಿಯಿಂದ ಮತ್ತೆ ಮತ್ತೆ ಕೈಲಾಸದಂತೆ ಹೊರಟ ಸತ್ಯಗಳು ಮತ್ತೊಂದೆಡೆ, ಹೀಗೆ ಲೇಖಕರು ತಮ್ಮ ನೆಲೆನಿಂತ ನೆಲೆಗಳ ಕುರಿತು ಅಭಿಮಾನದಿಂದ ತಮ್ಮ ಕಥೆಗಳನ್ನು ಸರ್ಮಪಿಸುತ್ತಾರೆ.ಹೀಗೆ ಕಥೆಗಾರರ ಜೊತೆಯಲ್ಲಿ ಮುಂಬಯಿ ಮತ್ತು ಗೋಕರ್ಣಗಳು ಎಡಬಿಡದೆ ನೆರಳಿನಂತೆ ಸದಾ ಜೊತೆಯಲ್ಲಿ ನಿರಂತರವಾಗಿ ಚಲಿಸುತ್ತಿರುತ್ತವೆ.

ನಮ್ಮೆದುರಿನ ನಮ್ಮ ಬಾಳಿನಲ್ಲಿ ಎರಡು ದಾರಿಗಳಿವೆ. ಒಂದು ಬದುಕು ಇನ್ನೊಂದು ಸಾವು.ಸಾವು ಎನ್ನುವುದು ಇಂದಲ್ಲ ನಾಳೆ ಬಂದೇ ಬರುತ್ತದೆ.ಸಾವನ್ನು ಹುಡುಕಿ ನಾವೇ ಹೋಗಬಾರದು, ಅದೇ ನಮ್ಮನ್ನರಸಿ ತಾಕತ್ತಿದ್ದರೆ ಬರಲಿ ಎಂದು ಸವಾಲಾಕಿ.ಸಾವಿಗೆ ಬೆನ್ನು ತಿರುಗಿಸಿ ಬದುಕಿನೆಡೆಗೆ ಮುಖಮಾಡಿ ಬಾಳನ್ನು ಸಹನೀಯ ಮಾಡಿಕೊಳ್ಳುವುದರಲ್ಲೇ ಈ ವಿಳಾಸವಿಲ್ಲದ, ಹೆಸರಿಲ್ಲದವರ ಬಗ್ಗೆ ಏನೋ ಒಂದು ಅಭಿಮಾನ ಮೂಡುತ್ತದೆ.ಇಂತಹ ಅನಾಥ ಕಾಗದಗಳು ಹೆಸರಿಲ್ಲದ ಆಮಂತ್ರಣ ಪತ್ರಗಳಂತೆ ಭಾಸವಾದರೆ, ಅದು ಮನುಷ್ಯನ ಕುರಿತಾದ ಮಮತೆಯ ಕುರುಹಾಗಿ ಮತ್ತು ಸಮತೆಯ ಗುರತಾಗಿ ಗೋಚರಿಸುತ್ತದೆ.ಕೊನೆಯದಾಗಿ ಎಲ್ಲರಿಗೂ ಒಂದು ಸೂರು, ಊರು, ದುಡಿಮೆಗೊಂದು ನೌಕರಿ, ತಲೆದಿಂಬು ಈ ನಾಡಿನ ಕಟ್ಟಕಡೆಯವನಿಗೂ ಸಿಗುವಂತಾಗಲೀ ಎಂದು ಪ್ರಾರ್ಥಿಸುವುದಲ್ಲದೆ ಮತ್ತೇನು ಮಾಡಲು ಸಾಧ್ಯ.

ಸಾಗರ ಪ್ರಜ್ಞೆ

'ಸಮುದ್ರ' ಅಂದರೆ ವಿಸ್ತಾರವಾದ ನೀರಿನ ವಿಶಾಲ ಅಗರ.ಅದೊಂದು ನಿರ್ಲಿಪ್ತವಾದ ನಿಶ್ಯಬ್ಧವನ್ನು ಕೊಡುವ ತೀರದ ದಾಹ.ಒಡಲ ಒಡಲಾಳದ, ತಳದ ತಳಮಳದ ಕಥೆಯ ಭೋರ್ಗರೆವ ಒಡಲು. ಒಂದು ವಿಸ್ತಾರವಾದ ತೆರೆದ ಭಾಗ. ಹೀಗೆ ಏನೇನೋ ನಿಗೂಢತೆಯಿಂದ ಕೂಡಿದ ಗಂಭೀರಾಂಬುಧಿಯಾಗಿದೆ.ಸಮುದ್ರ ಅನ್ನುವುದು ಒಂದು ಪ್ರತಿಮೆಯಾಗಿ ಬದುಕಿಗೆ ಒದಗಿದ್ದು ಅನೇಕ ಕಥೆ ಕವಿತೆಗಳಲ್ಲಿ ನೋಡಬಹುದಾಗಿದೆ.ಸಮುದ್ರವೂ ಸಹ ಮಾನವ ಬದುಕಿನಷ್ಟೇ ನಿಗೂಢವಾದುದು ಮತ್ತು ಅಷ್ಟೇ ಆಶ್ಚರ್ಯಕರವಾದುದು.ಅದರಿಂದಲೇ ಅದರ ಅನಂತ ನಿರ್ಭಿಡೆಯಿಂದಾಗಿಯೇ ಸಮುದ್ರ ಏನೋ ಒಂದು ನಿರಮ್ಮಳತೆಯನ್ನು ನೀಡಿ ಬದುಕಿಗೆ ಸಹನೀಯ ಅನ್ನಿಸಿಬಿಡುತ್ತೆ.ವಿ.ಕೃ.ಗೋಕಾಕ್‌ರ ಸಮುದ್ರ ಗೀತೆಗಳು, ಮಹಾಕಾವ್ಯವಾದ ರಾಮಾಯಣ, ಮಹಾಭಾರತದಲ್ಲಿ ಸಮುದ್ರವು ಬದುಕಿನ ಸಹಜವಾದ ವಸ್ತುವಾಗಿ ಪ್ರತಿಬಿಂಬಿಸಿದೆ.ಅಲೆಗಳು ಮಾನವನಿಗೆ ಒಂದು ನೀತಿಯನ್ನು ಹೇಳಿತ್ತಿದೆ.ಅಂದರೆ ಅವು ಮತ್ತೆ ಮತ್ತೆ ಹೊಸದಾಗಿ ದಡಕ್ಕೆ ಹೊಮ್ಮುವ ಅನವರತ ಸ್ಪರ್ಧೆಗಿಳಿದ ಬಗೆಯಿಂದ ಕ್ರಿಯಾಶೀಲತೆಯನ್ನು ಅಲೆಗಳು ಪ್ರತಿನಿಧಿಸುವ, ಪ್ರತಿಧ್ವನಿಸುವ ಪ್ರತಿಸ್ಥಾಪಿಸುವ ಬದುಕಿನ ಸಹಜ ಕುತೂಹಲವಾಗಿದೆ.

ಪ್ರತಿಯೊಬ್ಬ ಬರಹಗಾರನಿಗೆ ತನ್ನ ಭೌಗೋಳಿಕ ಹಿನ್ನಲೆಯು ತನ್ನ ಬರವಣಿಗೆಯಲ್ಲಿ ಅರಿವಿಲ್ಲದೆ ಸೇರಿಕೊಂಡು ಒಂದು ಸಂಕೇತ, ಪ್ರತಿಮೆಯಾಗಿ ಬಿಡುತ್ತದೆ.ಇದರಿಂದ ಯಾವ ಲೇಖಕನೂ ಪಾರಾಗಲು ಸಾಧ್ಯವಿಲ್ಲ. ಏಕೆಂದರೆ, ತಾನು ಬೆಳೆದ ಪರಿಸರದ ಪರಿಕರಗಳನ್ನು ಧಿಕ್ಕರಿಸಿ ಬರವಣಿಗೆ ಮಾಡುವುದಾರೆ ಅದು ಅಸಹಜವಾದ ಅನುಭವ ಜಗತ್ತಾಗುತ್ತದೆ. ಹೀಗಾಗಿ ಬರಹಗಾರನು ತಾನು ಹಿಟ್ಟಿಬೆಳೆದ ಓಡಾಡಿದ ಜಾಗದಲ್ಲಿ ತನ್ನ ಕಣ್ಣಿಗೆ ಕಂಡ ಅನುಭವ ಲೋಕವನ್ನು ಹೊಸದಾಗಿ ನೋಡುತ್ತಾನೆ. ಹಾಗೆ ನೋಡುವುದರಿಂದಲೇ ಆ ಅನುಭವಗಳು ಸ್ವಭಾವಜನ್ಯವಾಗಿ ಬಂದು ಸಾಹಿತ್ಯಲೋಕಕ್ಕೊಂದು ಹೊಸ ಅನುಭವ ಲಭ್ಯವಾಗುತ್ತದೆ.

ಜಯಂತ ಕಾಯ್ಕಿಣಿಯವರ ಕಥೆಗಳಲ್ಲಿ ಸಮುದ್ರವು ಒಂದು ಸಂಕೇತವಾಗಿ, ಪ್ರತಿಮೆಯಾಗಿ ಬಂದು ಬಿಡುತ್ತದೆ. ಕಾರಣ, ಜಯಂತಕಾಯ್ಕಿಣಿಯವರು ಹುಟ್ಟಿ ಬೆಳೆದದ್ದು ಸಮುದ್ರದ ತಡಿಯಲ್ಲಿ ಹೀಗಾಗಿಯೇ ಅವರ ಬರವಣಿಗೆಯಲ್ಲಿ ಸಮುದ್ರವು ಅರಿವಿಲ್ಲದೆ ಅವಿನಾಭಾವ ಸಂಬಂಧತೆ ಅಂತರ್ಗತವಾಗಿ ಮೂಡಿರುವುದು ಅವರ ಕಥೆಗಳನ್ನು ಅಧ್ಯಯನ ಮಾಡಿದಾಗ ಅರಿವಿಗೆ ಬರುತ್ತದೆ.ಜಯಂತಕಾಯ್ಕಿಣಿಯವರು ಕಂಡ ಸಮುದ್ರದ ಅನುಭವ ಜಗತ್ತೇನು? ಎಂಬುದನಿಲ್ಲಿ ಅರಿಯಬಹುದು.

"ನಿಂತ ಕಡಲಿನ ಘೋಷ-ಎದ್ದೆದ್ದು ಅವುಡುಗಚ್ಚಿ ದಂಡೆಗೆ ಮಗುಚಿ ದೋಸೆಯಂತೆ ಹರಡಿ ನೊರೆಯಂಚಲ್ಲಿ ಇಂಗುತ್ತ, ಹಾರುತ್ತ ಪುನಃ ಕಡಲಿನ ಹೊಟ್ಟೆಗಿಳಿಯುವ ಅಲೆಗಳು, ಮಳೆಗಾಲದಲ್ಲಿ ಕಡಲುಕ್ಕಿ ನಿಂತಾಗ ಅದರಲ್ಲಿ ತೇಲಿಬರುವ ದಿಮ್ಮಿಗಳು, ಕಾಡುಗಳ ಕಸ ಕಡ್ಡಿಗಳು, ಸೌದೆಗಳು ಇವುಗಳನ್ನು ಹಿಡಿಯಲು ಮಂದಿ ಮೈಮರೆತು ತೊಡಗುತ್ತಾರೆ"[೧] ಇಂತಹ ಸಾಲುಗಳಿಗೆ ಸಮುದ್ರವು ಮಾನವ ಸಹಜ ಸ್ವಭಾವದೊಂದಿಗೆ ಹೇಗೆ ಸಂಬಂಧವನ್ನು ಸೃಷ್ಟಿಸಿಕೊಂಡಿದೆ ಎಂಬುದು ಶ್ಲಾಘನೀಯ. ಇಲ್ಲಿ ಸೀತಮ್ಮ ತನ್ನ ಸಾಕು ಮಗಳೊಡನೆ ಸಮುದ್ರದೆದುರು ನಿಂತು, ತನ್ನ ಬಾಲ್ಯದ ಸ್ವಾತಂತ್ರವನ್ನು ಮರಳಿ ಪಡೆಯಲು ಮತ್ತುಆ ಮೂಲಕ ತನ್ನ ಒಂಟಿತನವನ್ನು ಮೀರಲು ನಿರ್ಧರಿಸುವ ಸೀತಮ್ಮನಿಗೆ ಸಮುದ್ರವು ಬದುಕಿನ ಅವಿಭಾಜ್ಯ ಅಂಗವಾಗಿದೆ.ತೇಲಿ ಬರುವ ದಿಮ್ಮಿಗೆ ಮುಗಿಬಿದ್ದ ತೀರದ ಜನರ ಬದುಕಿನಲ್ಲಿ ಸಮುದ್ರ ಒಂದು ಬದುಕಿನದಾರಿಯಾಗಿದೆ.

"ಅದಿರಲಿ ಅವಸಾರಿ ಲೋಖಂಡೆ ಅಂದರೆ ಯಾವ ಜಾತಿ?ಎಂದಾಗ ಅವಸಾರಿ ಬೆಚ್ಚಿ ಬಿದ್ದಳು ಅವನು ಎಂದು ಮಾತನಾಡದ ಭಾಷೆ"[೨] (ನೋ ಪ್ರೆಸೆಂಟ್ಸ್ ಪ್ಲೀಸ್) ಹೀಗೆ ಮದುವೆಯ ಕರೆಯೋಲೆಯೊಂದು ಪ್ರೇಮಿಗಳಿಬ್ಬರ ನಡುವೆ ಸಂಗತವಲ್ಲದ ಹಾಗೆ ಅವರ ನಡುವೆ ಬಂದು ಬಿಡುತ್ತದೆ.ಅದು ಒಂದು ಹೆಸರಿಗಾಗಿ, ಜಾತಿಗಾಗಿ ಹಂಬಲಿಸುವ ಪೋಪಟನ ಸ್ವಭಾವದ ಮೇಲೆ ತನ್ನ ಹಿಡಿತವನ್ನೇ ಸಾಧಿಸುತ್ತದೆ.ಹೀಗಾಗಿ ಅಲ್ಲೊಂದು ಬದುಕಿನ ಅಸಂಗತ ಸಾಧ್ಯತೆಯೊಂದು ಒಳಹೊಕ್ಕು ನಂಬಿಕೆಯನ್ನು ಸಡಿಲಗೊಳಿಸುವ ಬಗ್ಗೆ ಅಚ್ಚರಿಯನ್ನು ಮೂಡಿಸುತ್ತದೆ.

ತೂಫಾನ್‌ನಿಂದ (ರೈಲು) ವ್ಯಕ್ತಿಯೊಬ್ಬ ಜಿಗಿದು ತಮ್ಮ ಸಂಬಂಧಿಗಳಿಗೆ ಒಂದು ಪೊಟ್ಟಣವನ್ನು ಕೊಡುತ್ತಾನೆ. ಮತ್ತು ಅದೇ ರೈಲಿಗೆ ಅದೇ ಸಮಯಕ್ಕೆ ಅದೇ ಜಾಗದಲ್ಲಿ ದೀನರಾಗಿ ಬರುವ ರೈಲಿಗೆ ಕಾಯುತ್ತ ತಾಯಿ-ಮಗಳು ನಿಲ್ಲುವುದು. ಅದು ಸರಿರಾತ್ರಿಯ ಅಪವೇಳೆಯಲ್ಲಿ ಇಡೀ ಜಗವೇ ನಿದ್ರೆಯಲ್ಲಿ ಕರಗಿ ಮುಳುಗಿರುವಾಗ, ಹೀಗೆ ಇವರ ಈ ಬದುಕಿನ ವಿಚಿತ್ರತೆಯೊಂದು ಸಹೃದಯದಲ್ಲಿ ವಿಷಾದವಾಗಿಬಿಡುತ್ತದೆ.ಖಾಸಗಿ ಸಂಕಟವನ್ನು ಬಹಿರಂಗವಾಗಿ ಹೇಳಿಕೊಂಡೇ ಅಧಿಕೃತಗೊಳಿಸುತ್ತಿದ್ದ ಬಲದೇವನ ಅವೇಶವನ್ನು ಮೆಲ್ಲಗೆ ಸುಸಂಗತಗೊಳಿಸುವಂತ ಮೌನ ಅಲ್ಲಿತ್ತು.ಹೀಗೆ ಮೌನವು ಕೂಡ ಸಂಕಟಕ್ಕೆ ಮಿಡಿವ ಮಾತಾಗಿ ಶ್ರಮಿಸುತ್ತದೆ.

---

೧. ಬಣ್ಣದ ಕಾಲು – ಜಯಂತ ಕಾಯ್ಕಿಣಿ (೨೦೧೨) -ಪು.ಸಂ.೧೧೪-೧೧೫

೨.ತೂಫಾನ್ ಮೇಲ್ – ಜಯಂತ ಕಾಯ್ಕಿಣಿ (೨೦೦೮) – ಪು.ಸಂ.೧೬-೧೭

ಸ್ಪರ್ಧೆಯಲ್ಲಿ ಎಲ್ಲಾ ಪ್ರಶ್ನೆಗಳಿಗೂ ಸರಾಗವಾಗಿ ಉತ್ತರಿಸುವ ಮಧುಬನಿಗೆ "ಭೂಪಾಲ ಗ್ಯಾಸ್ ದುರಂತದ ದಿನ ಯಾವುದು?"[೧] ಎಂಬ ಪ್ರಶ್ನೆಗೆ ಉತ್ತರಿಸಲಾಗುವುದಿಲ್ಲ ಏಕೆಂದರೆ, ಆ ದುರಂತದೊಡನೆಯೇ ಅವಳಿಗೆ ಶವಗಳಾಗಿ ಹಿಂದುರಿಗಿದ ಜ್ಯೋತ್ಸ್ನಾ ಬಾಭಿ ಮತ್ತು ಅವಳ ಮಗಳು ಸೇಜಲ್ ಎಲ್ಲರೂ ನೆನಪಿಗೆ ಬರುತ್ತಾರೆ (ಭೂಪಾಲ್ ಗ್ಯಾಸ್ ದುರಂತ ಕ್ವಿಜ್ ಮಾಸ್ಟರ್‌ಗೆ ಒಂದು ಕ್ವಿಜ್, ಪ್ರಶ್ನೆ ಅಷ್ಟೆ, ಮಧುಬನಿಗೆ, ತನ್ನೆಲ್ಲಾ ಗೆಳತಿಯರು ಶವಗಳಾದ ದಿನ) 'ಯುವರ್ ಟೈಮ್ ಸ್ಟಾರ್ಟ್ ನೌ' ಎಂದು ಠೀವಿಯಿಂದ ಹೇಳುವ ಕ್ವಿಜ್ ಮಾಸ್ಟರ್-ಇವೆಲ್ಲವೂ ಮಾನವ ಕಾಲ ಸಂಬಂಧದ ಅನೇಕಾನೇಕ ವಿನ್ಯಾಸಗಳು.

ಗಿರೀಶ್ ಕಾರ್ನಾಡ್ ಹೇಳುವಂತೆ- "ಮಾನವೀಯ ಅಸಂಗತವನ್ನು ಗ್ರಹಿಸುವ ಜಯಂತಕಾಯ್ಕಿಣಿಯವರ ನೋಟ ವಿಶುಷ್ಟವಾದದ್ದು, ಸಣ್ಣ ಊರಿನಿಂದ ಬಂದವರಾಗಿದ್ದೂ ಜಯಂತ ಕಾಯ್ಕಿಣಿಯವರ ನಗರ ಜೀವನವನ್ನು ನೋಡುವ ಬಗೆ ಕನ್ನಡಕ್ಕೆ ಹೊಸತಾಗಿದೆ ಅವರ ಕಥೆಗಳ ಕಳಕಳಿ, ಚಲನಶೀಲತೆಯಲ್ಲಿ ಹೊಮ್ಮುವ ಚೈತನ್ಯ ಎಲ್ಲ ಅವರದೇ ಆಗಿದೆ. ಓದಬೇಕು ಅನ್ನಿಸುವ ಅಪರೂಪದ ಸಳೆತನದ ಲೇಖಕರು ಜಯಂತಕಾಯ್ಕಿಣಿ".[೨]

ನಗರ ಪ್ರಜ್ಞೆ

ಜಯಂತಕಾಯ್ಕಿಣಿಯವರ ಬರಹಗಳಲ್ಲಿ ಮುಂಬೈ ಎಂಬ ದೈತ್ಯ ನಗರವು ಇಣುಕುತ್ತಾ ಅದೇ ಒಂದು ಮಾನವೀಯ ವಿನ್ಯಾಸಕ್ಕೆ ಹಾತೊರೆಯುತ್ತದೆ.ಆ ಮೂಲಕ ಲೇಖಕನಿಗೆ ಪುಷ್ಟಿಯನ್ನು, ಎಚ್ಚರವನ್ನು, ಶಕ್ತಿಯನ್ನು ನೀಡಿದೆ.ಈ ಶಹರ ಮಕ್ಕಳನ್ನೂ ತೊಡೆಯ ಮೇಲೆ ಮಲಗಿಸಿಕೊಂಡು ತಾನು ಮಾತ್ರ ಎಚ್ಚರದಿಂದ ಕಾಯುತ್ತ ಕೂತ ತಾಯಿಯಂತೆ ತೋರುತ್ತದೆ.ಸದಾ ಎಚ್ಚರದಲ್ಲಿಯೇ ಇರುತ್ತದೆ.ಮಲಗದ ನಗರವೆಂದೆ ಮುಂಬೈಯನ್ನು ಕರೆಯಬಹುದು. ವಿಚಿತ್ರ ಚುಂಬಕದಂತೆ ವ್ಯಕ್ತಿಯನ್ನು ಸೆಳೆದು ಪಣಕ್ಕೊಡ್ಡುತ್ತಿದೆ ಈ ಶಹರ. ಎಲ್ಲ ಪೊಳ್ಳು ಪೋಸುಗಳನ್ನು ಅಣಕಿಸಿ ಬಟ್ಟಬಯಲಿನಲ್ಲಿ ಗಕ್ಕನೆ ನಿಲ್ಲು ಮಗನೇ ಎಂದು ನಿಲ್ಲಿಸುತ್ತದೆ.ಪುಸ್ತಕದಂಗಡಿಯಲ್ಲಿ ಎದುರುಗೊಂಡ ವೇಶ್ಯೆಯ ಕಂಡು ಯಾರು ಅನುಮಾನಗೊಳ್ಳುವುದಿಲ್ಲ. ಲೋಕಲ್‌ನ ಇಕ್ಕಟ್ಟಿನಲ್ಲಿ ಹೂತು ಹೋದವನಿಗೆ ತನ್ನ ಹೆಸರೇ ವಿಚಿತ್ರ ಅನಿಸುವಾಗ ಅವನ ಅಂಗಗಳ ಮೇಲೆ ಕಾಣದ ಕೈಗಳು ಆಡಿದರೂ ಅವನು ತಪ್ಪು ತಿಳಿಯುವುದಿಲ್ಲ.

ಮುಂಬೈ ಒಂದು ಮನುಷ್ಯ ಸ್ವಾತಂತ್ರ್ಯ ಯಾರು ಯಾರನ್ನು ಯಾವ ಕಾರಣಕ್ಕೂ ಹಿಡಿಯಲಾರರು ಇಲ್ಲಿ.ಯಾರು ಯಾರಿಗೂ ಹೆದರಬೇಕಾದ್ದಿಲ್ಲ. ಯಾರು ಯಾರಿಗೂ ಹೊಣೆಗಾರರಲ್ಲ.

---

೧. ತೂಫಾನ್ ಮೇಲ್ – ಜಯಂತ ಕಾಯ್ಕಿಣಿ (೨೦೦೮) –ಪು.ಸಂ.೭೫

೨. ತೂಫಾನ್ ಮೇಲ್ – ಜಯಂತ ಕಾಯ್ಕಿಣಿ (೨೦೦೮) – ಬೆನ್ನುಡಿಯಿಂದ

ಎಲ್ಲ ಇಂದ್ರಿಯಗಳ ಮೂಲಕ ತಟಸ್ಥ ಸ್ಪಂದನ ಈ ಅಪೂರ್ವ ಶಹರ ಒದಗಿ ಬರುತ್ತದೆ. ಅಂತೆಯೇಇಲ್ಲಿಯ ಓಟ ಹೊರಗಿನ ಓಟವಾಗಿರುವುದಿಲ್ಲ ಒಳಗಿನ ಓಟವಾಗುತ್ತದೆ. ಜೈವಿಕಹೋರಾಟವಾಗುತ್ತದೆ. ಯಾಂತ್ರಿಕ ಎಂದು ಯಾರು ಎಷ್ಟೇ ಬಡಬಡಿಸಿದರೂ, ಯಾಂತ್ರಿಕತೆಯ ಒಡಲೊಳಗಿಂದಲೇ ಸ್ವಂತಿಕೆಯ ಪುಷ್ಟಿಗೆ ಬೇಕಾದ ಸ್ವಾತಂತ್ರ್ಯ ಒದಗಿ ಬರುತ್ತದೆ.ಮುಂಬೈ ಒಂದು ದೊಡ್ಡ ನೈತಿಕ ಬೆಂಬಲವಾಗಿ ಪ್ರತಿ ವ್ಯಕ್ತಿಗೆ ಒದಗುತ್ತದೆ. ಹೊಸದಾಗಿ ಮುಂಬೈಗೆಬಂದು ಸೇರಿದವನಿಗೆ ತಾನೊಂದು ಈ ಮಹಾಶಹರದ ಸಣ್ಣ ತಣುಕು ಅಂತ ಅನಿಸಿದರು ಕೆಲವೇ ಕಾಲದ ನಂತರ ಅವನಿಗೆ ಈ ಇಡೀ ನಗರವೇ ತನ್ನ ಅಧೀನದಲ್ಲಿದೆ ಎಂಬ ವಿಲಕ್ಷಣ ಅರಿವೊಂದು ಉಂಟಾಗುತ್ತದೆ. ಈ ಅರಿವಿನಲ್ಲಿ ವ್ಯಕ್ತಿ ಎಲ್ಲ ಸಂಬಂಧಗಳ ಕೊಂಡಿಗಳನ್ನು ಮೀರಿ ತನಗೆ ತಾನು ಜವಾಬ್ದಾರನಾಗುತ್ತ ಹೋಗುತ್ತಾನೆ."[೧] ಮುಂಬೈ ಎಂಬುದೊಂದು ಯಾಂತ್ರಿಕತೆಯ ಮಾಯಾಲೋಕ.ಅಲ್ಲಿ ಎಲ್ಲರಿಗೂ ಎಲ್ಲದರ ಕುರಿತು ಮಾನವೀಯ ಸ್ಪರ್ಶವಿಲ್ಲದ ಯಾಂತ್ರಿಕವಾದ ಒಂದು ಟಚ್ ಇದೆ ಹಾಗಾಗಿಯೇ ನಗರದ ಬದುಕಿನ ಹೃದಯಹೀನತೆಯೊಂದು ಅತ್ಯಂತ ಹೀನವಾಗಿ ಕಾಣುವಾಗಲೂ ಕೂಡ ಜಯಂತಕಾಯ್ಕಿಣಿ ಮುಂಬೈ ಮಾನವಿಯತೆಗೆ ತುಡಿಯುವ ಹೊಸ ರೂಪಕವಾಗಿ ಕಂಡು ಬಂದಿದೆ.ಈ ದೃಷ್ಟಿಯಿಂದಲೇ ಮುಂಬೈ ಎಂಬುದು ತನ್ನಲ್ಲಿ ಸೆಳೆತಗಳಿಂದ ಕೈಬೀಸಿ ಕರೆಯುತ್ತಿದೆ.ಮುಂಬೈ ಭಯೋತ್ಪಾದಕ ಚಟುವಟಿಕೆಯ ತಾಣವಾಗಿದೆ, ಭೂಗತಲೋಕದ ನಂಟನ್ನು ಬೆಚ್ಚಗೆ ಅಡಗಿಸಿಕೊಂಡಿದೆ.ಬಣ್ಣದ ಬಲೂನುಗಳು, ದಿಕ್ಕಿಲ್ಲದವರ ದಿಕ್ಕು, ಹೆಸರಿಲ್ಲದವರಿಗೆ ತಾತ್ಕಾಲಿಕ ವಿಳಾಸವೊಂದನ್ನು ನೀಡಿ ಕಣ್ಣೀರನ್ನೊರಸಿ ಮಲಗಿಸಿದೆ.ಬದುಕಿನ ಅಗಣಿತ ವ್ಯಂಗ್ಯಗಳ ತವರಾಗಿದೆ.ಇಲ್ಲಿಗೆ ಬರಲು ಲಕ್ಷಗಟ್ಟಲೆ ದಾರಿಗಳಿವೆ. ಈ ದಾರಿಗಳು ಮರಳಿ ಹೋಗುವುದಿಲ್ಲ. ದೂರದಿಂದಲೇ ಆಕರ್ಷಿಸುವ ಯಾವುದೋ ಮೋಹಕ ಮೂಲ ಈ ಶಹರಕ್ಕಿದೆ. ಹೀಗೆ ಎಲ್ಲವನ್ನು ತನ್ನ ಒಡಲೊಳಗೆ ಬೆಚ್ಚಗೆ ಅಡಗಿಸಿಕೊಂಡಂತೆ ಇಲ್ಲಿಂದಲೇ ಕಾಣುವ ಶಹರ 'ಮುಂಬೈ ಎಂಬ ದೈತ್ಯ ನಗರ'

ಜಯಂತಕಾಯ್ಕಿಣಿಯವರ ಕತೆಗಳಲ್ಲಿ ಎರಡು ನೆಲೆಗಳಂತೂ ಇದೆ.ಒಂದು ಗೋಕರ್ಣದ ಪರಿಸರ, ಇನ್ನೊಂದು ಮುಂಬೈ ಎಂಬ ದೈತ್ಯ ನಗರ.ಈ ನೆಲೆಗಳಲ್ಲಿ ಕತೆಗಾರ ಹೆಣೆದಿರುವ ಕುಸುರಿಯು ಸಮೃದ್ಧವಾಗಿದೆ. ಇತರ ಕತೆಗಳಲ್ಲಿ ಬರುವ ಪಾತ್ರಗಳು, ಪ್ರದೇಶಗಳು ಹೆಚ್ಚು ನಗರೀಕರಣದಲ್ಲಿ ಸುತ್ತುತ್ತವೆ.'ನಗರಪ್ರಜ್ಞೆ'ಯೊಂದು ಇತರ ಕಥೆಗಳಲ್ಲಿ ಮುಖ್ಯ ಭೂಮಿಕೆಯಲ್ಲಿ ಗಿರಕಿ ಹೊಡೆಯುತ್ತವೆ. ನಗರದ ಬೀಭತ್ಸ ದೃಶ್ಯಗಳು, ನಯವಾದ ವಂಚನೆ. ಹೃದಯ ಹೀನತೆಯ ನಡುವೆಯೂ ಮಧ್ಯಮ ವರ್ಗದ ಮಾನವೀಯ ಬದುಕಿನ ಚಿತ್ರಣವನ್ನು ಮಕ್ಕಳು ಚಿಟ್ಟೆ ಹಿಡಿಯುವ ಹಾಗೆ ಕಾದು ಕೂತು ಸೆರೆಹಿಡಿದ ಕತೆಗಾರನ ತಾಳ್ಮೆ, ಸಂಯಮ, ಮಾನವೀಯ ಅಂತಃಕರಣವನ್ನು ಅಭಿನಂದಿಸಲೇ ಬೇಕು.

೧.ಜಯಂತ ಕಾಯ್ಕಿಣಿ ವಾಚಿಕೆ – ಸಿ.ಎನ್. ರಾಮಚಂದ್ರನ್ (೨೦೧೦) – ಪು.ಸಂ.೧೩೫

ಅದೇ ರೀತಿಯಲ್ಲಿ ಗೋಕರ್ಣ ಅಂದರೆ ಕನ್ನಡದ ನೆಲದಲ್ಲಿದವರ ಪಾತ್ರಗಳು ಕೂಡ (ಭಾಮಿನಿ) ಅತ್ಯಂತ ಸಂವೇದನಾತ್ಮಕವಾಗಿ ಮೂಡಿವೆ. ಗೋಕರ್ಣ ಮತ್ತು ಮುಂಬೈ ಎರಡು ಪ್ರದೇಶಗಳು ಕೂಡ ಪ್ರಾದೇಶಿಕತೆ ಮತ್ತು ಜಾಗತಿಕತೆಯನ್ನು ಪ್ರತಿನಿಧಿಸುತ್ತವೆ. ಈ ಎರಡು ನೆಲೆಗಳಲ್ಲಿ ಲೇಖಕರ ತಡಕಾಟವನ್ನು, ತಳಮಳವನ್ನು, ಅನಾಮಧೇಯರ ಕುರಿತು, ವಿಳಾಸವಿಲ್ಲದವರ ಕುರಿತು ಜೀವಪರ ಕಾಳಜಿಯುಳ್ಳವರಾಗಿ ಓದುಗರೊಡನೆ ಆತ್ಮೀಯತೆಯನ್ನು ಬೆಳೆಸಿಕೊಂಡಿದ್ದಾರೆ.

ಜಯಂತಕಾಯ್ಕಿಣಿಯವರ ಕತೆಗಳಲ್ಲಿ ಪ್ರೀತಿಯಿದೆ, ಕಾಮವಿದೆ, ಮೋಹವಿದೆ, ಕಾಳಜಿಯಿದೆ, ಆದರ್ಶದ ಬೆನ್ನ ಹತ್ತಿ, ಬಲುದೂರ ನಡೆದು ಕೊನೆಗೆ ವ್ಯಕ್ತಿಯೇ ಪ್ರಮುಖನಾಗಿ ಕಂಡು ಲೇಖಕ, ವ್ಯಕ್ತಿ ಸ್ವಭಾವದಲ್ಲಿ ತನ್ನ ರಚನೆಯನ್ನು ಕಂಡುಕೊಂಡಿದ್ದಾರೆ.ಓದುಗ ಮತ್ತು ಲೇಖಕರ ನಡುವಿನ ಒಂದು ಆಪ್ತವಾದ ಸಂಬಂಧವೊಂದು ಬೆಳೆಯುತ್ತದೆ.ಈ ಕತೆಗಳ ಪಾತ್ರಗಳ ತುಮುಲ, ತಳಮಳ ಕೇವಲ ಆ ಪಾತ್ರಗಳದ್ದೇ ಅಲ್ಲ, ಅವು ನಮ್ಮವೂ ಆಗಿ ಓದುಗನಲ್ಲಿ ಜವಾಬ್ದಾರಿಯನ್ನು, ಕಾಳಜಿಯನ್ನು ಬೆಳೆಸುತ್ತವೆ. ಲೋಕಗ್ರಹಿಕೆಯನ್ನು ತನ್ನದೇ ನೆಲೆಯಲ್ಲಿ ಅಭಿವ್ಯಕ್ತಿ ಪಡಿಸುವ ಶೈಲಿ ಭಿನ್ನವಾದುದು. ಜಯಂತಕಾಯ್ಕಿಣಿಯವರ ಕಥೆಗಳಲ್ಲಿ ಮಾನವ ಸ್ವಭಾವವೇ ಕೇಂದ್ರವಾಗಿ ಬಿಡುತ್ತದೆ.ಯಾವುದೇ ಪಾತ್ರಗಳು ನಮ್ಮನ್ನು ಕಾಡುವುದು ಅವರ ಸ್ವಭಾವದಿಂದಾಗಿಯೇ ಹೊರತು, ಆದರ್ಶದಿಂದಲ್ಲ. ಹೀಗಾಗಿ ಭಾವ ಭೂಮಿಕೆಯಲ್ಲಿ ವ್ಯಕ್ತಿಯ ಸ್ವಾಭಾವ ಕೇಂದ್ರವಾಗಿ ಕಥೆಗಳು ಭಿನ್ನವಾಗಿ ಸೆಳೆಯುತ್ತವೆ.

ಜಯಂತ ಕಾಯ್ಕಿಣಿಯವರು ಹುಟ್ಟಿ ಬೆಳೆದದ್ದು ಉತ್ತರ ಕನ್ನಡ ಪುಟ್ಟ ಊರಿನಲ್ಲಾದರೂ ಕೆಲಸವನ್ನು ಅರಸುತ್ತಾ ಮುಂಬಯಿಗೆ ಬಂದವರು ಕೇವಲ ೨೩ ವರ್ಷಗಳಷ್ಟೇ ಇಲ್ಲಿ ನೆಲೆಸಿದವರಾದರು ಅವರು ಬರೆದ ಕಥೆಗಳಲ್ಲಿ ಹೆಚ್ಚಿನವು ಮುಂಬಯಿಯ ಕಥೆಗಳೇ. ಶಾಂತಿನಾಥ ದೇಸಾಯಿ, ವ್ಯಾಸರಾಯ ಬಲ್ಲಾಳ, ಯಶವಂತ ಚಿತ್ತಾಲರು ತಮ್ಮ ಬದುಕಿನ ಹಲವು ದಶಕಗಳನ್ನು ಮುಂಬಯಿಯಲ್ಲಿಯೇ ಕಳೆದವರು. ಅವರ ಕಥೆಗಳಲ್ಲಿ ನಗರದ ಬದುಕಿನ ಸೂಕ್ಷ್ಮತೆಗಿಂತಲೂ ಇಲ್ಲಿಯ ಜನರ ಅದರಲ್ಲೂ ಸುಶಿಕ್ಷಿತ ವರ್ಗದ ಜನರ ಮನಸ್ಸಿನ ದ್ವಂದ್ವಗಳು, ಬದುಕಿನಲ್ಲಿ ಎದುರಾಗುವ ಸಮಸ್ಯೆಗಳು, ದುಗುಡಗಳು, ನಿರಾಶೆ ಇವೆಲ್ಲವುಗಳು ಮುಖ್ಯವಾಗುತ್ತವೆ. ಕಥೆಗಾರರಾಗಿ ಇವರೆಲ್ಲರಿಗಿಂತ ಜಯಂತ ಕಾಯ್ಕಿಣಿಯವರು ಭಿನ್ನರು ಎಂದು ಅನಿಸುವುದು ಅವರ ವಸ್ತುವಿನ ಆಯ್ಕೆಯಲ್ಲಿ, ನಗರ ಪರಿಸರವನ್ನು ನಗರಕ್ಕೇ ವಿಶಿಷ್ಟವಾದ ಭಾಷೆಯ ಮೂಲಕ ಕಟ್ಟಿಕೊಡುವ ಪರಿಯಲ್ಲಿ, ಜೀವನ ಮೌಲ್ಯಗಳನ್ನು ಅರಿಯಲು ಅವರು ತೋರಿಸುವ ಗೋಕರ್ಣದ ಹಾಗೂ ಮುಂಬಯಿಯ ನಗರದ ಸಾಮಾನ್ಯಜೀವಿಗಳ ಬದುಕಿನ ಕಾಣ್ಕೆಯಲ್ಲಿ, ಅಲಕ್ಷಿತ ಜನರ ಬದುಕಿನಲ್ಲಿ ಇನ್ನೂ ಜೀವವಂತವಾಗಿರುವ ಮಾನವೀಯತೆ ದರ್ಶನದ ಮೂಲಕ ಓದುಗರ ಮನಸ್ಸನ್ನು ಹಗುರಗೊಳಿಸುವ ಕೌಶಲ್ಯದಲ್ಲಿ, ಹೀಗೆ ಭಿನ್ನವಾದ ಕಥನ ಸಾಹಿತ್ಯವನ್ನು ಕನ್ನಡಕ್ಕೆ

ಪರಿಚಯಿಸಿದವರು ಜಯಂತರು. ಇವರ ಕಥೆಗಳಲ್ಲಿ ಬರುವ ಪಾತ್ರಗಳಿಗೆ ಭೂತಕಾಲವಿಲ್ಲ. ಅವುಗಳ ಭವಿಷ್ಯದ ಕುರಿತ ಚಿಂತಿಸುವುದೂ ಇಲ್ಲ, ಕೇವಲ ವರ್ತಮಾನದ ಬದುಕನ್ನು ಹಸನಾಗಿಸುವತ್ತ ಅವರಿಗಿರುವ ಕಾಳಜಿ ಮಾತ್ರ ಅಪಾರ ಜಯಂತ ಕಾಯ್ಕಿಣಿಯವರ ಕಥೆಗಳ ಪಾತ್ರಗಳು ಕನ್ನಡದ ಕಥೆಗಳಲ್ಲಿ ಕಾಣಸಿಗದಂತಹ ಅನೂಹ್ಯವಾದ ಪಾತ್ರಗಳು.ಆಧುನಿಕತೆ, ನಗರ ಸಂವೇದನೆಗಳ ಹೆಸರಿನಲ್ಲಿ ತಮ್ಮ ನೆನಪುಗಳಿಗೆ ಜೋತು ಬಿದ್ದು ಕಥೆಗಳನ್ನು ಬರೆಯುತ್ತಿರುವ ಇತ್ತೀಚಿಗಿನ ಹೊಸಕಥೆಗಾರರಿಗಿಂತಲೂ ಜಯಂತರು ಭಿನ್ನರು, ಪ್ರತಿಭಾವಂತರು ಆದರೆ ಉಪೇಕ್ಷಿತರು.ಜಯಂತ ಕಾಯ್ಕಿಣಿಯವರು ತಮ್ಮ ಕಥೆಗಳ ಮೂಲಕ ನಮ್ಮ ಬದುಕಿನಿಂದ ಸದ್ದಿಲ್ಲದೆ ನಶಿಸುತ್ತಿರುವ ಮಾನವೀಯತೆಯ ಕುರಿತು ಅಚಲ ವಿಶ್ವಾಸವನ್ನು ಮೂಡಿಸುತ್ತಾರೆ, ಮಾತ್ರವಲ್ಲ ಅದನ್ನು ಭದ್ರಗೊಳಿಸುತ್ತಾರೆ. ಪ್ರಸುತ್ತ ಪರಿಸ್ಥಿತಿಯಲ್ಲಿ ಅದು ಅತೀ ಅವಶ್ಯವೂ ಹೌದು.ಸ್ವಲ್ಪದರಲ್ಲಿ ಜಯಂತರ ಕಥೆಗಳನ್ನು 'ಸಮನ್ವಯದ ಕಥನಗಳು' ಎಂದು ಕರೆಯಬಹುದು.

ಜಯಂತರ ಕಥೆಗಳಲ್ಲಿ ಸಾಧಾರಣ ಹಾಗೂ ಸಾಮಾನ್ಯ ವ್ಯಕ್ತಿಗಳೇ ಕೇಂದ್ರ ಪಾತ್ರಗಳಾಗಿವೆ. ಹಳ್ಳಿಗಳಲ್ಲಿ, ನಗರದ ಜನಸಂದಣಿಯಲ್ಲಿ ನಗಣ್ಯರಾಗಿ ಜೀವಿಸುತ್ತಿರುವ ಅನಾಮಿಕ ವ್ಯಕ್ತಿಗಳೇ ಜಯಂತರ ಕಥೆಗಳ ನಾಯಕ–ನಾಯಕಿಯರಾಗಿ ಮಿಂಚುತ್ತಾರೆ. ಜಯಂತರ ವಿನೋದವೂ ಅವರಿಗೇ ವಿಶಿಷ್ಟವಾದದ್ದು. ಉದಾ: 'ಚಂದ್ರಕಾಂತನ ದೀಪೋತ್ಸವ'– ದೀಪೋತ್ಸವ ಹಿಂದಿಯ ಪ್ರತಿ ಶಬ್ದಕ್ಕೂ ಓ ಓ ಸೇರಿಸಿ ಹೊಮ್‌ಕೊತೊಮ್‌ಕೊ ಎಂದು ಮಾತನಾಡುವಾಗ ಚಂದ್ರಕಾಂತನಿಗೆ ಕೊಂಕಣಿಯನ್ನು ಕೇಳಿದಂತೆಯೆ ಭಾಸವಾಗುತ್ತದೆ. 'ಈ ಬಂಗಾಲಿಗಳೂ ಕೊಂಕಣಿಗಳಂತೆ ಕಂಡಾಪಟ್ಟೆ ಮೀನು ತಿನ್ನುತ್ತಾರಂತೆ. ಮೀನಿನ ಪ್ರಭಾವವೇ ಇರಬೇಕು, ಈ ನಾಲಿಗೆಯ ಮೇಲಿನ ನಿರಂತರ ಓಂಕಾರಕ್ಕೆ ಅಂದುಕೊಂಡ.'

ಪ್ರಾರಂಭದ ಐದು ಕಥಾಸಂಕಲನಗಳಲ್ಲಿರುವ ಕಥೆಗಳಲ್ಲಿ ಕಾಣುವ ಪರಿಸರವನ್ನು ಕಟ್ಟಿಕೊಡುವಲ್ಲಿ ಹಾಗೂ ಕಥೆಯ ಪಾತ್ರಗಳ ಮನೋವ್ಯಾಪಾರದ ಕುರಿತಾದ ವಿವರಗಳು ಬಹಳ ದಟ್ಟವಾಗಿದ್ದು, ಕಥೆಯ ಚೌಕಟ್ಟು ಕೂಡ ವಿಸ್ತರಿತವಾಗಿರುವುದನ್ನು ಕಾಣಬಹುದು.ಮುಂದಿನ ಕಥಾಸಂಕಲನಗಳಲ್ಲಿಯ (ತೊಫಾನ್ ಮೇಲ್, ಚಾರ್ ಮಿನಾರ್) ಕಥೆಗಳು ಬಹಳ ಚುಟುಕಾದ ವಿವರಗಳೊಂದಿಗೆ ತೀವ್ರಗತಿಯಿಂದ ಮುಕ್ತಾಯಗೊಳ್ಳುವ ಧಾವಂತವನ್ನು ತೋರುತ್ತದೆ.ಕಿರಿದರಲ್ಲಿ ಪರಿದರ್ಶವನ್ನು ನೀಡುವತ್ತಾ ಜಯಂತಕಾಯ್ಕಿಣಿಯವರು ಆಸಕ್ತಿಯನ್ನು ವಹಿಸುತ್ತಿದ್ದಾರೆ ಎನ್ನುವುದು ಗಮನಕ್ಕೆ ಬರುತ್ತದೆ.ಆದರೆ ಕಥೆಯ ಓಘವು ತೀವ್ರವಾಗುತ್ತ ಖಚಿತವಾದ ಮುಕ್ತಾಯವಿಲ್ಲದೆ.ಕೊನೆಗೊಳ್ಳುತ್ತದೆ.ಆದ್ದರಿಂದಲೇ ಕಥೆಯನ್ನು ಓದಿ ಮುಗಿಸಿದಾಗ ಕಥೆಯು ಅಪೂರ್ಣವಾಗಿದೆ ಎನ್ನುವ ವಿಷಯ ಓದುಗನನ್ನು ಬಲವಾಗಿ ಕಾಡುತ್ತದೆ.ಜಯಂತರದ್ದು ವಾಸ್ತವವಾದ ದೋರಣೆ, ಅದರಲ್ಲೂ ವ್ಯಕ್ತಿನಿಷ್ಠತೆಯಿಂದ ಕೂಡಿದ ವಾಸ್ತವವಾದ. ಅಸಂಗತ ಪರಿಸ್ಥಿತಿಯಲ್ಲಿ ಅಪರಿಚಿತರನ್ನು ಮುಖಾಮುಖಿಯಾಗಿಸಿ ಅವರ ಮನಸ್ಸನ್ನು

ತೆರೆಯುವ ಪ್ರಯತ್ನವನ್ನು ಅವರು ತಮ್ಮ ಕಥೆಗಳಲ್ಲಿ ಹೆಜ್ಜೆ ಹೆಜ್ಜೆಗೂ ಮಾಡುತ್ತಾರೆ. ಇತರಕಥೆಗಾರರಂತೆ ನಗರ ಪರಿಸರದಲ್ಲಿ ಪರಕೀಯ ಭಾವ ಅಥವಾ ಅನಾಥ ಪ್ರಜ್ಞೆ ಅವರ ಪಾತ್ರಗಳನ್ನು ಅಷ್ಟಾಗಿ ಕಾಡುವುದಿಲ್ಲ. ಜಯಂತರಿಗೆ ಸ್ತ್ರೀಯರು ತಮ್ಮ ಮೇಲಾಗುವ ಶೋಷಣೆಯನ್ನು ಮೀರಿ ಹೇಗೆ ಬದುಕನ್ನು ಎದುರುಸುತ್ತಾರೆ ಸ್ವಂತಿಕೆಯನ್ನು ಉಳಿಸಿಕೊಳ್ಳುತ್ತಾರೆ ಎನ್ನುವುದನ್ನು ಕಥೆಗಳಲ್ಲಿ ರೂಪಿಸುವುದು ಮುಖ್ಯವಾಗಿದೆ. ಅಂತೆಯೇ ಜಯಂತರು ತಮ್ಮ ಕಥೆಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಬಹಳ ಭಿನ್ನವಾದ ಪರಿಸ್ಥಿತಿಗಳಲ್ಲಿರುವ ಸತ್ವಪೂರ್ಣವಾದ ಸ್ತ್ರೀ ಜಗತ್ತನ್ನು ಪರಿಚಯಿಸಿದ್ದಾರೆ.ಜಯಂತರು ತಮ್ಮ ಸ್ತ್ರೀ ಪಾತ್ರಗಳ ಬಾಹ್ಯ ಸೌಂದರ್ಯಕ್ಕಿಂತಲೂ ಆತ್ಮ ಸೌಂದರ್ಯದ ಕುರಿತು ಹೆಚ್ಚು ಆಸಕ್ತಿ ವಹಿಸುತ್ತಾರೆ. ಬದುಕಿನಲ್ಲಿ ಎದುರಾಗುವ ಅನಿರೀಕ್ಷಿತ ಪ್ರಸಂಗಳನ್ನು ಧೈರ್ಯದಿಂದ ಎದುರಿಸುತ್ತಾ ವಾಸ್ತವಿಕ ಜಗತ್ತಿನಲ್ಲಿ ಧೀರೋದಾತ್ತರಾಗಿ ಮಿಂಚುವ ಪಾತ್ರಗಳು ಇವು. ಸಮುದ್ರ ಕಥೆಯ ಸೀತಮ್ಮ ಇರಬಹುದು, ತನ್ಮಯಿಯ ಸೂಟಿ' ಕಥೆಯ ಕುಶೀಕಾಕಿ ಇರಬಹುದು, ಅಮೃತವಳ್ಳಿ ಕಷಾಯದ ಮಾಯೀ ಇರಬಹುದು, ಮಾತ್ರವಲ್ಲದೇ ಸುಮಿತ್ರೆ, ಭಾಮಿನಿ, ನಾಗಮ್ಮ, ಪಾಲಿ, ಅವಸರಿಲೋಖಂಡೆ, ಮಂಜರೀ ಸಾವಂತ್, ಮೋಗ್ರಿ, ಮಧುಬಾಲ, ಹೀಗೆ ಸಶಕ್ತ ಮಹಿಳೆಯರ ದೊಡ್ಡ ಪಟ್ಟಿಯನ್ನೆ ಮಾಢಬಹುದು ಎಂತಹ ಪ್ರತಿಕೂಲ ಪರಿಸ್ಥಿತಿಯನ್ನು ಸಹ ಮೀರಿ ಯಾರ ಹಂಗಿಲ್ಲದೆಯು ತಾವು ಬದುಕಬಲ್ಲೆವು ಎನ್ನುವುದನ್ನು ಈ ಪಾತ್ರಗಳು ತೋರಿಸಿಕೊಡುತ್ತವೆ. ಇವರಲ್ಲಿ ಕೆಲವರು ವಿಧವೆಯಾದರೆ, ಇನ್ನು ಕೆಲವರು ಅವಿವಾಹಿತೆಯರು, ಗಂಡನಿಂದ ತ್ಯೆಜಿಸಲ್ಪಟ್ಟವರು, ಗಂಡನ ದಬ್ಬಾಳಿಕೆಯನ್ನು ಮೌನವಾಗಿ ಸಹಿಸುತ್ತಿರುವವರು ಕೂಡ ಇದ್ದಾರೆ. ಬದುಕನ್ನು ಅತ್ಯಂತ ಸಹಜವಾಗಿ ಸ್ವೀಕರಿಸಿದ್ದು ಮಾತ್ರವಲ್ಲದೆ ಅದರಲ್ಲಿರುವ ನಕರಾತ್ಮಕ ಗುಣಗಳನ್ನು ಬಹಳ ಧೈರ್ಯದಿಂದ ಎದುರಿಸುತ್ತಾ ಅಪೂರ್ವವಾದ ಸಕಾರಾತ್ಮಕ ನಿಲುವಿನಿಂದ ಅನನ್ಯವಾದ ಚೈತನ್ಯದಿಂದ ಬೆಳಗುತ್ತಾರೆ.ತಾವು ಸೃಷ್ಟಿಸಿದ ಸ್ತ್ರೀ ಪಾತ್ರಗಳು ತಮ್ಮ ಘನತೆಯನ್ನು ಸ್ವತಃ ಶೋಧಿಸುತ್ತ ಹಾಗೆ ಶೋಧಿಸಿದ್ದನ್ನು ಕಾಪಾಡುವತ್ತ ಜಯಂತರು ತೋರುವ ಕಾಳಜಿ ಅಪಾರ.

ಜಯಂತರ ಕಥೆಗಳಲ್ಲಿ ಕಾಣಿಸುವ ಮೈತ್ರಿ ಕೊಡ ಬಹಳ ವಿಶಿಷ್ಟವಾದುದು. ಭಿನ್ನ ಪ್ರವೃತ್ತಿಯ ವ್ಯಕ್ತಿಗಳು ಆಪ್ತರಾಗುವ ಸಂದರ್ಭಗಳು ಹತ್ತು ಹಲವು.ಪಬ್ಲೂ–ಆನಂದ, ಅಭಂಗ–ಅಭಿಸಾರ, ತೇಜಬಲಿ–ರಾಂಪ್ಯರೆ, ರೂಪಕ್ ರಾಥೋಡ್ –ಪಾರ್ಟ್ನರ್, ಪ್ಯಾರೇಲಾಲ್ –ಕೇಕೂಶುಕ್ಲಾ, ಏಕಾಂತ ಭಾವೆ–ಮಧುಬಾಲಾ, ನೈರುತ್ಯ–ಹೇಮಚಂದ್ರ ಇಂತಹ ಅಗಣಿತ ಕುತೂಹಲಕಾರಿಯಾದ ನಿಸ್ವಾರ್ಥವಾದ ಸ್ನೇಹಸಂಬಂಧಗಳ್ನು ಜಯಂತರು ಓದುಗರಿಗೆ ಪರಿಚಯಿಸಿ ದಂಗುಗೊಳಿಸುತ್ತಾರೆ.ಜಾಗತೀಕರಣದ ಸಂದರ್ಭದಲ್ಲಿ ನೂತನ ಟೆಕ್ನಾಲಜಿಗಳಿಂದಾಗಿ ಮನುಷ್ಯ ಮನುಷ್ಯನ ನಡುವಿನ ಅಂತರ ಹೆಚ್ಚುತ್ತಿರುವ ಇಂದಿನ ಬದುಕಿನಲ್ಲಿ ಅಪರಿಚಿತರೊಂದಿಗೆ ಯಾವುದೇ ಅಪೇಕ್ಷೆ ಇಲ್ಲದ ಸ್ನೇಹ ಸಂಬಂಧ ಸಾಧ್ಯ ಎನ್ನುವುದರ ಕುರಿತು ಭರವಸೆ ಮೂಡಿಸುವ ಕಥೆಗಳನ್ನು ಜಯಂತರು ಬರೆದಿರುವರು.

ಅಧ್ಯಾಯ ೫

ಜಯಂತರ ಕಥೆಗಳ ಕಥಾವಸ್ತು ವಿನ್ಯಾಸ ಮತ್ತು ಶೈಲಿ

ಒಂದು ಕಲಾಕೃತಿಯು ಸ್ಥಾಪಿತಗೊಳ್ಳ ಬೇಕಾದರೆ ಆ ಕಲಾಕೃತಿಗೆ ಬೇಕಾದ ಅಥವಾ ಅದು ರೂಪುಗೊಳ್ಳಬೇಕಾದ ಸಂದರ್ಭದಲ್ಲಿ ಅರಿವಿಲ್ಲದೆ ಅದೊಂದು ಆಕೃತಿಯಾಗಿ ಕಲಾವಿದ ಕವಿಯ ಆಂತರ್ಯದಲ್ಲಿ ಮೂಡಿ ಸಹೃದಯನಿಗೆ ಒಂದು ದರ್ಶನವನ್ನು ನೀಡುತ್ತದೆ.ಹಾಗೆ ರೂಪುಗೊಳ್ಳುವಲ್ಲಿ ಕಾಲ–ದೇಶ–ಭೌಗೋಳಿಕ ಪರಿಸರದ ಹಿನ್ನಲೆಯ ಪಾತ್ರ ಪ್ರಮುಖವಾದುದು.ಲೋಕದಲ್ಲಿ ತಾನು ಕಂಡುಂಡ ಅನುಭವಗಳನ್ನು ಆಕೃತಿಯಾಗಿ ಮೂಡಿಸುವ ಒಂದು ಸೃಜನಶೀಲ ಅಭಿವ್ಯಕ್ತಿ ಕಲೆಯಾಗಿದೆ.ತನ್ನ ಅನುಭವ ಜಗತ್ತನ್ನು ಕಲ್ಪಿಸುವ ಲೇಖಕನಿಗೆ ವಸ್ತು ವೈವಿಧ್ಯಗಳು, ಅದರ ವಿನ್ಯಾಸಗಳು ಬಹು ಮುಖ್ಯ. ತಾನು ಕಂಡುಂಡ ಅನುಭವಗಳದೆ ವಸ್ತು ತಾನಾಗಿಯೇ ಒದಗಿ ಬರುತ್ತದೆ. ಅದರದೇ ಆದಂತಹ ಒಂದು ನೂತನವಾದ ಭಾಷೆಯ ಶೈಲಿಯನ್ನು ಕಂಡುಕೊಳ್ಳುವಂತಹ ಹುಡುಕಾಟ ಎಲ್ಲರಲ್ಲೂ ಇರುತ್ತದೆ. ಈ ಹಿಂದಿನದನ್ನು ಅರಿತು ಹೊಸದಾಗಿ ಕಟ್ಟುವ ಕ್ರಿಯೆಗೆ ನಿರಂತರವಾಗಿ ತೊಡಗಿಸಿಕೊಂಡಿರುವುದರ ಫಲವಾಗಿಯೇ ವಸ್ತು, ವಿನ್ಯಾಸ ಶೈಲಿ ಭಾಷೆಯಲ್ಲಿ ವಿನೂತನವಾದ ಪ್ರಯೋಗಗಳು ನಡೆಯುತ್ತವೆ. ವಾಸ್ತವ ಬದುಕಿನ ಕಣ್ಣೆದುರಿನ ಚಿತ್ರಗಳೇ ವಸ್ತುಗಳಾಗಿ ನಿರ್ಮಾಣಗೊಂಡಿರುತ್ತವೆ. ಒಂದು ವಸ್ತು ಆ ವಸ್ತುವಿಗೆ ಪೂರಕವಾದ ವಿನ್ಯಾಸ, ಆ ವಿನ್ಯಾಸಕ್ಕೆ ಅಗತ್ಯವಾದ ಶೈಲಿ ಮತ್ತು ಈ ಎಲ್ಲಕ್ಕೂ ಮೈಪಡೆದುಕೊಂಡಂತೆ ಭಾಷೆಯು ಒಂದು ಕೃತಿಯಲ್ಲಿ ಪಡಿ ಮೂಡುತ್ತದೆ.

ಯಾವುದೇ ಸಾಹಿತಿಯು ತಾನು ಹುಟ್ಟಿದ ಪರಿಸರವನ್ನು, ಅಲ್ಲಿಯ ಜನಜೀವನವನ್ನು ತನ್ನ ಬರಹದಲ್ಲಿ ದಾಖಲಿಸುತ್ತಲೇ ಬೆಳೆಯುತ್ತಾನೆ. ಹಾಗೂ ಆತ ತನಗಿಂತ ಹಿರಿಯ ಲೇಖಕರ ಪ್ರಭಾವಕ್ಕೆ ಒಳಗಾಗುವುದು ಕೂಡ ಸ್ವಾಭಾವಿಕವೇ.ಜಯಂತ ಕಾಯ್ಕಿಣಿಯವರ ಮಟ್ಟಿಗೂ ಇದು ಅನ್ವಯಿಸುತ್ತದೆ. ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಎ.ಕೆ.ರಾಮಾನುಜನ್ ಇವರು ತಮ್ಮ ಮೇಲೆ ಪ್ರಭಾವ ಬೀರಿದ್ದನ್ನು ಜಯಂತರು ವಿನಯಪೂರ್ವಕವಾಗಿ ಒಪ್ಪುತ್ತಾರೆ.ಯಾವುದೇ ಮಾರ್ಗಕ್ಕೆ ಬದ್ಧವಾಗಿರದ, ಜಾತಿ ನಿರಪೇಕ್ಷತೆಯನ್ನು ಅಭಿವ್ಯಕ್ತಿಸುವ ಈ ಮೂವರ ಮುಕ್ತ ಚಿಂತನೆಗಳು ಯುವ ಜಯಂತ ಕಾಯ್ಕಿಣಿಯರನ್ನು ಅಯಸ್ಕಾಂತದಂತೆ ಆಕರ್ಷಿಸಿದ್ದವು.ಮುಖ್ಯವಾಗಿ ಉತ್ತರಕನ್ನಡ ಜಿಲ್ಲೆಯವರಾದುದರಿಂದ ಚಿತ್ತಾಲರೊಂದಿಗೆ ನಿಕಟ ಸಂಪರ್ಕವನ್ನಿಟ್ಟಕೊಂಡಿರುವ ಜಯಂತರ ಜೀವನದೃಷ್ಟಿಯಲ್ಲಿ ಓದುಗರು ಚಿತ್ತಾಲರ ಪ್ರಭಾವವನ್ನು ಕಂಡರೆ ಆಶ್ಚರ್ಯವೇನಿಲ್ಲ. ಯಾಕೆಂದರೆ ಚಿತ್ತಾಲರಂತೆಯೇ ಜಯಂತರಿಗೂ ಮನುಷ್ಯನ ವರ್ತನೆಯಲ್ಲಿ

ವಿಶೇಷವಾದ ಆಸಕ್ತಿ. "ಇತರರ ಅನುಭವ ನಮ್ಮದಾಗುವುದೇ ಕತೆಗಳ ಮೂಲಕ.ಕತೆಗಳ ಮೂಲಕ ನಾವು ಲಿಂಗ, ಜಾತಿ, ಕುಲ, ವರ್ಗ, ಪ್ರದೇಶ ಮೊದಲಾದ ಕಂದರಗಳನ್ನು ದಾಟಬಹುದು.ಒಂದು ಒಳ್ಳೆಯ ಕತೆ ನಮ್ಮ ಸ್ವಾರ್ಥ ಅಥವಾ ಭಯದ ಜೊತೆ ಆಟವಾಡುವುದಕ್ಕೆ ಸೀಮಿತಗೊಳ್ಳದೆ ಬದುಕಿನಲ್ಲಿ ನಿಜಕ್ಕೂ ನಾವು ಯಾವುದನ್ನು ಆರಿಸಬೇಕೆಂಬ ಬಗೆಗೆ ಪ್ರತೀಕಗಳನ್ನು ಒದಗಿಸುತ್ತದೆ. ನಾವು ಈ ಭೂಮಿಗೆ ಸೇರಿದವರು, ಇಲ್ಲಿರುವ ಸಕಲ ಚರಾಚರಗಳೊಡನೆ ನಮ್ಮ ಸಂಬಂಧವುಂಟು ಎಂಬ ಅರಿವನ್ನು ನಮ್ಮಲ್ಲಿ ಸ್ಫೋಟಿಸುತ್ತವೆ. ನಾವು ಹೇಗೆ ಮನುಷ್ಯರಾಗಬಹುದು ಎಂಬುದನ್ನು ಕಲಿಸುತ್ತವೆ. ನಿಜವಾದ ಕಥೆಗಾರರು ತಮ್ಮ ಕಥಾ ಕೌಶಲ್ಯವನ್ನು ಮೆರೆಯುವುದಕ್ಕಷ್ಟೇ ಕಥೆಗಳನ್ನು ಹೇಳುವುದಿಲ್ಲ. ಅವರದು ಜ್ಞಾನೋದಯ ಉಂಟು ಮಾಡುವ, ರೂಪಾಂತರಿಸುವ ಕ್ರಿಯೆ, ಬುಡಮೇಲುಗೊಳಿಸುವ ಪ್ರವೃತ್ತಿ, ತಮ್ಮ ಕಾಲದ 'ಮಿಥ್' ಗಳಿಂದ ಮನುಷ್ಯನನ್ನು ಬಿಡುಗಡೆಗೊಳಿಸುವ ವಿಧಾನ. ಅವರು ತಮ್ಮ ಅನುಭವಗಳನ್ನು ಒಟ್ಟಾಗಿ ವಿಶ್ಲೇಷಿಸಿ ಅವು ಹೇಗೆ ಬಾಳಿಗೆ ಸಂಕೀರ್ಣ ಸಮಸ್ಯೆಗಳೊಡನೆ ಹೆಣೆದುಕೊಂಡಿವೆಯೆಂದು ತೋರಿಸಿ ಕೊಡುತ್ತಾರೆ. ಇಂತಹ ಜಯಂತರು ಬರೆದಂತಹ ಮುಂಬಯಿ ಕಥೆಗಳಿಗೆ ಅನ್ವಯಿಸುತ್ತದೆ"[೧].

ಮಾನವ ವಿನ್ಯಾಸದ ವಿವಿಧ ಪದರುಗಳನ್ನು ಪರಿಚಯಿಸಿ ಜಯಂತರ ಅನುಭವವಿಶ್ವವನ್ನು ಹಿಗ್ಗಿಸಿ ಅವರನ್ನು ಕನ್ನಡದ ಪ್ರತಿಭಾವಂತ ಸಾಹಿತಿಯನ್ನಾಗಿ ಮುಖ್ಯವಾಗಿ ಸಂವೇದನಾಶೀಲ ಕಥೆಗಾರನನ್ನಾಗಿ ಮಾಡುವಲ್ಲಿ ಮುಂಬಯಿಯ ಪಾತ್ರ ಬಹು ದೊಡ್ಡದು.ಮುಂಬಯಿಯಲ್ಲಿ ಬಹುಕಾಲ ನೆಲೆಸಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಮುಂಬಯಿಯ ಕಥೆಗಳನ್ನು ಬರೆದಿರುವ ಜಯಂತ ಕಾಯ್ಕಿಣಿಯವರು ಮುಂಬಯಿಯ ಕಥೆಗಾರರು ಎಂದೇ ಗುರುತಿಸಲ್ಪಡುತ್ತಾರೆ.ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರವಾದ ಸಣ್ಣಕಥೆಯು ಕಳೆದೆಂಟು ದಶಕಗಳಿಂದ ಮುಂಬಯಿಯಲ್ಲಿಯೂ ತನ್ನ ಆಸ್ತಿತ್ವವನ್ನು ದಾಖಲಿಸಿದೆ.ಸರ್ವಸಾಮಾನ್ಯನ ಬದುಕಿನ ಅನುಭವಗಳನ್ನು ಸಶಕ್ತವಾಗಿ ಕಟ್ಟಿ ಕೊಡುವ ಸಣ್ಣಕಥಾ ಪ್ರಕಾರವು ಮುಂಬಯಿಯಲ್ಲಿಯೂ ಸಮೃದ್ಧವಾಗಿ ಬೆಳೆದುಬಂದಿದೆ.ಇಲ್ಲಿಯ ಕಥೆಗಾರರ ಅನುಭವ ಪ್ರಪಂಚವು ಒಳನಾಡಿನ ಓದುಗರನ್ನು ಬೆರಗುಗೊಳಿಸುವಂತಹದ್ದು.ಮುಂಬಯಿಯ ಯಾಂತ್ರಿಕ ಜೀವನದಲ್ಲಿ ಸಣ್ಣಕಥೆಯು ಪ್ರಾಮುಖ್ಯತೆಯನ್ನು ಪಡೆದು ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರವೆನಿಸಿಕೊಂಡಿದೆ.ಬಲುದೀರ್ಘಕಾಲದಿಂದಲೂ ಬದುಕಿ ಬೆಳೆಯುತ್ತಾ ಬಂದಿದೆ, ಸಾಹಿತ್ಯದ ಇತರ ಪ್ರಕಾರಗಳಾದ ಕಾವ್ಯ, ಕಾದಂಬರಿಗಳು, ನಾಟಕ-ಲಘುಪ್ರಬಂಧಗಳು, ಅಂಕಣಬರಹಗಳು ಮುಂಬಯಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪ್ರಕಟಗೊಂಡಿದ್ದರೂ ಸಂಖ್ಯೆಯಲ್ಲಿ ಹಾಗೂ ಜನಪ್ರಿಯತೆಯಲ್ಲಿ ಸಣ್ಣಕಥೆಗಳಿಗೆ ಸರಿಸಾಟಿಯೆನಿಸಲಾರವು.

---

೧. ಕನ್ನಡ ಕಥನ ಸಾಹಿತ್ಯ -೨೦೦೩- ಪು.ಸಂ.೪೪೬

ಮುಖ್ಯವಾಗಿ ಬಹುಭಾಷಾ ನಗರದಲ್ಲಿ ಕನ್ನಡವನ್ನು ಇಂದಿಗೂ ಜೀವಂತವಾಗಿಡುವ ಕಾರ್ಯವನ್ನು ಸಣ್ಣಕಥೆ ಮಾಡಿದೆ ಎನ್ನುವುದು ಗಮನೀಯ ಸಂಗತಿ.ಮಹಾನಗರದ ಕ್ಲಿಷ್ಟ ಬದುಕಿನ ಬವಣೆಗಳನ್ನು ಮುಂಬಯಿಯ ಕಥೆಗಾರರು ನವೋದಯ ಕಾಲದಿಂದಲೂ ಕಣ್ಣಾರೆ ಕಂಡವರು, ಸ್ವತಃ ಅನುಭವಿಸಿ ದಾಖಲಿಸಿದವರು.ಕಳೆದ ಎಂಟು ದಶಕಗಳಲ್ಲಿ ಮುಂಬಯಿ ಕಥೆಗಾರರು ಸೃಷ್ಟಿಸಿದ ಕಥೆಗಳ ಸಂಖ್ಯೆಯೇನು ಕಡಿಮೆಯಿಲ್ಲ. ಮಾತ್ರವಲ್ಲ ತಮ್ಮ ಹೊಸತನದಿಂದ ಹಾಗೂ ಅನನ್ಯತೆಯಿಂದ ಹೊಸ ಸಂವೇದನೆಗಳನ್ನು ಪರಿಚಯಿಸುತ್ತಾ ಈ ಕಥೆಗಳು ಕನ್ನಡ ಸಾಹಿತ್ಯವನ್ನು ಸವೃದ್ಧಗೊಳಿಸಿವೆ.

ಕನ್ನಡ ಸಾಹಿತ್ಯದಲ್ಲಿ ನವ್ಯದ ಪ್ರಭಾವವು ಇಳಿಮುಖವಾಗುವ ಸಂದರ್ಭದಲ್ಲಿ ಬರೆಯಲು ಪ್ರಾರಂಭಿಸಿದ ಹೊಸತಲೆಮಾರಿನ ಕಥೆಗಾರರಾದ ರಾಘವೇಂದ್ರ ಪಾಟೀಲ, ಎಸ್.ದಿವಾಕರ, ವಿವೇಕ ಶಾನಭಾಗ, ಕೆ.ಸತ್ಯನಾರಾಯಣ, ಎಂ.ಎಸ್.ಶ್ರೀರಾಮ್, ಮೊಗಳ್ಳಿ ಗಣೇಶ ಮುಂತಾದವರ ಸಾಲಿನಲ್ಲಿ ಜಯಂತ ಕಾಯ್ಕಿಣಿಯವರು ಪ್ರಮುಖರು. ಈ ಎಲ್ಲಾ ಕಥೆಗಾರರು ನವ್ಯದ ಬರಹಗಾರರನ್ನು ಮೆಚ್ಚುಗೆಯಿಂದ ಗಮನಿಸುತ್ತಾ ಬಂಡಾಯದ ಸಳೆತದಿಂದ ತಮ್ಮನ್ನು ಕಾಪಾಡುತ್ತಾ ಬೆಳೆದವರು, ಪ್ರಯೋಗಶೀಲತೆಯನ್ನು ಆಸಕ್ತಿಯಿಂದ ಮೈಗೂಡಿಸಿಕೊಂಡವರು, ಸ್ವಂತಿಕೆಯಿಂದ ಹೊಸ ಹೊಸ ನೆಲೆಗಳನ್ನು ಶೋಧಿಸಿ ಸಫಲತೆಯ ಹಾದಿಯನ್ನು ಕ್ರಮಿಸಿದವರು.ಅದರಲ್ಲೂ ವಿಶಿಷ್ಟ ಭಾಷೆ ಮತು ರೂಪಕಗಳನ್ನೊಳಗೊಂಡ ನಗರಪ್ರಜ್ಞೆಯ ಕಥೆಗಳನ್ನು ಬರೆಯುತ್ತಾ, ಆ ಮೂಲಕ ಕನ್ನಡಕ್ಕೆ ಮಹಾನಗರದ ಅಪರಿಚಿತ ಮುಖಗಳನ್ನು ಪರಿಚಯಿಸುತ್ತಿರುವ ಜಯಂತರು ಕನ್ನಡದ ಬಹಳ ಮಹತ್ವದ ಕಥೆಗಾರರಾಗಿದ್ದಾರೆ.

ಕಾವ್ಯ, ಕಥೆ, ನಾಟಕ, ಅಂಕಣಬರಹ ಹೀಗೆ ವಿಭಿನ್ನ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿರುವ ಜಯಂತರು ತಮ್ಮ ಬರವಣಿಗೆಯ ಮೂಲಕ ಅಭಿವ್ಯಕ್ತಿಸುವ ಮನೋಭೂಮಿಕೆಯು ಏಕಪ್ರಕಾರವಾಗಿಲ್ಲ ಎನ್ನವುದನ್ನು ಒಪ್ಪಿಕೊಳ್ಳಲೇ ಬೇಕು.ಆದರೂ ಸಾಮಾನ್ಯ ಜನರನ್ನು ಗಮನಿಸುವ, ಅವರ ಜೀವನವನ್ನು ಅರಿಯುವ ಅಪಾರವಾದ ಆಸಕ್ತಿ ಅವರಲ್ಲಿದೆ.ದಿನನಿತ್ಯದ ಬದುಕಿನಲ್ಲಿ ಇತರರು ಕಂಡೂ ಕಾಣದ್ದನ್ನು ಅವರಿಗೆ ತಿಳಿಸಬೇಕೆನ್ನುವ ತವಕ ಜಯಂತರ ಒಟ್ಟು ಬರಹದಲ್ಲಿ ಎದ್ದು ಕಾಣುವ ವಿಶೇಷತೆ.ಇದನ್ನು ಅವರು ತಮ್ಮ ಕಥೆಗಳಲ್ಲಿ ಬಹಳ ಯಶಸ್ವಿಯಾಗಿ ಮಾಡಿರುವುದನ್ನು ಕಾಣುತ್ತೇವೆ. ಜಯಂತರ ಪಾಲಿಗೆ ಬರವಣಿಗೆ ಅನ್ನುವುದು ಜಾದೂಗಾರನ ಕುತೂಹಲ ಭರಿತವಾದ ಜಾದೂವಿನಂತೆ. "ಅಂತಃಕರಣವನ್ನು ಕಲಕಿದ, ಸಂವೇದನೆಯನ್ನು ಹಿಗ್ಗಿಸಿದ ಸಂಗತಿಗಳೆಲ್ಲ ಮನಸ್ಸಿನ ಮೂಲೆಯಲ್ಲಿ ತೆಪ್ಪಗೆ ಮಾಗುತ್ತಿರುತ್ತವೆ. ಕಂಡ, ಕೇಳಿದ ಸಂಗತಿಗಳೂ ಇಲ್ಲಿ ಪಾಕಗೊಳ್ಳುತ್ತಿರುತ್ತವೆ. ವಿಭಿನ್ನ ಅನುಭವಗಳ ಚಂದಿಯನ್ನಾಯುವ ಈ ಕಾಯಕ ಗುಪ್ತವಾಗಿ ಸಂವೇದನೆಯ ಹದದಲ್ಲಿ ನಡೆಯುತ್ತದೆ. ನಂತರ ಯಾವೂದೋ ಪ್ರೇರಣೆಗೆ

ಕೆರಳಲ್ಪಟ್ಟ ಎಳೆಯೊಂದನ್ನು ಹಿಡಿದೆಳೆದರೆ ಸಾಕು, ಜಾದೂಗಾರನ ಕಾಗದದ ಸುರಳಿಯಂತೆ ಹೊಂದಿಕೊಂಡು ಹೊರಬರತೊಡಗುತ್ತವೆ"[೧].ಜಯಂತ ಕಾಯ್ಕಿಣಿಯವರ ಒಟ್ಟು ಕಥೆಗಳನ್ನು ಗಮನಿಸುತ್ತಾ ಅವರ ಅನುಭವಲೋಕವನ್ನು ಅರಿಯುವತ್ತ, ಅವರು ಅಭಿವ್ಯಕ್ತಿಸುವ ಜೀವನ ಧರ್ಮವನ್ನು ಅರ್ಥೈಸುವತ್ತ ವಿಮರ್ಶಕರು ಈವರೆಗೆ ನಿರಾಸ್ತಕರಾಗಿರುವುದು ವಿಷಾಧನೀಯ ಸಂಗತಿ.

ಬದುಕಿನ ಪಾಠ ಕಲಿಸುವ ಸಮುದ್ರದಂತೆಯೇ, ಸಮಸ್ಯೆಗಳನ್ನು ಪರಿಹರಿಸಲು, ಸನ್ಮಾರ್ಗದ ದಾರಿದೀಪವಾಗಲು ಪ್ರತಿ ಹೆಜ್ಜೆಯಲ್ಲಿ ಭೇಟಿಯಾಗುವ ಊರಿನ ಆದರ್ಶಪ್ರಾಯರಾದ ಮಾಸ್ತರರು ಜಯಂತರ ಕಥೆಗಳಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತಾರೆ.ವಿದ್ಯಾರ್ಥಿಗಳ, ಬದುಕಿನಲ್ಲಿ ನೊಂದವರ ವೈಯಕ್ತಿಕ ಸಮಸ್ಯೆಗಳಿಗೆ ಮಾತ್ರವಲ್ಲ ಸಮುದಾಯದ ಕುರಿತಾಗಿಯೂ ಸ್ಪಂದಿಸಬಲ್ಲ ವಿಶಾಲ ಹೃದಯಿಗಳಾಗಿ ಮಾಸ್ತರರು ಮಿಂಚುತ್ತಾರೆ.ಜಯಂತರ ಕಥೆಗಳಲ್ಲಿ ಕಾಣಿಸುವ ಮಾಸ್ತರರು ನೈತಿಕತೆಯ ಸಂರಕ್ಷಕರು. ಜಯಂತರ ಪಾಲಿಗಂತೂ ಮಾಸ್ತರಗಳು ಪಠ್ಯವನ್ನಷ್ಟೆ ಕಲಿಸುವುದಕ್ಕೆ ಸೀಮಿತರಾದವರಲ್ಲ. ಬದುಕಿನ ಪಾಠವನ್ನು, ಮಾನವೀಯತೆಯನ್ನು ತಿಳಿಹೇಳಿದವರು. ಇನ್ನೊಂದು ಜೀವಿಯನ್ನು ತಟ್ಟಿ ಅದರ ನೋವು-ನಲಿವುಗಳನ್ನು ಅರಿತುಕೊಳ್ಳವುದನ್ನು, ತಮ್ಮದಾದ ಅನುಭವಗಳನ್ನು ಜ್ಞಾನವನ್ನು ಹಂಚಿಕೊಳ್ಳುವುದನ್ನು ಕಲಿಸಿದವರೇ ಈ ಮಾಸ್ತರುಗಳು ಸಾಮಾನ್ಯ ಜನರ ಕುರಿತು, ಸಮುದಾಯದ ಕುರಿತು ಜಯಂತರಿಗೆ ಕಳಕಳಿ ಅಪಾರ.

ಜಯಂತರ ಕಥೆಗಳಲ್ಲಿ ಬರುವ ಪಾತ್ರಗಳು ನಿಜವಾಗಿಯೂ ಬದುಕಿನಲ್ಲಿ ಹತಾಶೆಯನ್ನು ಅನುಭವಿಸಿದವರು, ನೊಂದವರು, ಅನಾಥರು, ಹುಳಗಳಂತೆ ಬದುಕುವ ಯಾರೂ ಗಮನಿಸದೇ ಇರುವಂತಹ ಕ್ಷುಲ್ಲಕ ಜೀವಿಗಳು. ಆದರೂ ಸ್ಥೈರ್ಯದಿಂದ, ಉತ್ಸಾಹದಿಂದ ಬದುಕನ್ನು ಗೆಲ್ಲುವ, ಇತರರಿಗೆ ಒಳಿತನ್ನು ಉಣಬಡಿಸುವ ಪಾತ್ರಗಳು. ಪ್ರತಿಯೊಬ್ಬರ ಬದುಕಿನಲ್ಲಿಯೂ ನೋವು, ಸೋಲು, ವಿಷಾದತೆ, ಅಸಹಾಯಕತೆಗಳು ಇವೆ. ಆದರೆ ಈ ನೋವನ್ನು ಗೆಲ್ಲಲು ಸಾಧ್ಯವಿಲ್ಲವೆಂದಲ್ಲ, ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರವೇ ಇಲ್ಲವೆಂದು ಕೈಚೆಲ್ಲಿ ಕೂತುಕೊಳ್ಳುವಷ್ಟು ಅಸಮರ್ಥರೂ ಇವರಲ್ಲ, ಸಮಾಜದ ಅತ್ಯಂತ ಅಂಚಿನ ವ್ಯಕ್ತಿಯನ್ನು ತಮ್ಮ ಕಥೆಯ ಪಾತ್ರವನ್ನಾಗಿಸುವ ಜಯಂತರ ಕಥೆಗಳು ಜೀವಂತಿಕೆಯನ್ನು ಸೂಸುವ ನಗರಜೀವನದ ವಿವಿಧ ಮಗ್ಗಲುಗಳನ್ನು ತೋರುತ್ತವೆ. ಜಯಂತರು ತಮ್ಮ ಕಥೆಗಳಲ್ಲಿ ಕಟ್ಟಿ ಕೊಡುವ ಇಂತಹ ನೂರಾರು ಪಾತ್ರಗಳು ಮನುಷ್ಯತ್ವವು ಮುಂಬಯಿಯಲ್ಲಿ ಇನ್ನೂ ಆರೋಗ್ಯವಂತ, ಸಕಾರಾತ್ಮಕ ನಿಲುವಿನ, ಬದುಕನ್ನು ಗೆಲ್ಲುವ ಛಲದಂಕ ಮಲ್ಲರಾದ ಲವಲವಿಕೆಯ ಪಾತ್ರಗಳು ಎಲ್ಲೆಲ್ಲೂ ಕಾಣಸಿಗುತ್ತವೆ.

---

೧. ಶಬ್ದತೀರ - ೨೦೦೬ - ಪು.ಸಂ.೧೩೩

ಆದರೆ ಬದುಕಿನ ನೋವುಗಳನ್ನೆಲ್ಲ ಮೀರಬಯಸುವ ಈ ಛಲ, ಮನುಷ್ಯತ್ವವನ್ನು ಕ್ರೌರ್ಯದಿಂದ ಕಾಪಾಡಿಕೊಳ್ಳಬೇಕೆನ್ನುವ ಶಕ್ತಿ ಅವರಿಗೆ ಸುಲಭವಾಗಿ ದಕ್ಕುವುದಿಲ್ಲ. ಅದಕ್ಕಾಗಿ ಅವರು ಮಾಡಬೇಕಾದ ಬಲಿದಾನಗಳಿಗಿಂತ ಅದರಿಂದ ಉದ್ಭವಿಸುವ ಜೀವನೋತ್ಸಾಹವು, ಬದುಕಿನ ಕುರಿತಾದ ಪ್ರೀತಿ ಅವರಿಗೆ ಮಹತ್ವದ್ದೆನಿಸುವುದೇ ಜಯಂತರ ಕಥೆಗಳಲ್ಲಿ ಮುಖ್ಯವಾಗುತ್ತದೆ.

ಜಯಂತರು ತಮ್ಮ ಕಥೆಗಳಲ್ಲಿ ವಿಭಿನ್ನ ಪ್ರಾಂತದ ಜನರು ಮಹಾನಗರದಲ್ಲಿ ಒಟ್ಟಾಗಿ ಭಿನ್ನ ಭಿನ್ನ ಸಂಸ್ಕೃತಿಗಳನ್ನು ಸಂರಕ್ಷಿಸುವ ಚಿತ್ರಣವನ್ನು ನೀಡುತ್ತಾರೆ. ಆ ಮೂಲಕ ವಿಶಿಷ್ಟವಾಗಿ ಮೂಡಿಬಂದ ಮಿಶ್ರ ಸಂಸ್ಕೃತಿಗಳನ್ನು ಭಿನ್ನವಾದ ನಗರ ಜಾನಪದವನ್ನು ದಾಖಲಿಸುವ ಪ್ರಯತ್ನವನ್ನು ಮಾಡುತ್ತಾರೆ ಅನ್ನಬಹುದು.

ಚಿತ್ತಾಲರ ಪ್ರಭಾವದ ಎಳೆಯ ಕಾಣಸಿಗುವುದು ಜಯಂತರ ಪ್ರಾರಂಭದ ಕಥೆಗಳ ಮಟ್ಟಿಗೆ ಮಾತ್ರ. ಜಯಂತರ ಕಥೆಗಾರಿಕೆಯು 'ದಗಡೂ ಪರಬನ ಅಶ್ವಮೇಧ' ಕಥೆಯೊಂದಿಗೆ ಅದರಲ್ಲಿ ಬರುವ ಕುದುರೆಯಂತೆ ಬೇರೆಯೇ ದಾರಿಯನ್ನು ಹಿಡಿಯಿತು ಎನ್ನುವುದನ್ನು ವಿಮರ್ಶಕರು ಕೂಡ ಒಪ್ಪಿಕೊಳ್ಳುತ್ತಾರೆ. ತಮ್ಮ 'ಅಮೃತಬಳ್ಳಿ ಕಷಾಯ' ಕಥಾಸಂಕಲನದ ಕಥೆಗಳ ಮೂಲಕ ತಮ್ಮದೇ ಆದ ಶೈಲಿ, ಭಾಷೆ ಹಾಗೂ ಜಗತ್ತನ್ನು ನಿರ್ಮಿಸಿ ತಮ್ಮತನದಿಂದ ಜಯಂತ ಕಾಯ್ಕಿಣಿಯವರು ಕನ್ನಡದ ಬಹುಮುಖ್ಯ ಹಾಗೂ ವಿಶಿಷ್ಟ ಕಥೆಗಾರರಾಗಿ ಹೊಮ್ಮಿದರು. 'ಅಮೃತಬಳ್ಳಿ ಕಷಾಯ', 'ಬಣ್ಣದ ಕಾಲು', 'ತೂಫಾನ್ ಮೇಲ್' ಅಥವಾ ಇತ್ತೀಚಿಗೆ ಪ್ರಕಟಗೊಂಡ 'ಚಾರ್ ಮಿನಾರ್' ಸಂಕಲನದ ಕಥೆಗಳು ಕನ್ನಡ ಸಂವೇದನೆಯನ್ನು ವಿಶಿಷ್ಟವಾಗಿ ವಿಸ್ತರಿಸಿವೆ. ಮುಂಬಯಿಯು ಅವರ ಪ್ರಜ್ಞಾನಕೇಂದ್ರವಾಗಿ ಮೂಡಿಬಂದುದರಿಂದಲೇ ಪ್ರಾರಂಭದಲ್ಲಿ ತಮ್ಮ ಹುಟ್ಟೂರಾದ ಗೋಕರ್ಣದ ಹಿನ್ನಲೆಯಲ್ಲಿ ಕಥೆಗಳನ್ನು ಬರೆದರೂ, ಜಯಂತರಂತೆ ಮಹಾನಗರದ ಜೀವನವನ್ನು ರೂಪಕಗಳ ಮೂಲಕ ವಿಶಿಷ್ಟವಾದ ಗದ್ಯಶೈಲಿಯಲ್ಲಿ ಕನ್ನಡ ಸಾಹಿತ್ಯಕ್ಕೆ ಪರಿಚಯಿಸಿದ ಲೇಖಕರು ಮತ್ತೊಬ್ಬರಿಲ್ಲ. ಇವರ ಕಥೆಗಳಲ್ಲಿ ಮುಂಬಯಿಯ ಕೆಳ ವರ್ಗದ ಹಾಗೂ ಮಧ್ಯಮವರ್ಗದ ಬದುಕು ರೂಪುಗೊಂಡ ಪರಿ ಅನನ್ಯವಾದುದು. ನಗರ ಜಾನಪದವನ್ನು ತಮ್ಮ ಕಥೆಗಳಲ್ಲಿ ಪ್ರತಿಬಿಂಬಿಸಿದ ಶ್ರೇಯಸ್ಸು ಇವರದ್ದು.ಮನುಷ್ಯನಲ್ಲಿ ಪ್ರೀತಿ, ಆತ್ಮವಿಶ್ವಾಸವನ್ನು ತುಂಬುತ್ತಾ, ಬದುಕನ್ನು ಪ್ರೀತಿಸುವಂತೆ ಮಾಡುವ ಸರಳ ನಿವೇದನೆಯ ನಿರ್ಮಲವಾದ ಅಷ್ಟೇ ಅತ್ಮೀಯವಾದ ಶೈಲಿ ಜಯಂತ ಕಾಯ್ಕಿಣಿಯವರದ್ದು.

ಪ್ರಾರಂಭದ ಕಥೆಗಳಲ್ಲಿ ಜಯಂತರು ನವ್ಯದ ವ್ಯಕ್ತಿನಿಷ್ಠವಾದ ಮಾರ್ಗವನ್ನು ಅನುಸರಿಸಿದರೂ, ಕಾಲಕ್ರಮೇಣ ತಮ್ಮದೇ ಅದಂತಹ ಭಿನ್ನವಾದ ಅಭಿವ್ಯಕ್ತಿಯ ಮಾರ್ಗವನ್ನು ಕಂಡು

ಕೊಂಡರು.ಕೇಂದ್ರಪಾತ್ರದ ಸುತ್ತ ಇದ್ದ ವಸ್ತುಗಳಲ್ಲಿ, ಎರಡು ಹಾಗೂ ಮೂರು ಪಾತ್ರಗಳು ಸಮಾನವಾಗಿ ಪ್ರಾಮುಖ್ಯತೆಯಿಂದ ಬೆಳೆದು ಬರುವುದನ್ನು ಕಾಣಬಹುದು. ಮುಖ್ಯವಾಗಿ ಅವರ ಕಥೆಗಳಲ್ಲಿರುವ ನಿರೂಪಕನು ಕಥೆಯ ಹಿನ್ನೆಲೆಯಲ್ಲಿದ್ದು ಎಲ್ಲವನ್ನೂ ಸಾಕ್ಷಿಪ್ರಜ್ಞೆಯಿಂದ ಗಮನಿಸುತ್ತಾ ವಿವರಗಳನ್ನು ಯಥಾವತ್ತಾಗಿ ದಾಖಲಿಸುವತ್ತ ಆಸಕ್ತಿಯನ್ನು ತೋರುತ್ತಾನೆ. 'ಚಂದ್ರಶಾಲೆ, ತೀರ, ಚುಕ್ಕಾಣಿ, ದಿಟ್ಟಿಬೊಟ್ಟು, ಹೊಸ್ತಿಲು ಕಥೆಗಳು ಕಥಾನಕದ ಅಂಶವನ್ನು ಕಡೆಗಣಿಸಿ ನುಡಿಚಿತ್ರಗಳ ಆಯಾಮವನ್ನೇ ಹೆಚ್ಚಾಗಿ ನೆಚ್ಚಿಕೊಂಡಿರುವುದರಿಂದ ಜಯಂತರ ಕಥೆಗಳಲ್ಲಿ ಕಥಾನಕದ ಬೆಳವಣಿಗೆಯಿಲ್ಲ, ಬದಲಿಗೆ ಅವು ವಿವರಗಳಲ್ಲೇ ಪರವಶಗೊಂಡಂತೆ ಉಳಿಯುತ್ತವೆ. ಆದರೆ 'ಬಣ್ಣದ ಕಾಲು' ಕಥಾಸಂಕಲನವು ಜಯಂತರು ಅಂಕಣಬರಹಕ್ಕಿಳಿಯುವ ಮುಂಚೆಯೇ ಪ್ರಕಟವಾಗಿತ್ತು. ಮೊದಲಿನ ಕಥಾಸಂಕಲನಗಳೊಂದಿಗೆ ಹೋಲಿಸಿದರೆ 'ಬಣ್ಣದ ಕಾಲು' ಸಂಕಲನದಲ್ಲಿರುವ 'ಹೊಸ್ತಿಲು' ಕಥೆಯನ್ನು ಬಿಟ್ಟರೆ ಉಳಿದವುಗಳಲ್ಲಿ ವಿವರಣೆಗಳು ವಿರಳವಾಗಿರುವುದು ಕಂಡು ಬರುತ್ತದೆ.ಒಂದು ಕೇಂದ್ರ ವಸ್ತುವಿನ ಸುತ್ತ ಹೆಣೆದ ಒಂದಕ್ಕಿಂತ ಹೆಚ್ಚು ಜೀವಿಗಳೇ ಕಥೆಯ ಜೀವಾಳವಾಗುವುದನ್ನು ನಾವು ಕಾಣುತ್ತೇವೆ. ಇಲ್ಲಿಯ ಕಥೆಗಳಲ್ಲಿ ಒಂದು ಘಟನೆ ಅಥವಾ ಪ್ರಸಂಗದ ಸುತ್ತ ಜಯಂತರು ಮೂರು ಪಾತ್ರಗಳನ್ನು ಬೆಳೆಸುತ್ತಾರೆ.ಅದು 'ಚಂದ್ರಶಾಲೆ'ಯಲ್ಲಿ ಬರುವ ತೇರಿನ ಪ್ರಸಂಗವಿರಬಹುದು, 'ಗಾಳಿ ಮರದ ನೆಳಲು'ನಲ್ಲಿ ವೆಂಕಟೇಶ್ ಬರುವ ಪ್ರಸಂಗವಿರಬಹುದು, 'ತೀರ' ಕಥೆಯಲ್ಲಿ ಕಡಲತಡಿಯಲ್ಲಿ ಸತ್ತು ಬಿದ್ದ ಮೀನು ಇರಬಹುದು.ಇನ್ನು 'ಚುಕ್ಕಾಣಿ'ಯಲ್ಲಿ ಬಸ್ಸು ಬಾರದೇ ಇರುವ ಪ್ರಸಂಗವಂತೂ ಇಡಿಯ ತದಡಿ ಊರಿಗೇ ಅನ್ವಯಿಸುತ್ತದೆ.ಆದುದರಿಂದ ಈ ಕಥೆಗಳಲ್ಲಿ ಕಥಾನಕದ ಬೆಳವಣಿಗೆ ಇಲ್ಲ ಅನ್ನುವಂತಿಲ್ಲ. ಇನ್ನು 'ದಿಟ್ಟಿಬೊಟ್ಟು' ಮತ್ತು 'ಹೊಸ್ತಿಲು' ಕಥೆಗಳು ನೀಡುವ ಮುಂಬಯಿಯ ರಸ್ತೆಬದಿಯ ಬದುಕಿನ ಚಿತ್ರಣವಂತೂ ಕಾದಂಬರಿಗೆ ವಸ್ತುವಾಗುವಷ್ಟು.

ಜಯಂತರು ತಮ್ಮ ಸಾಹಿತ್ಯದಲ್ಲಿ ಬಳಸುವ ಭಾಷೆಯ ಕುರಿತು ಬಹಳ ವಿಮರ್ಶಕರಿಗೆ ಕುತೂಹಲವಿದೆ. ಇನ್ನು ಕೆಲವರಿಗೆ ಅನಾಸಕ್ತಿಯೂ ಇದೆ ಅನ್ನಿ. ಒಬ್ಬ ಸಾಹಿತಿಯು ತನ್ನ ಮಾತೃ ಭಾಷೆಯನ್ನು ತನ್ನದೇ ಆದ ಪರಿಯಲ್ಲಿ ಬೆಳೆಸುವ ಹಾಗೂ ದುಡಿಸಿಕೊಳ್ಳುವ ಸ್ವಾತಂತ್ರ್ಯವನ್ನು ಪಡೆದಿರುತ್ತಾನೆ. ಅದರಲ್ಲಿ ಆತ ಎಷ್ಟು ಸಫಲತೆಯನ್ನು ಸಾಧಿಸಿದ ಎನ್ನುವುದು ಇಲ್ಲಿ ಮುಖ್ಯ.ಜಯಂತರ ಕಥೆಗಳು ತಮ್ಮ ಭಿನ್ನವಾದ ಶೈಲಿಯಲ್ಲಿ ಮುಂಬಯಿನಗರಕ್ಕೇ ವಿಶಿಷ್ಟವಾದ ಭಾಷೆಯ ಬಳಕೆಯಿಂದಾಗಿ ಅನನ್ಯತೆಯನ್ನು ಪಡೆದಿವೆ ಎನ್ನುವುದು ಎಲ್ಲರೂ ಒಪ್ಪಬೇಕಾದ ವಿಷಯ.

ಜಯಂತರು ತಮ್ಮ ಕಥೆಗಳಲ್ಲಿ ಕನ್ನಡದ ಜಾಯಮಾನಕ್ಕೇ ಹೊಸತೆನಿಸುವ ಭಾಷೆಯನ್ನು ಬಳಸುತ್ತಾರೆ. ಮುಂಬಯಿಯ ಕನ್ನಡದಲ್ಲಿ, ಹಿಂದಿ, ಮರಾಠಿ, ಗುಜರಾತಿ, ಇಂಗ್ಲಿಷ್ ಪದಗಳು

ಧಾರಾಳವಾಗಿ ಬೆರೆತು ಒಂದಾಗಿ ಬೇರೆಯೇ ಆದ ಮಿಶ್ರಣ ತಯಾರಾಗಿರುತ್ತದೆ.ಅದು 'ಬೊಂಬಾಯಿ ಭಾಷೆ'. ಉದಾ: ಒಬ್ರಿ ಬಿಂದಾಸ್ ಮೋಕಳಾ ಆಗಿ ಗಾಡಿ ಬಿಡುತಿದ್ದ, ಬೇಕಾರು ಮಕ್ಕಳು, ಸುನ್ನನಾಗಿ ತಲೆದೋರುತ್ತದೆ, ಕೋರಾ ಕಾರ್ಡ್, ಸಡೇಲಾ ಪಿಕ್ಚರ್, ಗರ್ದಿ, ಫೇಕಾಫೇಕಿ, ಪಟಾಯಿಸುವುದು, ಅವಘಡ ಅನಿಸುತ್ತಿತ್ತು, ಇತ್ಯಾದಿ... ಇತ್ಯಾದಿ.ಈ ಭಾಷೆಯ ಪರಿಚಯವಿಲ್ಲದವರಿಗೆ ಜಯಂತರ ಕಥೆಗಳು ಪರಕೀಯ ಅನಿಸಿದರೆ ಅದೇನು ದೊಡ್ಡ ಸಂಗತಿಯಲ್ಲ. ಆದರೆ ಅನ್ಯ ಪರಿಸರದ ಇಂಥ ಸಂಯುಕ್ತ ಸಂವೇದನೆಯ ಅಭಿವ್ಯಕ್ತಿಯನ್ನು ಕಥನದ ಆವರಣವಾಗಿಸುವ ಜಯಂತರ ಸಾಹಸ ಮೆಚ್ಚುವಂತದ್ದು. ಧಾರವಾಡದ ಭಾಷೆಯಲ್ಲಿ, ಕುಂದಾಪುರದ ಕುಂದಾಭಾಷೆ ಮಿಶ್ರಿತ ಕನ್ನಡದಲ್ಲಿ, ತುಳುಮಿಶ್ರಿತ ಭಾಷೆಯಲ್ಲಿ ಹಾಗೂ ದಲಿತರ ಭಾಷೆಯಲ್ಲಿ ಬರೆದ ಸಾಹಿತ್ಯದ ಕುರಿತು ಕನ್ನಡದ ಒಂದು ಓದುಗ ವರ್ಗ ಹಾಗೂ ಹಲವು ವಿಮರ್ಶಕರು ಮಡಿವಂತಿಕೆಯನ್ನು ಉದಾಸೀನವನ್ನು ಪ್ರದರ್ಶಿಸುವುದನ್ನು ನಾವು ಕಾಣುತ್ತೇವೆ. ಇದು ಜಯಂತರ ಕಥೆಗಳಿಗೂ ಅನ್ವಯಿಸುತ್ತದೆ ಎನ್ನುವುದು ಸತ್ಯ. ಇನ್ನೊಬ್ಬರ ಅನುಭವವನ್ನು ತಮ್ಮದಾಗಿಸಲು ಅವರ ಭಾಷೆಯನ್ನು ಅರಿಯಬೇಕಾದುದು ಅವಶ್ಯ.ಮಾತ್ರವಲ್ಲದೆ, ಕನ್ನಡದ ಅನುಭವಲೋಕವು ಇಂದಿಗೂ ಗ್ರಾಮೀಣಭಾಗಕ್ಕೆ ಜೋತುಹಾಕಿಕೊಂಡಿರುವುದು ವಿಷಾದನೀಯ ಸಂಗತಿ.ಬದಲಾಗುತ್ತಿರುವ ಜಾಗತಿಕ ಸಂದರ್ಭದಲ್ಲಿ ಹೊಸ ಕ್ಷಿತಿಜದತ್ತ ಮುಖಮಾಡುವ ಅಗತ್ಯ ಇಂದು ತೀವ್ರವಾಗಿದೆ ಎನ್ನುವುದನ್ನು ಅಲ್ಲಗಳೆಯಲಾಗದು.

ಗೋಕರ್ಣದ ಹಿನ್ನಲೆಯಲ್ಲಿ ಬರುವ ಕಥೆಗಳಲ್ಲಿ ಮಾಸ್ತರರು ಬಂದೇ ಬರುತ್ತಾರೆ.ಮಾಸ್ತರರ ವಿನಾಃ ಗೋಕರ್ಣವನ್ನು ಕಲ್ಪಿಸುವುದು ಜಯಂತರಿಗೆ ಅಸಾಧ್ಯವಾದ ಸಂಗತಿ.ನೈತಿಕ ಪ್ರಜ್ಞೆಯ ರೂಪದಲ್ಲಿ ಗೋಕರ್ಣದ ಕಥೆಗಳಲ್ಲಿ ಮಾಸ್ತರರು ಬಂದರೆ ಮುಂಬಯಿಯ ಕಥೆಗಳಲ್ಲಿ ಮತ್ತೆ ಮತ್ತೆ ಕಾಣಿಸುವ ಆಸ್ಪತ್ರೆಯ ಪರಿಸರ ಮನುಷ್ಯನಿಗೆ ಬದುಕಿನ ಪಾಠವನ್ನು, ನೈತಿಕತೆಯನ್ನು ಕಲಿಸುತ್ತದೆ.ಕೊಂಡಿ, ಚಂದ್ರಕಾಂತನ ದೀಪೋತ್ಸವ, ಪಾರ್ಟನರ್, ಸಂತೆಯ ದಿನ, ನೀರು ಕಥೆಗಳಲ್ಲಿ ತಮಗೆ ಸಂಬಂಧವಿಲ್ಲದವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಸಂದರ್ಭವನ್ನು ಕಟ್ಟಿಕೊಡಲಾಗಿದೆ. 'ಟಿಕ್-ಟಿಕ್ ಗೆಳೆಯಾ''ಬಕುಲ ಗಂಧ' ಕಥೆಗಳು ಆಸ್ಪತ್ರೆಯ ಅವರಣದಲ್ಲಿಯೇ ನಡೆಯುತ್ತವೆ. ಆಸ್ಪತ್ರೆಯಲ್ಲಿರುವ ಕ್ಯಾಂಟೀನಿನ ಪರಿಸರವು ಕೂಡ 'ವ್ಯಾಪಕವಾದ ಯಾತನೆಯ ಅರಿವಿನಲ್ಲೇ ಖಾಸಗಿ ದಾಹ ಮತ್ತು ಹಸಿವುಗಳನ್ನು ಔಚಿತ್ಯದ ಗಡಿದಾಟದೆ ಮೆಲುವಾಗಿ ಹಿಂಗಿಸುವ ತಾಣವಾಗಿತ್ತು ಅದು, ಇಡೀ ಜಗತ್ತೇ ಹಾಗಿರಬೇಕಲ್ಲವೇ? (ಟಿಕ್ ಟಿಕ್ ಗೆಳೆಯಾ – ಪುಟ –೧೦೩) ಅನ್ನುವ ಆಶಯವನ್ನು ಜಯಂತರು ಇಲ್ಲಿ ಅಭಿವ್ಯಕ್ತಿಸಿದ್ದು ಬಹಳ ಸೂಚ್ಯವಾಗಿದೆ.'ಪರಸ್ಪರ ಸಂಬಂಧವಿರದ ಮಂದಿ ಮೃತ್ಯುವಿನೊಡನೆ ಪರೋಕ್ಷ ಅಪರೋಕ್ಷ ಸೆಣಸುತ್ತಿರುವ ಪರಿಸರದಲ್ಲಿ ಸಂದಾಯವೇ ಇರದ ಸಾರ್ವತ್ರಿಕ ಋಣದ ಬಿಡುಗಡೆಯ ರಾಗ' ಮಿಡಿಯುವ ವಾರ್ಡಿನಲ್ಲಿ ಬದುಕು ಎಷ್ಟು ಭಂಗುರ ಎನ್ನುವ ಅರಿವು ಮೂಡುತ್ತದೆ.ಅದನ್ನು ಅರಿತವಳಾಗಿ

ಮಾಯೀ ನಗರದಲ್ಲಿ ಹಬ್ಬಿದ್ದ ಕೋಮುಗಲಭೆಯಲ್ಲಿ ಗಾಯಗೊಂಡು ನೆನಪನ್ನೆ ಕಳೆದುಕೊಂಡ ತನ್ನ ಮಗನದೇ ವಯಸ್ಸಿನ ಅನಾಮಿಕ ಗಾಯಾಳುವಿಗೆ ರಾತ್ರಿಯಲ್ಲಿ ಗಂಜಿ ಕೊಂಡು ಹೋಗುವವಳಾಗುತ್ತಾಳೆ. 'ದಿಟ್ಟಿಬೊಟ್ಟು' ಕಥೆಯಲ್ಲಿ ಒಂಟಿ ಜೀವಿಯಾದ ಕೆ.ಕೆ.ಅವರು ಅಸೌಖ್ಯದಿಂದ ಆಸ್ಪತ್ರೆಯಲ್ಲಿ ಮಲಗಿರಲು ಆರ್ಟಿಸ್ಟ್ ಸೆಂಟರಿನ ಪದಾಧಿಕಾರಿಗಳೆಲ್ಲ ಪಾಳಿ ಪ್ರಕಾರ ಅವರನ್ನು ನೋಡಿಕೊಳ್ಳುವ ಚಿತ್ರಣವಿದೆ. ಅವರು ಚಿತ್ರಕಲೆ ಕಲಿಸಿದ ರಸ್ತೆಯಬದಿಯ ರಾಶಿ ರಾಶಿ ಮಕ್ಕಳು ದಿನಾ ಆಸ್ಪತ್ರೆಯ ಗೇಟಿನ ಹೊರಗೆ ನಿಂತು ಮರಳಿ ಹೋಗುತ್ತಾರೆ, ಯಾಕೆಂದರೆ ಕೊಳಕಾಗಿ ಗಲೀಜಾಗಿರುವ ಆ ಹುಡುಗರನ್ನು ಆಸ್ಪತ್ರೆಯ ಒಳಗೆ ಬಿಡುತ್ತಿರಲಿಲ್ಲ. 'ರಕ್ತಸಂಬಂಧಿಗಳೇ ಇಲ್ಲದವರು ಅನಾಥರಲ್ಲ' (ಮಧುಬಾಲ) ಎನ್ನುವುದನ್ನು ಮಾತಿನ ಮೂಲಕ ಕೃತಿಯ ಮೂಲಕ ಸಾಧಿಸಿ ತೋರುವ ಪಾತ್ರಗಳು ಜಯಂತರ ಕಥೆಗಳ ಜೀವಾಳ.

ಪರಿಸರ ನಾಶ, ಸಂಸ್ಕೃತಿಯ ನಾಶ ಎಲ್ಲವೂ ಮಾನವನನ್ನು ವಿನಾಶದತ್ತ ಒಯ್ಯುತ್ತಿರುವುದನ್ನು ಅಲ್ಲಗಳೆಯಲಾಗದು.ಮನುಷ್ಯನನ್ನು ಮನುಷ್ಯನನ್ನಾಗಿಸುವುದಕ್ಕೆ ನಿರ್ಮಲವಾದ ಪ್ರಕೃತಿದತ್ತ ಪರಿಸರದ ಅಗತ್ಯವೂ ಇದೆ ಎನ್ನುವುದನ್ನು ಜಯಂತರು ಬಲವಾಗಿ ನಂಬಿದವರು.ಜಯಂತ ಕಾಯ್ಕಿಣಿಯವರು ಒಂದು ವಸ್ತುವನ್ನು ಅತ್ಯಂತ ಗಮನವಿಟ್ಟು ಪರಿಶೀಲಿಸಿ ಅದರ ಎಲ್ಲಾ ಮಗ್ಗಲುಗಳನ್ನು ಸಮಗ್ರವಾಗಿ ಗ್ರಹಿಸಿ ಸಮರ್ಥವಾದ ಚಿತ್ರಣವನ್ನು ನೀಡುವಲ್ಲಿ ಬಹುಶಃ ಇವರು ಪಡೆದ ವೈಜ್ಞಾನಿಕ ಶಿಕ್ಷಣವೇ ಕಾರಣವಾಗಿರಬಹುದು. ಒಂದೇ ವಿಷಯವು ಬೇರೆ ಬೇರೆ ಪರಿಸರಗಳಲ್ಲಿ, ಸಂದರ್ಭಗಳಲ್ಲಿ ವಿಭಿನ್ನ ಅರ್ಥಸಾಧ್ಯತೆಗಳನ್ನು ನೀಡಬಲ್ಲದು, ಕಾಣ್ಕೆಯನ್ನು ದರ್ಶಿಸಬಲ್ಲದು ಎನ್ನುವುದಕ್ಕೆ ಅವರ ಕಥೆಗಳೇ ಸಾಕ್ಷಿ. "ಮಧ್ಯಮವರ್ಗದ ಒಂದು ವಿಕ್ಷಿಪ್ತಗಳಿಗೆಯನ್ನು ಜಯಂತರು ಮಕ್ಕಳು ಚಿಟ್ಟೆ ಹಿಡಿಯುವ ಹಾಗೆ ಏಕಾಗ್ರತೆಯಿಂದ ಹೊಂಚು ಹಾಕಿ ಹಿಡಿಯುತ್ತಾರೆ, ಮತ್ತು ಎಲ್ಲಾ ಲವಲವಿಕೆ, ತಾಜಾ ತನದಿಂದ ನಮ್ಮ ಮುಂದಿಡುತ್ತಾರೆ. (ಅವರ ಕತೆಯಲ್ಲೇ ಬರುವ) ಕ್ಷೌರದಂಗಡಿಯ ಹುಡುಗ ಹಿಡಿದು ತೋರಿಸುವ ಕನ್ನಡಿಯ ಹಾಗೆ, ಒಂದರೊಳಗೊಂದು ಕನ್ನಡಿ ಸೇರಿ ಹೋಗಿ ತುಂಬ ದೂರದ ತನಕ ಅದರಲ್ಲಿ ಒಂದೇ ಮುಖ ಬೇರೆಬೇರೆಯಾಗಿ ಕಾಣಿಸುತ್ತಾ ಹೋಗುತ್ತದೆ, ಮತ್ತು ಅದೇ ಕಾಲಕ್ಕೆ ಅಂತರಂಗವನ್ನೂ ತೆರೆಯುತ್ತಾ ಹೋಗುತ್ತದೆ".ಎಂದು ಜೋಗಿಯವರು (ಬಣ್ಣದ ಕಾಲು-೧೯೯೯ ಸಂಕಲನದ ಹಿನ್ನುಡಿಯಲ್ಲಿ) ಜಯಂತರ ಕಥೆಗಾರಿಕೆಯ ಕುರಿತು ಹೇಳಿರುವುದು ಗಮನಾರ್ಹ.

ಮುಂಬಯಿ ಭಾಷೆಯಂತೆ ಜಯಂತರ ಪಾತ್ರಗಳು ಕೂಡ ಕನ್ನಡೇತರ ಪಾತ್ರಗಳು.ಭಾಷೆ, ಜಾತಿ, ಮತ ಇವೆಲ್ಲವನ್ನೂ ಮೀರಿದ ಪಾತ್ರಗಳನ್ನು, ಸನ್ನಿವೇಶಗಳನ್ನು ಸೃಷ್ಟಿಸುವ ಜಯಂತರು ಪ್ರಸ್ತುತ ಸಾಮಾಜಿಕ ಪರಿವರ್ತನೆಗಳಿಗೆ ಸ್ಪಂದಿಸುವ ಮಹತ್ವದ ಲೇಖಕರು.ಕನ್ನಡೇತರ ಪಾತ್ರಗಳ ಮೂಲಕ ಜಯಂತರು ಕನ್ನಡ ಸಾಹಿತ್ಯಕ್ಕೆ ಪರಿಚಯಿಸುವ ಸಂವೇದನೆಗಳು ಸಾರ್ವಕಾಲಿಕವಾದವು. ಇವರ ಗೋಕರ್ಣದ ಕಥೆಗಳಲ್ಲಿ ಮಾತ್ರ ಅಲ್ಲಿಯ ಪ್ರಾದೇಶಿಕತೆಯನ್ನು ಬಿಂಬಿಸುವ ಪಾತ್ರಗಳು ಕಂಡು ಬರುತ್ತವೆ

ನಿಜ. ಆದರೆ ಅವರು ಬರೆದಿರುವ ಮುಂಬಯಿ ಕಥೆಗಳ ಪಾತ್ರಗಳು ಗಮನಸೆಳೆಯುತ್ತವೆ. ಅಸಾವರಿ ಲೋಖಂಡೆ, ಏಕಾಂತ್ ಭಾವೆ, ಮುಚ್ಛಿ ಮೀಯಾ, ಪ್ಯಾರೆಲಾಲ್, ಕೇಕೂಶುಕ್ಲಾ, ಇಂದ್ರನೀಲ, ದೀಪೋತ್ಸವ, ಪಾಂಡುರಂಗ ಖೋತ್, ಮೋಪಟ್, ರಾಂಪ್ಯಾರೆ, ರೂಪಕ್ ರಾಥೋಡ್, ಮೋಗ್ರಿ, ಸತ್ಯಜಿತ್, ಮಧುಬಾಲ, ಅಂತರಿಕ್ಷ ಕೋಠಾರಿ ಇತ್ಯಾದಿ. ಈ ರೀತಿಯಲ್ಲಿ ಜಯಂತರು ಕನ್ನಡಕ್ಕೆ ಹೊಸ ಭಾಷೆ, ಹೊಸ ಪಾತ್ರ ಅಂತೆಯೇ ಹೊಸ ಹೆಸರುಗಳನ್ನು ಸಹ ಪರಿಚಯಿಸುತ್ತಾರೆ. ಮುಂಬೈನಲ್ಲಿ ಜಾತಿ ಸೂಚಕ, ಸ್ಥಳಸೂಚಕ ಅಡ್ಡ ಹೆಸರುಗಳು ಅಸ್ತಿತ್ವವನ್ನೇ ಕಳೆದುಕೊಳ್ಳುತ್ತವೆ. ಇದೇ ಕಾರಣದಿಂದಾಗಿ ಎಷ್ಟೋ ಜನ ತಮ್ಮ ಹೆಸರುಗಳನ್ನು ಬದಲಾಯಿಸುವುದನ್ನು ಕಾಣುತ್ತೇವೆ. ಭಾವನಾತ್ಮಕ ಸಂಬಂಧಗಳು ಚಿಗುರಬೇಕಾದ ಜಗತ್ತಿನಲ್ಲಿ ಹೆಸರು ಎಷ್ಟು ಅಮುಖ್ಯ ಎನ್ನುವುದನ್ನು ಜಯಂತರು ತಮ್ಮ 'ಮಧು ಬಾಲ' ಕಥೆಯಲ್ಲಿ ಸುಂದರವಾಗಿ ವಿವರಿಸಿದ್ದಾರೆ. ಏಕಾಂತ್ ಭಾವೆಗಾಗಲಿ, ಮಧು ಬಾಲಾಳಿಗಾಗಲಿ ಹೆಸರಿನ ಅಗತ್ಯ ಬೀಳುವುದೇ ಇಲ್ಲ. ಮುಂಬಯಿಗೆ ಬಂದ ಜನರು ತಮ್ಮ ಸರ್ವಸ್ವವನ್ನು ಮರೆತು (ಹೆಸರು ಕೂಡ) ಹೊಸತಾದ ಜನ್ಮವನ್ನು ಪಡೆಯುತ್ತಾರೆ ಎನ್ನುವುದು ಸುಳ್ಳಲ್ಲ.

ಜಯಂತ ಕಾಯ್ಕಿಣಿಯವರು ರೂಪಕಗಳ ಸರದಾರ, ಅವರಂತೆ ರೂಪಕಗಳನ್ನು ಕಥೆಗಳಲ್ಲಿ ಬಳಸುವ ಚಾತುರ್ಯ ಪಡೆದವರು ಕನ್ನಡದಲ್ಲಿ ಬಹಳ ವಿರಳ. ಅವರ ಕಥನಶೈಲಿಗೆ ಈ ರೂಪಕಗಳು ಹೊಸತೇ ಆದ ಆಯಾಮವನ್ನು ನೀಡುತ್ತೇವೆ. ಜಯಂತರು ತಮ್ಮ ಕಥೆಗಳಲ್ಲಿ ಮುಂಬೈ ನಗರದ ಬದುಕಿನ ಸೂಕ್ಷ್ಮ ಚಿತ್ರಣವನ್ನು ರೂಪಕಗಳೊಂದಿಗೆ, ಕಾವ್ಯಮಯ ಭಾಷೆಯಲ್ಲಿ ಚಿತ್ರಿಸಿದ ಪರಿ ಅಮೋಘವಾದದ್ದು ನೂರಾರು ಅರ್ಥಗಳನ್ನು ನೀಡುವ ಸಾಮರ್ಥ್ಯವಿರುವ ಅವರ ಪ್ರತಿಯೊಂದು ಶಬ್ದಗಳನ್ನು ಗಮನವಿಟ್ಟು ಆಸ್ಥೆಯಿಂದ ಓದಿದಾಗ ಉಂಟಾಗುವ ಅನುಭವ ಅನನ್ಯ. ಕಥೆಗಳು ಕೇಂದ್ರ ಪಾತ್ರದ ಬದುಕಿನ ನಿರ್ಣಾಯಕ ಕ್ಷಣಗಳ ಸುತ್ತ ಕಟ್ಟಲ್ಪಟ್ಟಿವೆ. ಕಥೆಯೊಂದು ಮುಖ್ಯ ಪಾತ್ರದ ಬದುಕಿನ ಕ್ಷುಲಕ ಹಾಗೂ ನೀರಸ ವಿವರಗಳಿಂದ ಪ್ರಾರಂಭವಾಗಿ, ಬದುಕಿನಲ್ಲಿ ಅರ್ಥಕ್ಕಾಗಿ ಹಾಗೂ ಸಾಂಗತ್ಯಕ್ಕಾಗಿ ಆ ಪಾತ್ರವು ನಡೆಸುವ ತಡಕಾಟವನ್ನು ಚಿತ್ರಿಸುತ್ತದೆ.

ಮಾತೃತ್ವದ ಪರಿಕಲ್ಪನೆಯು ಜಯಂತರ ಕಥೆಗಳಲ್ಲಿ ವಿಭಿನ್ನ ಪರಿಯಿಂದ ಮತ್ತೆ ಮತ್ತೆ ಮೂಡಿಬರುವುದನ್ನು ಕಾಣಬಹುದು. 'ಅಮೃತಬಳ್ಳಿ ಕಷಾಯ' ಕಥೆಯಲ್ಲಿಬರುವ ತಾಯಿಯ ಪ್ರೀತಿ ಅವಳ ಮಗನಿಗಷ್ಟೇ ಸೀಮಿತವಾದುದ್ದಲ್ಲ. ಆ ಮಾತೆಯ ಪ್ರೀತಿ ವ್ಯಾಪಾಕವಾದುದು, ಮಾನವತೆಯನ್ನು ತನ್ನ ಮಡಿಲಲ್ಲಿ ಪ್ರೀತಿಯಿಂದ ತಟ್ಟಿ ಜೋಗುಳ ಹಾಡಿ ತೂಗಿಸುವಂತಹದ್ದು. ಈಕೆ ತನ್ನ ಎದೆಹಾಲನ್ನು ಹೊಟ್ಟೆಯಲ್ಲಿ ಹುಟ್ಟಿದ ಮಗನೊಂದಿಗೆ ಇತರ ಮಕ್ಕಳಿಗೂ ಊಡಿಸಿದವಳು. ಮಾಯೀ ಆಸ್ಪತ್ರೆಯ ಅಪರಿಚಿತ ಗಾಯಾಳುಗಳಿಗೆ, ರೋಗಿಗಳಿಗೆ ಗಂಜಿಯನ್ನು, ಅಮೃತಬಳ್ಳಿಯ ಕಷಾಯವನ್ನು ಯಾವುದೇ

ಪ್ರತಿಫಲವಿಲ್ಲದೆ ಹಂಚುವ ಕಾರ್ಯವನ್ನು ಬಿಡುವಿಲ್ಲದೆ ಮಾಡುತ್ತಿರುತ್ತಾಳೆ.ಮನುಷ್ಯ ಮನುಷ್ಯನನ್ನು ಬೆಸೆಯುವ ಈ ನಿರ್ವಾಜ್ಯ ಪ್ರೀತಿಯ ಅಂತಃಕರಣ ಮಾತೆಯ ರೂಪದಲ್ಲಿ ಹಾಗೂ ಅಮೃತಬಳ್ಳಿಯ ಪ್ರತೀಕದಲ್ಲಿ ಜಯಂತರು ಅದ್ಭುತವಾಗಿ ಕಟ್ಟಿಕೊಡುತ್ತಾರೆ.ಮಾತೃತ್ವದ ಪರಿಕಲ್ಪನೆಯ ಪ್ರತೀಕವಾಗಿ ಇಲ್ಲಿ ಅಮೃತಬಳ್ಳಿ ಇದ್ದರೆ, 'ಮಧುಬಾಲ' ಕಥೆಯಲ್ಲಿ ಹಾಜಿಅಲಿ ದರ್ಗಾದ ಇಡಿಯ ಪ್ರದೇಶವು ಮಧುಬಾಲಾಳಿಗೆ ತಾಯಿಯಾಗಿ ಕಾಣಿಸುತ್ತದೆ.'ಭಾಮಿನಿ ಸಪ್ತಪದಿಯಲ್ಲಿ' ಬಾಗಾಪುರದ ಮಲ ಹೊರುವ ಹೆಂಗಸು ತನ್ನ ಮಾತುಗಳಿಂದಾಗಿ ಇಡೀ ಊರಿನ, ಇಡೀ ದೇಶದ, ಇಡೀ ಲೋಕದ ತಾಯಿಯಾಗಿ ಕಂಡುಬರುತ್ತಾಳೆ, ಹಾಗೂ ಸಮುದ್ರದ ಸದ್ದಡಗಿಸುವಂತಿದ್ದ ಆ ತಾಯಿ ನೆನಪಿನಿಂದ ಭಾಮಿನಿಯ ಬದುಕಿಗೆ ಹೊಸ ಅರ್ಥ ಕಾಣಿಸುತ್ತದೆ. 'ಒಪೆರಾ ಹೌಸ್'ನಲ್ಲಿ ಇಂದ್ರನೀಲನಿಗೆ ಮುಂಬಯಿಯ ಅಲೆಮಾರಿ ಚನಾವಾಲಾನ ಅಗ್ಗಿಷ್ಟಿಕೆಯು ಬಾಲ್ಯದಲ್ಲಿ ಅಮ್ಮ ಹೊತ್ತಿಸಿದ್ದ ಒಲೆಯ ಬಿಸಿಯನ್ನು ನೀಡುತ್ತದೆ, ಹಾಗೂ ನಿದ್ದೆಯಿಂದೆದ್ದು ಮುಂಜಾವಿನಲ್ಲಿ ಒಲೆ ಹೊತ್ತಿಸುವಾಗ ಬೆಳಗುತ್ತಿದ್ದ ಅಮ್ಮನ ನಿರ್ವಿಕಾರ ಮುಖವನ್ನು ಜ್ಞಾಪಿಸುತ್ತದೆ.

ಕಾಲ ವ್ಯರ್ಥ ಮಾಡಿಕೊಳ್ಳದೆ ತಮ್ಮನ್ನು ಹಂಚಿಕೊಳ್ಳುವಲ್ಲಿ ಸ್ವಂತದ ದುಃಖವನ್ನು ಮರೆಯುವಲ್ಲಿ ಜಯಂತರ ಸ್ತ್ರೀಪಾತ್ರಗಳು ಮಾದರಿಯಾಗಿ ಕಂಗೊಳಿಸುತ್ತವೆ. ಉದ್ಯೋಗಸ್ಥ ಮಹಿಳೆ ಎದುರಿಸಬೇಕಾದ ಸಮಸ್ಯೆಗಳು ಹಲವಾರು, ಮನೆಯಿಂದಲೇ ಅದರ ಪ್ರಾರಂಭ.ಆದರೆ ಅದನ್ನು ಸರಿಯಾಗಿ ಗುರುತಿಸಿದ ಜಯಂತರು ಹೆಣ್ಣಿನ ಬವಣೆಗಳನ್ನು ತಮ್ಮ ಕಥೆಗಳಲ್ಲಿ ಸ್ಪಷ್ಟವಾಗಿ ಬೆಳಕಿಗೆ ತಂದ ರೀತಿ ಶ್ಲಾಘನೀಯ. ಹೆಣ್ಣೊಬ್ಬಳು ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಕೂಡ ತನ್ನತನವನ್ನು ಉಳಿಸಿಕೊಳ್ಳಲು ಸಮರ್ಥಳಾಗುವಂತೆ ಆತ್ಮವಿಶ್ವಾಸವನ್ನು ಮೂಡಿಸುವುದನ್ನು ಚಿತ್ರಿಸುವಲ್ಲಿ ಜಯಂತರಿಗೆ ವಿಪರೀತ ಆಸಕ್ತಿ.

<u>ಕಥಾ ವಸ್ತು ವಿನ್ಯಾಸ:</u>

ಜಯಂತಕಾಯ್ಕಿಣಿಯವರ ಕತೆ, ಕಾವ್ಯಗಳಲ್ಲಿ ಸೂಕ್ಷ್ಮ ಸಂವೇದನೆ ಬಹುತೇಕ ಕಾಣಸಿಗುವ ವಸ್ತು. ಇಳಿ ಸಂಜೆಯ ಬಿಸಿಲು, ಬಸಿಲುಕೋಲು, ಪಾತರಗಿತ್ತಿ, ಬಣ್ಣ ರೈಲು ನಿಲ್ದಾಣ ಸಮುದ್ರತೀರ ಇವರ ಬರಹಗಳಲ್ಲಿ ಸಾಮಾನ್ಯವಾಗಿ ಪ್ರತಿಫಲಿಸುತ್ತಲೇ ಇರುತ್ತವೆ. ಜಯಂತರ ಕಥೆಗಳನ್ನು ಅಧ್ಯಯನ ಮಾಡಿದಾಗ ಅವರ 'ಕಥಾವಸ್ತು –ವಿನ್ಯಾಸ' ವು ಕೂಡ ಓದುಗನಲ್ಲಿ ಆತ್ಮೀಯತೆಯನ್ನು ಮತ್ತು ಒಂದು ರೀತಿಯ ಆಪ್ತತೆಯನ್ನು ಉಂಟು ಮಾಡುತ್ತದೆ.

ತೆರೆದಷ್ಟೇಬಾಗಿಲು, ಅಮೃತಬಳ್ಳಿಕಷಾಯ, ದಗಡೂಪರಬನಅಶ್ವಮೇಧ, ತೂಫಾನ್‌ಮೇಲ್, ಬಣ್ಣದಕಾಲು, ಚಾರ್‌ಮಿನಾರ್ ಈ ಕಥಾ ಸಂಕಲನಗಳನ್ನು ಜಯಂತ್‌ಕಾಯ್ಕಿಣಿಯವರು ಪ್ರಕಟಿಸಿದ್ದಾರೆ.ಈ

ಎಲ್ಲಾ ಕಥಾಸಂಗ್ರಹಗಳನ್ನು ಅಧ್ಯಯನ ಮಾಡಿದಾಗ 'ಸೂಕ್ಷ್ಮ ಸಂವೇದನೆ' ಎಲ್ಲ ಬರಹಗಳಲ್ಲೂ ಕೂಡ ವಸ್ತುವಾಗಿ ನಿರ್ಮಾಣವಾಗಿದೆ.ವಸ್ತು ವಿನ್ಯಾಸವು ಸಹೃದಯ ಓದುಗನ ಮನದಲ್ಲಿ ಏನೋ ಒಂದು ಬಗೆಯ ಹೊಸತನವನ್ನು ನೀಡುತ್ತದೆ.ಸೂಕ್ಷ್ಮವಾದ ಗ್ರಹಿಕೆ ಮತ್ತು ನೋಡುವ ಕ್ರಮ ವಸ್ತುವನ್ನು ವಿನ್ಯಾಸಗೊಳಿಸುತ್ತದೆ.ಕಥೆಯೇ ರೂಪವನ್ನು ನಿರ್ಧರಿಸುತ್ತದೆ.ಸಮಕಾಲೀನ ಮಾಧ್ಯಮ ಕಾರ್ಯಕ್ರಮಗಳೇ ಕಥಾವಸ್ತುಗಳಾಗಿಬಿಡುತ್ತೆ.

ಜಯಂತರ ಜಗತ್ತು ಮುಖ್ಯವಾಗಿ ಮಧ್ಯಮ ಮತ್ತು ಕೆಳಮಧ್ಯಮ ವರ್ಗಕ್ಕೆ ಸೇರಿದ ಮನುಷ್ಯರ ಜಗತ್ತು. ಈ ಜಗತ್ತಿನಲ್ಲಿ ದೈನಂದಿನ ಜೀವನದ ಎಲ್ಲಾ ಕಷ್ಟ ಕಾರ್ಪಣ್ಯಗಳೂ, ಆಸೆ ನಿರಾಸೆಗಳೂ ಇವೆ. ಕನಸುಗಳು ಸುಲಭವಾಗಿ ಫಲಿಸಲಾರದ ಜಗತ್ತು ಇದು, ಕನಸುಗಾರರ ಮುಗ್ಧ ಪ್ರಪಂಚವಲ್ಲ. ಯೌವನದ ಕನಸುಗಾರಿಕೆ, ಆದರ್ಶಪ್ರಿಯತೆ ಆದರಿಂದ ಜನಿಸುವ ಭ್ರಮನಿರಸನ ಇವುಗಳನ್ನು ದಾಟಿ ಮುನ್ನಡೆದಿದೆ. ಇವರ ಕತೆಗಳಲ್ಲಿ ನಾವು ಕಾಣುವುದು ಕೇವಲ ಮನುಷ್ಯ ಸ್ಥಿತಿಯ ಮಂಡನೆಯನ್ನಲ್ಲ. ಇಲ್ಲಿನ ಬಹುತೇಕ ಪಾತ್ರಗಳಿಗೆ ತಮ್ಮ ಸ್ಥಿತಿಯ ಅರಿವಿದೆ.ಈ ಅರಿವಿನಲ್ಲಿ ತಮ್ಮ ಸಾಧ್ಯತೆಗಳನ್ನು ಶೋಧಿಸಿಕೊಳ್ಳುವ ಒಂದು ಮನಸ್ಥಿತಿಯನ್ನು ಅನೇಕ ಕತೆಗಳಲ್ಲಿ ಕಾಣುತ್ತೇವೆ. ಇದೇನೂ ನಿರಾಶವಾದೀ ಒಪ್ಪಿಗೆಯಲ್ಲ. ಆದರೆ ತಮ್ಮ ವ್ಯಕ್ತಿತ್ವಕ್ಕೊಗ್ಗದ ರೊಮ್ಯಾಂಟಿಕ್ ಕನಸುಗಾರಿಕೆ, ಕಾಂತ್ರಿಕಾರತೆಯನ್ನು ಇಲ್ಲಿನ ವ್ಯಕ್ತಿಗಳು ತೋರುವುದಿಲ್ಲ.

ನವ್ಯದ ಉದ್ವೇಗ, ಬಂಡಾಯ ತೀವ್ರತೆ ಎರಡೂ ಕಾಣೆಯಾಗಿ ಜಯಂತ ಕಾಯ್ಕಿಣಿಯವರ ಕಥೆಗಳು ಮೇಲುನೋಟಕ್ಕೆ ಸಪ್ಪೆ ಎನಿಸಬಹುದು.ಆದರೆ ಅವರ ಬರವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ತಮ್ಮ ಬದುಕಿಗೆ ನಿಷ್ಠವಾದ, ತಮ್ಮ ಅರಿವಿನ ಬೆಳಕಿನಲ್ಲಿ ಹೊಸ ದಿಗಂತಗಳನ್ನು ಹುಡುಕಲೆತ್ನಿಸುವ ಮನುಷ್ಯ ಪ್ರಯತ್ನಗಳನ್ನು ಜಯಂತರು ಎಚ್ಚರಿಕೆಯಿಂದ ಪರಿಶೀಲಿಸುತ್ತಿರುವುದು ಕಂಡು ಬರುತ್ತದೆ.ಸಿದ್ಧಾಂತಗಳಿಗೆ ಬದಲಾಗಿ, ಅಮೂರ್ತದರ್ಶಕ್ಕೆ ಬದಲಾಗಿ ವಿಶಿಷ್ಟ ಚಹರೆಗಳನ್ನುಳ್ಳ, ವೈಯಕ್ತಿಕ ಗುಣಲಕ್ಷಣಗಳನ್ನುಳ್ಳ ವ್ಯಕ್ತಿಗಳನ್ನು ಬೇಟಿಯಾಗುತ್ತೇವೆ. ಮನುಷ್ಯ ಮಾದರಿಗಳನ್ನು ಸೃಷ್ಟಿಸಲು ಅಷ್ಟೊಂದು ಆಸಕ್ತಿಯಿಲ್ಲದ ನಿರೂಪಕರಿಗೆ ವ್ಯಕ್ತಿ ಸ್ವಭಾವದಲ್ಲಿ ಹೆಚ್ಚು ಕುತೂಹಲವಿದ್ದಂತಿದೆ.ಜಯಂತರು ಸಿದ್ಧ ಮಾದರಿಗಳನ್ನು ಕೇವಲ ಹಿಂಬಾಲಿಸದೆ ಮನುಷ್ಯನ ವಿವರ ಜಗತ್ತಿನಲ್ಲಿ ಸೋಲು–ಗೆಲವುಗಳ ಸ್ವರೂಪವನ್ನು ಗುರುತಿಸಿಕೊಳ್ಳಲು ಪ್ರಯತ್ತಿಸುತ್ತಿದ್ದಾರೆ. ವ್ಯಕ್ತಿ ವಿಶಿಷ್ಟ ಜೀವನ ವಿನ್ಯಾಸಗಳ ಮೂಲಕವೇ ಮನುಷ್ಯ ಜೀವನ ವಿನ್ಯಾಸವನ್ನು ಕಾಣುವ ಮಹತ್ವಾಕಾಂಕ್ಷಿಯನ್ನು ತೋರುತ್ತಿದ್ದಾರೆ. ಹೀಗೆ ಜಯಂತರು ಕಥಾವಸ್ತುವೊಂದನ್ನು ಆರಿಸಿಕೊಂಡು ಅದಕ್ಕೆ ಪೂರಕವಾದ ರೀತಿಯಲ್ಲಿ ಕಥಾವಿನ್ಯಾಸವನ್ನು ಹೆಣೆಯುವುದು ಮಾನವೀಯ ವಿನ್ಯಾಸವಾಗಿ ಬಿಡುತ್ತದೆ.ಮಾನವ ಜಗತ್ತಿನ ದಿನ ನಿತ್ಯದ ಸಲಕರಣೆಗಳೆ ಕಥಾ ಹಂದರದಲ್ಲಿ ವಸ್ತುಗಳಾಗಿ ಬಿಡುತ್ತವೆ. ಅದೇ ವಸ್ತುವನ್ನು ವ್ಯಕ್ತಿ ಭಾವಗಳ ನೆಲೆಯಲ್ಲಿ ವಿನ್ಯಾಸಗೊಳಿಸುತ್ತಾರೆ.

ಟಿ.ಪಿ.ಅಶೋಕ "ಸಿದ್ಧ ಮಾದರಿಗಳನ್ನು ಹಿಂಬಾಲಿಸದೆ, ವ್ಯಕ್ತಿ ವಿಶಿಷ್ಟ ಜೀವನ ವಿನ್ಯಾಸಗಳ ಮೂಲಕವೇ ಮನುಷ್ಯ ಜೀವನ ವಿನ್ಯಾಸವನ್ನು ಕಾಣುವ ಮಹತ್ವಾಕಾಂಕ್ಷೆ ಇಲ್ಲಿದೆ"[೧] ಎಂದು ಹೇಳುತ್ತಾರೆ.

ಎಸ್ ಆರ್ ವಿಜಯಶಂಕರ್–"ಕತೆಗಳಲ್ಲಿ ಬದುಕಿನ ಸೌಂದರ್ಯ ಸಾಧ್ಯತೆಗಳು ಇದ್ದಕ್ಕಿದ್ದಂತೆ ಈ ಸಾಮಾನ್ಯ ಜೀವನದಿಂದಲೇ ಗೋಚರಿಸಿ ಬಿಡುತ್ತದೆ"[೨] ಎಂಬುದಾಗಿ ಹೇಳಿದ್ದಾರೆ.

ಎನ್.ಎನ್.ವೆಂಕಟಲಕ್ಷ್ಮಿಯವರು– "ಮತ್ತೆ ಮತ್ತೆ ಅರ್ಥವ್ಯಾಪ್ತಿ, ಭಾವವ್ಯಾಪ್ತಿ ಬೇಡುವ ಅವರು ಕಥನ ಕಲೆಯನ್ನು ಸುಮ್ಮನೆ ಅನುಭವಿಸುವುದಕ್ಕಿಂತ ಬೇರೆ ಸುಮ್ಮಾನ ಇಲ್ಲ"[೩] ಎಂದು ಈ ದೊಡ್ಡ ಗಣ್ಯರು ಜಯಂತರ ಕಥನ ಕತೆ ವಿನ್ಯಾಸದ ಕುರಿತು ಹೇಳಿರುವ ಮಾತು ಸಮಂಜಸವಾಗಿದೆ.

ಶೈಲಿ

ಜಯಂತರ ಕಥನಶೈಲಿಯು ಕೂಡ ಬಹಳ ಆಪ್ತವಾದುದು, ಆಯಸ್ಕಾಂತದಂತೆ ಸೆಳೆದು ಕೊಳ್ಳುವಂತಹದ್ದು. ಆಧುನಿಕ ಬದುಕಿನ ಸಮಕಾಲೀನ ಸಂದರ್ಭದಲ್ಲಿಯೂ ಕೂಡ ಜಯಂತರ ಗದ್ಯ ಇಬ್ಬರು ಸಂವೇದನಾಶೀಲ ಗೆಳೆಯರು ನಡುವಿನ ದಿನ ನಿತ್ಯದ ಮಾತುಕತೆಯಂತೆ ನೇರ, ಸರಳ ಹಾಗೂ ಭಾವಪೂರ್ಣ.ಈ ಬರಹಗಳು ನಾವು ಸಾಮಾನ್ಯವೆಂದು ಭಾವಿಸುವ ಘಟನೆಗಳು ವಿವರಗಳು ಅಸಾಮಾನ್ಯತೆಯನ್ನೂ ಮತ್ತು ನಾವು ಕ್ಲಿಷ್ಟ ಹಾಗೂ ಅಸಾಮಾನ್ಯ ಎಂದು ಭಾವಿಸುವ ಸಂಗತಿಗಳು ಆಳದಲ್ಲಿರುವ ಸಾಮಾನ್ಯ ಅಂಶಗಳನ್ನೂ ಗುರುತಿಸಿ, ನಾವೂ ಅವುಗಳನ್ನು ಗುರುತಿಸುವಂತೆ ಪ್ರಚೋದಿಸುತ್ತವೆ.

ನಮ್ಮೆದಿರಿನ ಜಗದ ರೈಲು, ಸಮುದ್ರ, ರಿಮ್ಯಾಂಡ್ ಹೋಮ್, ಬಸ್, ಆಸ್ಪತ್ರೆ, ಸಂಕೇತವಾಗಿ ನಗರ ಪ್ರಜ್ಞೆಯಲ್ಲಿ ಭಾಷೆಯ ನಯವಾದ ನಾಜೂಕು ಕಾಣುತ್ತದೆ.ಅದು ಆಪ್ತವಾಗಿಬಿಡುತ್ತದೆ.ಜಯಂತ ಕಾಯ್ಕಿಣಿಯವರ ಭಾಷೆಯೂ ಬದುಕಿನ ಸಾಮಾನ್ಯ ಕ್ಷಣಭಂಗುರಗಳಿಗೆಯನ್ನು ಸೂಕ್ಷ್ಮವಾಗಿ ಗ್ರಹಿಸಿ ಸೆರೆ ಹಿಡಿದು ಬಿಡುತ್ತದೆ.ಅಂದರೆ ತಾವು ಗ್ರಹಿಸಿದ ಲೋಕಾನುಭವಕ್ಕೆ ಪೂರಕವಾದ ಭಾಷೆಯೊಂದು ಬರಹದಲ್ಲಿ ಜೀವನಾಡಿಯಂತೆ ಕಥಾ ಹಂದರವನ್ನು ನಡೆಸುತ್ತದೆ.ಅವರ ಭಾಷೆ ಸರಳ, ನೇರವಾದ ಆಡು ನುಡಿ ಮತ್ತು

---

೧. ಬೆನ್ನುಡಿ – ಜಯಂತ್‌ಕಾಯ್ಕಿಣಿ ಕಥೆಗಳು – ಅಕಿಂತ ಮುದ್ರಣ.
೨. ಅದೇ
೩. ಅದೇ

ಸ್ಪಂದನ ಶೀಲವಾದ, ಭಾವಪೂರ್ಣವಾದ ಭಾಷೆ. ಅವು ನನ್ನವು ಅನಿಸುವ ಹಾಗೆ ಆತ್ಮೀಯತೆಯನ್ನು ಓದುಗನಲ್ಲಿ ಗಿಟ್ಟಿಸುತ್ತದೆ.ಅದೇ ಭಾಷೆಯ ಹೆಚ್ಚುಗಾರಿಕೆ ಮತ್ತು ಲೇಖಕರ ಕಸುಬುಗಾರಿಕೆ.

ಜಿ.ಎಸ್.ಅಮೂರ್ – "ಭಾಷೆಯ ವಿಷಯದಲ್ಲಿ ಅವರು ತೀರ ವಿಶಿಷ್ಟವಾಗಿದ್ದರೆ, ಅವರಿಗೆ ಒಲವಿರುವು ರೂಪಕಗಳತ್ತ.ಈ ರೂಪಕಗಳ ಒಂದು ಮುಖ್ಯ ಕಾರ್ಯವೆಂದರೆ ಕತೆಯನ್ನು ಅದರ ಪಾತ್ರ, ಘಟನೆ, ಪರಿಸರಗಳಿಂದ ಬಿಡಿಸಿ ಅದಕ್ಕೆ ಮುಕ್ತತೆಯನ್ನೊದಗಿಸುವುದು"[೧] ಎಂದಿದ್ದಾರೆ.ಭಾಷೆಯಲ್ಲಿನ ರೂಪಕ, ಉಪಮೆ, ಸಂಕೇತ ಧ್ವನಿಗಳು ಭಾವ ಭೂಮಿಕೆಯಲ್ಲಿ ಅರಿವಿಲ್ಲದೆ ಬರುತ್ತದೆ.ಜಯಂತರೇ ಹೇಳಿದ ಹಾಗೆ –"ಸಾಹಿತ್ಯ ಎಂಬುದು ಸಂಕೇತ, ರೂಪಕ ಅಂತಲ್ಲ, ಅದೊಂದು ಅನುಭವ. ಅವು ನಮ್ಮ ಭಾವಭೂಮಿಕೆಯ ಅವಿಭಾಜ್ಯ ಅಂಗಗಳು. ಅವುಗಳ ಮೂಲಕವೇ ಬದುಕನ್ನು ಅನುಭವಿಸುವುದು. ಹೀಗಾಗಿ ಬರೆಯುವಾಗ ಇದ್ದೆಲ್ಲ ಒಟ್ಟಿಗೆ ಬಂದು ಬಿಡುತ್ತದೆ.ಇದು ಪ್ರತಿಮೆಯಾಗಿ ಬಳಸುತ್ತೇನೆ, ಇದನ್ನು ರೂಪಕವಾಗಿ ಬಳಸುತ್ತೇನೆ ಅಂತ ಅಲ್ಲ. ಅದು ಅರಿವಿಲ್ಲದೆ ಆಗೋದು, ಅರಿವಿಲ್ಲದೆ ಆಗುವ ಅರಿಯುವ ಕ್ರಿಯೆಯದು"[೨], ಭಾಷೆಯಲ್ಲಿ ಈ ಎಲ್ಲವೂ ಇರುತ್ತದೆ, ಅವು ಸಮಯಕ್ಕೆ ತಕ್ಕ ಹಾಗೆ ಲೇಖಕನ ಲೇಖನಿಯಿಂದ ಅನುಭವ ಜಗತಿನಲ್ಲಿ ಮಿಂಚುತ್ತವೆ.

ಜಯಂತರ ಶೈಲಿಯ ಒಂದು ಜಾಗತಿಕ ಜಗತ್ತಿನ ಕಡೆಗೆ ಹೆಜ್ಜೆ ಹಾಕಿದ ಭಾಷಾ ಶೈಲಿಯನ್ನು ಅದರ ವಿನ್ಯಾಸವನ್ನು ಅವರ ಶೈಲಿಯಾಗಿ ಕತೆಗಳಲ್ಲಿ ಕಾಣಬಹುದು. ಸಮಕಾಲೀನ ಸಂದರ್ಭದ ವಸ್ತು ವಿನ್ಯಾಸಗಳನ್ನು ಕಥೆಗಳಲ್ಲಿ ದುಡಿಸಿಕೊಳ್ಳುವ ಅವರ ಭಾಷೆಯೊಂದಿಗೆ ನಡಿಗೆ ಮಾಡುತ್ತಾ ಒಂದು ಹೊಸ ವಿನ್ಯಾಸವೊಂದನ್ನು ಸೃಷ್ಟಿಸುವುದು ಜಯಂತರ ಬರಹದ ಶೈಲಿಯಾಗಿದೆ.ಅವರ ಭಾಷೆ ಮತ್ತು ಶೈಲಿಯಿಂದಾಗಿಯೇ ಗದ್ಯಕ್ಕೊಂದು ಲಯ, ಗೇಯತೆಯು ಇದೆ.ಹೆಚ್ಚಿನ ಕಥೆಗಳಲ್ಲಿ ಉತ್ತಮ ಪುರುಷ ನಿರೂಪಣೆಯಿದೆ.

ಅದರಿಂದಾಗಿ ಒಂದು ಪಾತ್ರದ ಪ್ರಜ್ಞೆಗೆ ಮಾತ್ರ ನಿರೂಪಣೆಯ ದೃಷ್ಟಿಕೋನ ಸೀಮಿತವಾಗಿರುತ್ತದೆ. ಕೆಲವು ಕಡೆ ಕೇಂದ್ರ ಪಾತ್ರದ ಪ್ರಜ್ಞೆಗೆ ಸೀಮಿತವಾಗುವ ನವ್ಯದ ಹಾದಿಯನ್ನು ಬಿಟ್ಟು ಸರ್ವ ಸಾಕ್ಷಿತ್ವದ ನಿರೂಪಣೆಗೆ ಬಂದಿರುವುದು ಜಯಂತಕಾಯ್ಕಿಣಿಯವರ ವಿಶೇಷ.

---

೧. ಜಯಂತ್‌ಕಾಯ್ಕಿಣಿ ಕಥೆಗಳು – ಅಕಿಂತ ಮುದ್ರಣ – ಬೆಂಗಳೂರು – ಬೆನ್ನುಡಿ.

೨. ಜಯಂತ ಕಾಯ್ಕಿಂಣಿ ವಾಚಿಕೆ (ಸಂದರ್ಶನ) – ಡಾ॥ ಸಿ.ಎನ್.ರಾಮಚಂದ್ರನ್.

ಅಧ್ಯಾಯ ೬

ಉಪಸಂಹಾರ

ಕನ್ನಡದ ಕಥಾಸಾಹಿತ್ಯವು ಸಮೃದ್ಧವಾಗಿದೆ.ಕತೆಯು ಸಾಹಿತ್ಯದ ಒಂದು ಪ್ರಕಾರವಾಗಿ ಇತ್ತೀಚಿನ ದಿನಗಳಲ್ಲಿ ಹೆಚ್ಚು ಹೆಚ್ಚು ಜನಪ್ರಿಯವಾಗಿದೆ.ಕೆಲವೇ ಪಾತ್ರಗಳ ಮೂಲಕ ಒಂದೆರಡು ಘಟನೆಗಳ ಮೂಲಕ ತಮ್ಮ ಸಂವೇದನೆಯನ್ನು ಕತೆಗಾರ ಅಭಿವ್ಯಕ್ತಿಸುತ್ತಾನೆ. ಹೀಗಾಗಿಯೆ ಕಥೆಯು ಒಂದು ಮಾಧ್ಯಮವಾಗಿ ಕತೆಗಾರನಿಗೆ ದೊರೆಯುತ್ತದೆ.ಕನ್ನಡದಲ್ಲಿ ಕಥೆಗಾರರನ್ನು ಪಟ್ಟಿ ಮಾಡುತ್ತಾ ಹೋದರೆ ಅದು ಮುಗಿಯುವುದಿಲ್ಲವೇನೋ?ಆದರೆ, ಬರೆದದ್ದೆಲ್ಲವೂ ಸಾಹಿತ್ಯವಾಗುವುದಿಲ್ಲ. ಕಾಲ-ದೇಸ-ಕೃತಿಯು ಒಂದು ಸಮಾಜಿಕ, ಸಾಂಸ್ಕೃತಿಕ ನೆಲೆಯಲ್ಲಿ ಪರಂಪರೆಯನ್ನು ಬೆಸೆದುಕೊಂಡಿರಬೇಕು.ಆಗ ಮಾತ್ರ ಅವು ಶ್ರೇಷ್ಠತೆಯನ್ನು ಪಡೆದುಕೊಳ್ಳುತ್ತವೆ.

ಜಾಗತಿಕ ಸಾಹಿತ್ಯ ಸಂದರ್ಭದಲ್ಲಿ 'ನಗರಪ್ರಜ್ಞೆ'ಯನ್ನು ಸೂಕ್ಷ್ಮಸಂವೇದನೆಯ ಮೂಲಕ ಅಭಿವ್ಯಕ್ತ ಪಡಿಸುವ ಜಯಂತ ಕಾಯ್ಕಿಣಿಯವರ ಬರವಣಿಗೆಯಲ್ಲಿ ಕುತೂಹಲವಿದೆ. ಇಂಥ ಸಮೃದ್ಧ ಕನ್ನಡ ಕಥಾ ಸಾಹಿತ್ಯದಲ್ಲಿ ಜಯಂತ ಕಾಯ್ಕಿಣಿಯವರು ಸಹ ಪ್ರಮುಖ ಕಥೆಗಾರರು.ಮೊದಲಿಗೆ 'ನಗರಪ್ರಜ್ಞೆ' ಜಯಂತ ಕಾಯ್ಕಿಣಿಯವರ ಕಥೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.ಕನ್ನಡದಲ್ಲಿ 'ನಗರಪ್ರಜ್ಞೆ'ಯ ಅನೇಕ ಲೇಖಕರಿದ್ದಾರೆ- ನಿಸಾರ್ ಅಹಮದ್, ಅರವಿಂದ ನಾಡಕರ್ಣಿ, ರಾಮಚಂದ್ರಶರ್ಮ ಮುಂತಾದವರು. ಆದರೆ ಜಯಂತ ಕಾಯ್ಕಿಣಿಯವರಹಾಗೆ ಯಾವ ಹೇಳಿಕೆ ಹಾಗೂ ತಾತ್ವಿಕ ನೆಲೆಯ ಸಾಧಾರಣಿಕರಣವಿಲ್ಲದೆ, ಕುಶಲ ಹಾಗೂ ಸಹೃದಯ ಚಿತ್ರಕಾರನಂತೆ, ನಗರ ಜೀವನವನ್ನು ಅಪಾಯಕ್ಕೆಡೆ ಮಾಡುತ್ತಿರುವ ಅಲ್ಲಿನ ಕ್ರೌರ್ಯ ಹಾಗೂ ಅಮಾನವೀಯತೆಯ ಮುಖಗಳನ್ನು ಸಹಜವಾಗಿ ವ್ಯಕ್ತಿ ಸ್ವಭಾವದಲ್ಲಿ ಚಿತ್ರಿಸಿರುವವರು ಕಮ್ಮಿ, ಕ್ನನಡದಲ್ಲಿ ಈ 'ನಗರಪ್ರಜ್ಞೆ'ಯನ್ನು ಸಮರ್ಥವಾಗಿ ದುಡಿಸಿಕೊಂಡ ಜಯಂತ ಕಾಯ್ಕಿಣಿಯವರ ಮೇಲೆ ಮುಂಬೈ ಎಂಬ ದೈತ್ಯನಗರದ ಪ್ರಭಾವಿದೆ. ನಗರದ ಜೀವನದಲ್ಲಿ ಕಂಡಬರುವ ಹತಾಶೆ ಹಾಗೂ ಭೀಭತ್ಸ ಅನುಭವಗಳನ್ನು ಪ್ರಮುಖವಾಗಿ ಗುರುತಿಸಿದ್ದಾರೆ.ಈ 'ನಗರಪ್ರಜ್ಞೆ' ಗೆ ಎರಡು ಪ್ರಮುಖ ಕಾರಣಗಳಿವೆ- ಒಂದು ವೈಯಕ್ತಿಕ ಮತ್ತೊಂದು ಸಾಮಾಜಿಕ.

ವೈಯಕ್ತಿಕ ನೆಲೆಯಲ್ಲಿ ನಿರೂಪಕ ತನ್ನ ಸರಳ, ಗ್ರಾಮೀಣ ಮತ್ತು ಹಸಿರು ಪರಿಸರದಿಂದ ಬೇರು ಸಹಿತ ಕೀಳಲ್ಪಟ್ಟ ಮತ್ತೊಂದು ಅಪರಿಚಿತ ಹಾಗೂ ಕ್ರೂರ ಪರಿಸರದಲ್ಲಿ ನೆಡಲ್ಪಟ್ಟಿದ್ದಾನೆ. ಇದರ

ಪರಿಣಾಮವಾಗಿ, ತನ್ನ ಮೂಲ ಪರಿಸರವನ್ನು ಮರೆಯಲಾಗದೆ, ಹತಾಶೆ ಹಾಗೂ ಪರಕೀಯ ಪ್ರಜ್ಞೆಯಿಂದ ನರಳುತ್ತಾನೆ. 'ಕಳೆದುಕೊಂಡ ಸ್ವರ್ಗ' ಆಶಯದ ಸಾಮಾಜಿಕ ಆಯಾಮವೆಂದರೆ ಅಸಮಾನ ಅವಕಾಶ ಅಧಿಕಾರಗಳನ್ನಾಧರಿಸಿರುವ ನಗರೀಕೃತ ಆಧುನಿಕ ವ್ಯವಸ್ಥೆ. ಈ ಕ್ರೂರ ವ್ಯವಸ್ಥೆಯ ಭೀಕರ ಮುಖಗಳನ್ನು ನಾವು ಮುಂಬಯಿ, ಕೋಲ್ಕತ್ತಾ, ಬೆಂಗಳೂರು ಮುಂತಾದ ಆಧುನಿಕನಗರದಲ್ಲಿ ಕಾಣುತ್ತೇವೆ. ಕಾಂಕ್ರೀಟು ಕಾಡುಗಳ ಬದುಕನ್ನು ಮತ್ತು ಯಾವ ರೀತಿಯಿಂದಲೂ ವ್ಯಕ್ತಿಯೊಬ್ಬನು ಆ ವ್ಯವಸ್ಥೆಯನ್ನು ಬದಲಾಯಿಸಲಾಗದ ಅಸಹಾಯಕತೆಯನ್ನು ಇವರ ಕಥೆಗಳು ದಾಖಲಿಸುತ್ತವೆ.

ನಗರೀಕರಣ ಮತ್ತು ಜಾಗತೀಕರಣದ ಬಾಹುಗಳು ತನ್ನ ತೋಳತೆಕ್ಕೆಯಲ್ಲಿ ಗ್ರಾಮೀಣ ಬದುಕನ್ನು ಅಪೋಷಣ ತೆಗೆದುಕೊಳ್ಳುತ್ತಿದೆ. ಹಳ್ಳಿಗಳು ನಶಿಸುವ ಮೂಲಕ ಮನುಷ್ಯ ಸಂಬಂಧಗಳನ್ನು ವಿಧ್ವಂಸಕವಾಗಿಸಿ ಬಿಡುವ ಸಂಚು ಹೂಡಿದೆ. ನಗರವೆಂಬುದು ಊರಿನ ಯುವಕರನ್ನು ಸೆಳೆದು ಬಹುದೊಡ್ಡ ಆಮಿಷವನ್ನು ಒಡ್ಡಿನಿಂತಿವೆ (ಉದಾ: ಚಾರ್ಮಿನಾರ್ ಕಥೆಯಲ್ಲಿ ರೈಲಿನ ಸೆಳೆತಕ್ಕೆ ಸಿಕ್ಕಿ ಬಿಡಾಡಿ ಹುಡುಗರು ಕೊನೆಗೆ ಮುಂದಿನ ಸ್ಟೇಷನ್‌ನಲ್ಲಿ ಭೂಟ್‌ಪಾಲೀಷ್ ಮಾಡುವ ದುಸ್ಥಿತಿ) ಹೀಗೆ ಏನೋ ಒಂದು ವ್ಯಾಮೋಹ, ಗ್ರಾಮೀಣ ಬದುಕಿನ ಮಾನವ ಸಂಬಂಧಗಳ ಕೊಂಡಿಯನ್ನು ಕಳಚಿಕೊಂಡು ನಗರದಲ್ಲಿ ಪರಕೀಯನಾಗಿಬಿಡುವ ಹಂಬಲವೇ ಮುಖ್ಯವಾಗುತ್ತದೆ.

ನಗರ–ಗ್ರಾಮೀಣದ ನಡುವಿನ ತಲ್ಲಣಗಳಿಗೆ ಹೊಸ ರೂಪ ದೊರೆತಿದೆ.ಅವುಗಳದೇ ಆದ ತಲ್ಲಣಗಳು ಉಲ್ಬಣವಾಗಿದೆ.ಮಾನವೀಯತೆಯು ಕೇವಲ ಮಾತಿನಲ್ಲಿದೆ, ಆದರೆ ಮನುಷ್ಯ ಸರಕಾಗಿದ್ದಾನೆ. ಇವನ ಸಾವು ಕೂಡ ವ್ಯಾಪಾರೀಕರಣಗೊಳ್ಳುವ ಆತಂಕವನ್ನುಂಟು ಮಾಡುತ್ತದೆ. ಇಲ್ಲಿ ಎಲ್ಲವೂ ಕೇವಲ ಸರಕು, ಎಲ್ಲರೂ ಯಂತ್ರಗಳು ಅಷ್ಟೇ, ಕೆಟ್ಟು ನಿಲ್ಲುವಂತಿಲ್ಲ ಮತ್ತು ಸಂಬಂಧಗಳಿಗೆ ಬೆಲೆಯಿಲ್ಲ. ಲಾಭನಷ್ಟದ ಲೆಕ್ಕಚಾರಗಲ್ಲಲಿ ನಗರಗಳಿವೆ. ಗ್ರಾಮೀಣ ಸಂಸ್ಕೃತಿಯೇ ನಗರವಾಗುವ ಹಂಬಲಕ್ಕೆ ಹಾತೊರೆಯುವ ಹುನ್ನಾರಗಳನ್ನು ಜಯಂತಕಾಯ್ಕಿಣಿಯವರ ಕಥೆಗಳು ವಾಸ್ತವದ ಕಠೋರತೆಯೊಂದಿಗೆ ಬಿಚ್ಚಿಡುತ್ತವೆ. ಹಳ್ಳಿಗಳು ಕೇವಲ ವೃದ್ಧಾಶ್ರಮವಾಗಿದೆ. ಊರಿನ ಯುವಕರೆಲ್ಲಾ ದೂರದ ನಗರದಲ್ಲಿ ಜೀತಕ್ಕಿರುವ ಪರಕೀಯತೆಯ ನೋವು, ಅನಾಥತೆಯ ವಿಷಾದ ಮಡುಗಟ್ಟಿ, ನಗರದಲ್ಲಿ ಕ್ರೌರ್ಯಕ್ಕೆ ಬೆನ್ನು ಮಾಡದೆ, ಅದರೊಡನೆ ಸಂಘರ್ಷಕ್ಕಿಳಿಯದೆ ಕೇವಲ ಮಾತಿನಲ್ಲಿ ಬಂಡಾಯವೆದ್ದು, ಕೊನೆಗೆ ಅದರೊಂದಿಗೆ ಅನುಸಂಧಾನ ಮಾಡಿಕೊಂಡು ಬದುಕುತ್ತಿರುವ ಅಸಹಾಯಕ ಸ್ಥಿತಿಯನ್ನು ನಗರದಲ್ಲಿದ್ದು ನಾಗರೀಕರಾದವರ ನಡುವೆ ನಾಗರೀಕತೆಯ ಕುರಿತು ನಿರ್ಮಾನುಷವಾಗಿ ವರ್ತಿಸುವುದನ್ನು ಜಯಂತಕಾಯ್ಕಿಣಿಯವರು ಕಥೆಗಳ ಮೂಲನೆಲೆಯಲ್ಲಿ ಮನುಷ್ಯ ಸ್ವಭಾವದಲ್ಲಿ ಕಟ್ಟಿಕೊಡುತ್ತಾರೆ. ಗ್ರಾಮೀಣ ಬದುಕಿನಿಂದ ಬೇರು ಕಿತ್ತು ಬಂದವರು ಶಹರದಲ್ಲೊಂದು ನಾನಾ ನಮೂನೆಯಲ್ಲಿ ಬಣ್ಣ ಗೆದರಿ ಕುಣಿದು

ಆ ರೆಕ್ಕೆಗಳನ್ನು ಸುಟ್ಟುಕೊಂಡು ಅಲ್ಲಿಯೂ ಬಾಳದ, ಇಲ್ಲಿಯೂ ಸೇರದೆ ಸಾವನ್ನಪ್ಪಿ ಬಿಡುವಂತೆ ಒತ್ತಡಗಳನ್ನು ಸೃಷ್ಟಿಸುವ ನಗರ ಒಂದು ರೀತಿಯ 'ಸೈಲೆಂಟ್ ಕಿಲ್ಲರ್', ವ್ಯಕ್ತಿ ಮಾನವ ಸ್ವತಂತ್ರವನ್ನು ಕಳೆದುಕೊಳ್ಳುತ್ತಾನೆ. ಸ್ವತಂತ್ರನಾಗಿದ್ದೇನೆಂಬ ಭ್ರಮೆಯಲ್ಲೇ ಬದುಕುತ್ತಾನೆ. ಹೀಗೆ ಮಾನವನ ಸ್ವತಂತ್ರ್ಯಾಲೋಚನೆ, ಸೃಜನಶೀಲ ಮನೋಭಾವ ಬತ್ತಿ ಹೋಗುತ್ತದೆ. ಹೀಗೆ ವ್ಯಕ್ತಿ ತಾನು ಕಡಿದುಕೊಂಡು ಬಂದ ಸಂಬಂಧಗಳೊಂದಿಗೆ ಮರಳಿ ಹೋಗಲಾಗದೆ.ನರಳಾಟದಲ್ಲಿ ಸಿಕ್ಕಿ ಒದ್ದಾಡುತ್ತಾನೆ, ವ್ಯಕ್ತಿಗಳ ಮೇಲೆ ನಗರದ ಅನಾಗರೀಕ ಒತ್ತಡಗಳು ನಗರದ ಹೀರೋಯಿಸಂ ಅನ್ನು ಮನುಷ್ಯನ ಕುರಿತ ಕುತೂಹಲದಲ್ಲಿ ಕಥೆಗಳು ಮೈ ಪಡೆದಿವೆ.

ಜಾಗತಿಕ ರಾಜಕಾರಣವೊಂದು ಸ್ಪರ್ಧೆಗಿಳಿದು ಪ್ರೀತಿ, ನಂಬಿಕೆ, ವಿಶ್ವಾಸಗಳಿದ್ದ ಜಾಗದಲ್ಲಿ ದ್ವೇಷ, ಅಸೂಯೆ, ಕಾಮ, ವಿಮುಖಗಳನ್ನು ತನ್ನ ಒಡಲಲ್ಲಿ ಗುಪ್ತವಾಗಿಟ್ಟುಕೊಂಡಿರುತ್ತದೆ. ಇಲ್ಲಿ ಬಿದ್ದ ಮಳೆ ಮತ್ತೆ ಮೋಡವಾಗುವುದಿಲ್ಲ. ಈ ನಗರಕ್ಕೆ ನಿದ್ದೆ ಬರುವುದೇ ಇಲ್ಲ. ಗದ್ದಲ, ಗಲಿ-ಬಿಲಿ, ಗಿಜಿ-ಬಿಜಿಗಳೊಂದಿಗೆ ನಿರಂತರವಾದ ಒಡನಾಟವನ್ನು ಹೊಂದಿರುತ್ತದೆ.ಪರಿಚಿತರ ಕಂಡು ತುಸು ಹೊತ್ತು ಮಾತಾಡಿಸುವಷ್ಟು ಪುರುಸೊತ್ತಿಲ್ಲ, ಎಲ್ಲವೂ ನಿಯತ ಕಾಲಕ್ಕೆ ನಿಯಮಿತವಾಗಿ ಜರುಗಬೇಕು.ನಗರ-ವ್ಯಕ್ತಿ, ನಗರ ಗ್ರಾಮೀಣ, ನಗರ ಜಾಗತೀಕರಣದ ವಿಭಿನ್ನ ನೆಲೆಗಳು ಜಯಂತ ಕಾಯ್ಕಿಣಿಯವರ ಕಥೆಗಳಿಗೆ ಬದುಕನ್ನು ತುಂಬಾ ಕುತೂಹಲದಿಂದ ನೋಡುವಂತೆ ಮಾಡುತ್ತದೆ. ಈ ರೀತಿಯ ಮಾನವನ ವರ್ತನೆಗಳನ್ನು ಅರಿಯುವ ಮೂಲಕ, ಚಡಪಡಿಕೆಯನ್ನು ವ್ಯಕ್ತ ಪಡಿಸುವುದರ ಮೂಲಕ ಮುಂದೇನಾಗುತ್ತದೋ! ಎಂಬ ಆತಂಕ ಮತ್ತು ಕುತೂಹಲ ಎರಡನ್ನು ಒಟ್ಟಿಗೆ ಮೂಡಿಸುತ್ತದೆ.

'ಸಾಹಿತ್ಯವು ಕೆಲವೊಮ್ಮೆ ಇರುವ ವಾಸ್ತವವನ್ನು ತೋರುವ ಕೆಲಸ ಮಾಡುತ್ತಿರುವುದಿಲ್ಲ. ಕಳೆದದ್ದನ್ನು ಹುಡುಕುವ, ಇಲ್ಲವಾಗುತ್ತಿರುವುದನ್ನು ತಡೆಯುವ ಕೆಲಸ ಕೂಡ ಮಾಡುತ್ತಿರುತ್ತದೆ.'ಜಯಂತರು ಒಂದು ಸಣ್ಣ ವಾಸ್ತವಿಕ ಘಟನೆಯನ್ನು ವಿವರಗಳ- ರೂಪಕಗಳ ಮೂಲಕ ಕಥೆಯನ್ನಾಗಿಸಿ ಬೆಳೆಸುತ್ತಾ ಹೋಗುತ್ತಾರೆ.ಆದರೆ ಅವರ ಆಸಕ್ತಿಯಿರುವುದು ಕಥೆಯ ಮಾಧ್ಯಮದಿಂದ ಮಾನವ ವಿನ್ಯಾಸಗಳನ್ನು ಪರಿಚಯಿಸುವುದರಲ್ಲಿ, ಆ ಘಟನೆಯನ್ನು ಹೇಳುವುದರಲ್ಲಿ ಅಲ್ಲ, ಈ ಪ್ರಯತ್ನದಿಂದಾಗಿ ನಮ್ಮ ಬದುಕಿನಿಂದ ನಿಶ್ಯಬ್ದವಾಗಿ ಕಳೆದುಹೋಗುತ್ತಿರುವ ಮಾನವೀಯತೆಯನ್ನು ಹಿಡಿದಿಟ್ಟುಕೊಳ್ಳುವಲ್ಲಿ ಅವರ ಅಪಾರವಾದ ಕಾಳಜಿ ವ್ಯಕ್ತವಾಗುತ್ತದೆ.ಮಗುವಿನಂತಹ ಕಣ್ಣು ಬೇಕು, ನಮ್ಮ ಸುತ್ತಮುತ್ತಲಿನ ಮಾನವೀಯ ವಿನ್ಯಾಸಗಳನ್ನು ಗಮನಿಸಲಿಕ್ಕೆ ಹಾಗೂ ತಾಯಿಯಂತಹ ಅಂತಃಕರಣ ಬೇಕು ಆ ಮನಸ್ಸುಗಳನ್ನು ತಟ್ಟಲಿಕ್ಕಾಗಿ ಎಂದು ಬಲವಾಗಿ ನಂಬಿದವರು ಜಯಂತ ಕಾಯ್ಕಿಣಿಯವರು.ಮುಕ್ತವಾದ

ಮನಸ್ಸು ನಮ್ಮಲ್ಲಿದ್ದರೆ ಬದುಕು ಹಸನಾಗುವುದು ಎನ್ನುವುದನ್ನು ಮತ್ತೆ ಮತ್ತೆ ತಮ್ಮ ಪಾತ್ರಗಳ ಮೂಲಕ ಪ್ರತಿಪಾದಿಸುತ್ತಾರೆ.

ಜಯಂತರ ಬಹುತೇಕ ಕಥೆಗಳು ಅಪೂರ್ಣ ಎಂದೆನಿಸುತ್ತವೆ. ವಿವರಗಳನ್ನು ನೀಡುತ್ತಾ ಕಥಾಪರಿಸರವನ್ನು ನಿರ್ಮಿಸಿ ಪಾತ್ರಗಳನ್ನು ಪರಿಚಯಿಸಿ ಇನ್ನೇನು ಕಥೆ ಪ್ರಾರಂಭವಾಗುತ್ತದೆ ಎನ್ನುವಷ್ಟರಲ್ಲಿ ತಟ್ಟನೆ ಕಥೆ ಮಕ್ತಾಯವಾಗುತ್ತದೆ. ಈಗಷ್ಟೇ ಕಥೆ ಪ್ರಾರಂಭವಾಯಿತು ಎನ್ನುವ ವಿಚಾರದಲ್ಲಿರುವ ಓದುಗನಿಗೆ ಈ ಹಠಾತ್ ಮುಕ್ತಾಯ ಮಾತ್ರ ಬೆಚ್ಚಿ ಬೀಳಿಸುವಂತಥದ್ದು.ಕಾದಂಬರಿಯ ಮೊದಲ ಅಧ್ಯಾಯವೆನಿಸುವಂತಹ ಕಥೆಗಳಿವು. ಓದುಗ ಕಥೆ ಓದಿ ಮುಗಿಸಿದ ಮೇಲೂ ಮನಸ್ಸನ್ನು ಕಾಡುವಂತಹ ಆ ಪಾತ್ರಗಳ ಕುರಿತು ವಿಚಾರ ಮಾಡುತ್ತಾ ಇರುತ್ತಾನೆ. ಪ್ರತಿಯೊಂದು ಕಥೆಯನ್ನು ಬೆಳೆಸಿದರೂ ಕಾದಂಬರಿಯಾಗುವಷ್ಟು ವಸ್ತು ಆ ಕಥೆಯಲ್ಲಿ , ಆದರಲ್ಲಿರುವ ಪಾತ್ರಗಳಲ್ಲಿ ಹುದುಗಿವೆ ಎಂದರೆ ತಪ್ಪಾಗಲಿಕ್ಕಿಲ್ಲ. ಎಷ್ಟೋ ಪಾತ್ರಗಳು ಒಂದು ಕಥೆಯಿಂದ ಮತ್ತೊಂದು ಕಥೆಯೊಳಗಿನ ಪಾತ್ರವಾಗಿ ಬೆಳದು ಬರುವುದೂ ಉಂಟು.

ಬದುಕನ್ನು ಅನನ್ಯವಾಗಿ ಪ್ರೀತಿಸುವವರಿಂದಲೇ ಉತ್ತಮ ಸಾಹಿತ್ಯ ರಚನೆ ಸಾಧ್ಯ ಎನ್ನುವುದನ್ನು ಜಯಂತರು ಕಳೆದ ನಾಲ್ಕು ದಶಕಗಳಲ್ಲಿ ಸಾಧಿಸಿ ತೋರಿಸಿದ್ದಾರೆ. ಅವರ ಬರಹಗಳಲ್ಲಿ, ಅವರ ಕೆಲಸಕಾರ್ಯಗಳಲ್ಲಿ, ಅವರ ಮಾತುಗಳಲ್ಲಿ ಮತ್ತೆ ಮತ್ತೆ ಇನ್ನೊಂದು ಜೀವವನ್ನು ಅಂತಃಕರಣದಿಂದ ತಟ್ಟುವ ಪ್ರಯತ್ನವನ್ನು ನಾವು ಕಾಣುತ್ತೇವೆ. ನಮ್ಮ ಊರು, ನಮ್ಮ ನಗರ, ನಮ್ಮ ಮಾತು, ನಮ್ಮ ಪರಿಸರ, ನಮ್ಮ ಜೀವಕ್ಕೆ ಒಳ್ಳೆಯದು ಎನ್ನುವುದನ್ನೆ ಪುನಃ ಪುನಃ ಜಯಂತ ಕಾಯ್ಕಿಣಿಯವರು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಿಸುತ್ತಾ ಬಂದಿದ್ದಾರೆ. ಯಾವೊಂದು ಮಾರ್ಗವನ್ನು ಅನುಸರಿಸಬೇಕೆಂಬ ಒತ್ತಾಸೆಯಿಲ್ಲದೆ ತಮ್ಮ ಕಥೆಗಳ ಬಂಧ, ತಂತ್ರ ಇತ್ಯಾದಿ ಹೊರ ಆವರಣಗಳ ಕುರಿತು ಚಿಂತಿಸದೆ ಬಹಳ ಸಮೃದ್ಧವಾದ ಅನುಭವಗಳನ್ನು ಸರಳ ಸಹಜ ಶೈಲಿಯಲ್ಲಿ ಕಥನ ರೂಪು ಕೊಡುವಲ್ಲಿ ಆಸಕ್ತಿಯನ್ನು ವಹಿಸಿದ ಕಥೆಗಾರರಿವರು.ಕನ್ನಡ ಸಾಹಿತ್ಯದಲ್ಲಿ ಇಂದಿನವರೆಗೆ ಮತ್ಯಾವ ಲೇಖಕನು ಕೂಡ ದಾಖಲಿಸುವಂತಹ ನಗರ ಜೀವನದ ಅನುಭವಗಳನ್ನು, ಪಾತ್ರಗಳನ್ನು ತಮಗೆ ವಿಶಿಷ್ಟವೆನಿಸುವಂತಹ ಭಾಷೆಯಲ್ಲಿ ತಮ್ಮ ಕಥೆಗಳ ಮೂಲಕ ಪರಿಚಯಿಸುತ್ತಾ ಜಯಂತ ಕಾಯ್ಕಿಣಿಯವರು ಕನ್ನಡದ ಸಂವೇದನೆಯ ಕ್ಷಿತಿಜವನ್ನು ವಿಸ್ತರಿಸಿದ್ದಾರೆ.ಮುಕ್ತ ಸಂವೇದನೆಯ ಜಯಂತ ಕಾಯ್ಕಿಣಿಯವರನ್ನು ಓದುವುದೆಂದರೆ ಹೊಸದೊಂದು ಬಾಗಿಲನ್ನು ಬೆಳಕಿನೆಡೆಗೆ ತೆರೆದಂತೆ.

ಆಕರ ಗ್ರಂಥಗಳು

೧. ಜಯಂತಕಾಯ್ಕಿಣಿ ಕಥೆಗಳು (ಪ್ರಶಸ್ತಿ ವಿಜೇತ ಮೂರು ಪುಸ್ತಕಗಳ ಸಂಪುಟ) – ಅಂಕಿತ ಪುಸ್ತಕ – ಬೆಂಗಳೂರು – ೨೦೧೨

೨. ತೂಫಾನ್ ಮೇಲ್–ಜಯಂತ್‌ಕಾಯ್ಕಿಣಿ ಕಥೆಗಳು – ಅಂಕಿತ ಪುಸ್ತಕ – ಬೆಂಗಳೂರು – ೨೦೦೮

೩. ಚಾರ್ ಮಿನಾರ್ – ಜಯಂತ್‌ಕಾಯ್ಕಿಣಿ ಕಥೆಗಳು – ಅಂಕಿತ ಪುಸ್ತಕ – ಬೆಂಗಳೂರು – ೨೦೧೨

೪. ಬಣ್ಣದ ಕಾಲು – ಜಯಂತ್‌ಕಾಯ್ಕಿಣಿ ಕಥೆಗಳು – ಅಂಕಿತ ಪುಸ್ತಕ – ಬೆಂಗಳೂರು – ೧೯೯೯

ಪರಾಮರ್ಶನ ಗ್ರಂಥಗಳು

೧. ಶಬ್ದ ತೀರ (ಅಂಕಣ ಬರಹ) –ಜಯಂತಕಾಯ್ಕಿಣಿ–ಅಂಕಿತ ಪುಸ್ತಕ – ಬೆಂಗಳೂರು – ೨೦೧೨

೨. ರಂಗದಿಂದೊಂದಿಷ್ಟು ದೂರಕೋಟಿತೀರ್ಥ – ಜಯಂತಕಾಯ್ಕಿಣಿ ಕವಿತೆಗಳು – ಅಂಕಿತ ಪುಸ್ತಕ – ಬೆಂಗಳೂರು – ೨೦೧೦

೩. ಬೊಗಸೆಯಲ್ಲಿ ಮಳೆ (ಅಂಕಣ ಬರಹ) –ಜಯಂತಕಾಯ್ಕಿಣಿ–ಅಂಕಿತ ಪುಸ್ತಕ – ಬೆಂಗಳೂರು – ೨೦೧೧

೪. ಶ್ರಾವಣ ಮಧ್ಯಾಹ್ನ (ಕವಿತೆಗಳು) –ಜಯಂತಕಾಯ್ಕಿಣಿ–ಅಂಕಿತ ಪುಸ್ತಕ – ಬೆಂಗಳೂರು – ೨೦೦೮

೫. ನೀಲಿ ಮಳೆ (ಕವಿತೆಗಳು) –ಜಯಂತಕಾಯ್ಕಿಣಿ–ಅಂಕಿತ ಪುಸ್ತಕ – ಬೆಂಗಳೂರು – ೨೦೦೮

೬. ಜಯಂತಕಾಯ್ಕಿಣಿ ವಾಚಿಕೆ – ಡಾ॥ ಸಿ.ಎನ್.ರಾಮಚಂದ್ರನ್ – ನುಡಿ ಪುಸ್ತಕ – ಬೆಂಗಳೂರು – ೨೦೧೦

೭. ಒಳದನಿ (ಕಾವ್ಯ, ಕೃತಿ, ವಿಮರ್ಶೆ ಮತ್ತು ಸಂಸ್ಕೃತಿಕುರಿತ ಬರಹಗಳು) –ಎಸ್.ಆರ್. ವಿಜಯ ಶಂಕರ್ – ಸಾಗರ ಪ್ರಕಾಶನ – ಬೆಂಗಳೂರು – ೨೦೧೨

೮. ಕಲ್ಪಿತ ವಾಸ್ತವ (ಕನ್ನಡ ಸಣ್ಣಕಥೆ) –ಗಿರಡ್ಡಿಗೋವಿಂದರಾಜ – ಸಾಹಿತ್ಯ ಪ್ರಕಾಶನ – ಹುಬ್ಬಳ್ಳಿ – ೨೦೦೯

೯. ಕನ್ನಡಕಥನ ಸಾಹಿತ್ಯ (ಸಣ್ಣಕಥೆ) –ಜಿ.ಎಸ್.ಆಮೂರ – ಪ್ರಿಯದರ್ಶಿನಿ ಪ್ರಕಾಶನ – ಬೆಂಗಳೂರು – ೨೦೦೮

೧೦. ಕಥನಕುತೂಹಲ – ಮೋಹನ ನಾಗಮ್ಮ – ಕರ್ನಾಟಕ ವಿದ್ಯಾವರ್ಧಕ ಸಂಘ –ಧಾರವಾಡ– ೨೦೦೩

೧೧. ನವ್ಯ ಸಾಹಿತ್ಯದರ್ಶನ–ಡಾ॥ ಶಾಂತಿನಾಥದೇಸಾಯಿ – ಪ್ರಗತಿಮುದ್ರಣಾಲಯ – ಶಿವಮೊಗ್ಗ – ೧೯೯೦

೧೨. ಆಖ್ಯಾನ– ವ್ಯಾಖ್ಯಾನ (ವಿಮರ್ಶಾ ಲೇಖನಗಳ ಸಂಕಲನ) –ಡಾ॥ ಸಿ.ಎನ್. ರಾಮಚಂದ್ರನ್–ರವಿ ಗ್ರಾಫಿಕ್ಸ್ – ಬೆಂಗಳೂರು – ೨೦೧೧

೧೩. ಗ್ರಂಥ ಸಂಗಾತಿ (೧೫೦ ಗ್ರಂಥಗಳ ಅವಲೋಕನ) –ಡಾ॥ ಜಿ.ಎಮ್.ಹೆಗಡೆ– ೨೦೧೧

ಜಯಂತಕಾಯ್ಕಿಣಿಯವರ ಜೀವನ ವಿವರ

ಜನ್ಮ ದಿನಾಂಕ	:	೧೪-೦೧-೧೯೫೫
ಜನ್ಮ ಸ್ಥಾನ	:	ಗೋಕರ್ಣ, ಉತ್ತರಕನ್ನಡಜಿಲ್ಲೆ, ಕರ್ನಾಟಕ
ತಂದೆ ಮತ್ತು ತಾಯಿ	:	ಗೌರೀಶಕಾಯ್ಕಿಣಿ ಮತ್ತು ಶಾಂತಾಕಾಯ್ಕಿಣಿ
ವಿದ್ಯಾಭ್ಯಾಸ	:	ಎಂ.ಎಸ್ಸಿ (ಬಯೋಕೆಮಿಸ್ಟ್ರಿ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ -೧೯೭೬
ಪತ್ನಿ	:	ಸ್ಮಿತಾ ಕಾಯ್ಕಿಣಿ
ಮಕ್ಕಳು	:	ಮಗಳು-ಸೃಜನಾ; ಮಗ-ಋತ್ವಿಕ್
ವೃತ್ತಿಜೀವನ	:	ಪ್ರಾಕ್ಟರ್ ಆ್ಯಂಡ್ ಗ್ಯಾಂಬಲ್ ಮತ್ತು ಹೆಕ್ಸ್ಟ್ ಮುಂಬಯಿ ಕಂಪನಿಗಳಲ್ಲಿ ಬಯೋಕೆಮಿಸ್ಟ್ ಆಗಿ ೨೩ ವರ್ಷಗಳ ತನಕ ಉದ್ಯೋಗ (೧೯೭೬ - ೧೯೯೭) ಜಾಹೀರಾತು ಕ್ಷೇತ್ರದಲ್ಲಿ ಬರವಣಿಗೆ (೧೯೯೮) ಈ-ಟಿವಿ ಕನ್ನಡ ವಾಹಿನಿಯ ಪ್ರಾರಂಭಿಕ ಸಲಹಾ ಮಂಡಳಿಯ ಸದಸ್ಯ (೧೯೯೯-೨೦೦೦) (೨೩ ವರ್ಷಗಳ ಮುಂಬಯಿ ವಾಸದ ನಂತರ ಬೆಂಗಳೂರಿಗೆ ವಲಸೆ.) 'ಭಾವನಾ' ಮಾಸಪತ್ರಿಕೆಯ ಸಂಪಾದಕ (೨೦೦೦-೨೦೦೧) ಸಧ್ಯ ಹವ್ಯಾಸಿ ಬರಹಗಾರ
ದೂರದರ್ಶನ	:	ಈ-ಟಿವಿ ಕನ್ನಡ ವಾಹಿನಿಯ 'ನಮಸ್ಕಾರ ತಲಾ ೩೦ ಕಂತುಗಳ ದೈನಿಕ ಕಾರ್ಯಕ್ರಮದ ಸಂದರ್ಶಕ.(ಕುವೆಂಪು ಕುರಿತು 'ರಸ ಋಷಿಗೆ ನಮಸ್ಕಾರ'), (ಶಿವರಾಮ ಕಾರಂತರಕುರಿತು 'ಕಡಲ ತೀರದ ಭಾರ್ಗವನಿಗೆ ನಮಸ್ಕಾರ'), (ವರಕವಿ ದ.ರಾ.ಬೇಂದ್ರೆಕುರಿತು 'ಬೇಂದ್ರೆ

ಮಾಸ್ತರ್‌ಗೆ ನಮಸ್ಕಾರ'), (ಡಾ.ರಾಜ್‌ಕುಮಾರ್‌ಕುರಿತು 'ನಟ ಸಾರ್ವಭೌಮನಿಗೆ ನಮಸ್ಕಾರ).

ಈ-ಟಿವಿ 'ವಾಯ್ಸ್ ಆಫ್ ಕರ್ನಾಟಕ' ಮತ್ತು 'ಎದೆತುಂಬಿ ಹಾಡುವೆನು' ಸಂಗೀತಾ ಪ್ರತಿಭಾಶೋಧ ಕಾರ್ಯಕ್ರಮಗಳಲ್ಲಿ ಪ್ರತಿಸ್ಪಂದಿ ಮತ್ತು ತೀರ್ಪುಗಾರರಾಗಿ.

ಚಲನಚಿತ್ರ : ಕಲಾನಿರ್ದೇಶಕ: ಮೂರು ದಾರಿಗಳು' (ನಿರ್ದೇಶಕರು-ಗಿರೀಶ ಕಾಸರವಳ್ಳಿ)

: ಚಿತ್ರಕಥೆ/ಸಂಭಾಷಣೆ: ದ್ವೀಪ (ನಿರ್ದೆಶಕರು-ಗಿರೀಶ ಕಾಸರವಳ್ಳಿ)

ಪೂರ್ವಾಪರ (ನಿರ್ದೇಶಕ-ಚಂದ್ರಶೇಖರ್)

ಚಿಗುರಿದ ಕನಸು (ನಿರ್ದೇಶಕ-ನಾಗಾಭರಣ)

ರಮ್ಯಚೈತ್ರ ಕಾಲ (ನಿರ್ದೇಶಕ-ಸುನಿಲ್ ಕುಮಾರ್‌ದೇಸಾಯಿ)

ಗೀತರಚನೆ : ಮುಂಗಾರು ಮಳೆ, ಮಿಲನ, ಗೆಳೆಯ, ಈ ಬಂಧನ, ಅರಮನೆ, ಗಾಳಿಪಟ, ಪರಿಚಯ, ಹಾಗೆ ಸುಮ್ಮನೆ, ಮೊಗ್ಗಿನ ಮನಸ್ಸು, ಇತಿ ನಿನ್ನ ಪ್ರೀತಿಯ, ಮನಸಾರೆ, ಜಂಗ್ಲಿ, ಬಿರುಗಾಳಿ, ಕೃಷ್ಣನ್ ಲವ್ ಸ್ಟೋರಿ, ಪಂಚರಂಗಿ, ಪೃಥ್ವಿ, ಪರಮಾತ್ಮ, ಬಚ್ಚನ್, ಅಂದರ್ ಬಾಹರ್, ಡ್ರಾಮಾ, ಮಳೆಯಲ್ಲಿ ಜೊತೆಯಲಿ, ದಿಲ್ ರಂಗೀಲಾ, ಅಭಿನೇತ್ರಿ, ಮಾಣಿಕ್ಯ ಒಗ್ಗರಣೆ, ಸಿದ್ದಾರ್ಥ, ವಾಸ್ತುಪ್ರಕಾರ...ಇತ್ಯಾದಿ.

ಪ್ರಕಟಿತ ಪುಸ್ತಕಗಳು

ಕವನ ಸಂಗ್ರಹ:

೧. ರಂಗದಿಂದೊಂದಿಷ್ಟು ದೂರು, ಅಕ್ಷರ ಪ್ರಕಾಶನ, ಸಾಗರ, ಅಂಕಿತ ಪುಸ್ತಕ -೧೯೭೪

೨. ಕೋಟಿತೀರ್ಥ, ಅಕ್ಷರ ಪ್ರಕಾಶನ, ಸಾಗರ- ೧೯೮೨

೩. ಶ್ರಾವಣ ಮಧ್ಯಾಹ್ನ, ಅಕ್ಷರ ಪ್ರಕಾಶನ, ಸಾರಗ- ೧೯೮೭

೪. ನೀಲಿಮಳೆ, ಪ್ರತಿಕೆ ಪ್ರಕಾಶನ, ಬೆಂಗಳೂರು -೧೯೯೭

೫. ಒಂದುಜಿಲೇಬಿ, ಅಂಕಿತ ಪುಸ್ತಕ, ಬೆಂಗಳೂರು -೨೦೦೮

ಕಥಾ ಸಂಕಲನ:

೧. ತೆರೆದಷ್ಟೇ ಬಾಗಿಲು, ಅನನ್ಯ ಪ್ರಕಾಶನ, ಮೈಸೂರು-೧೯೮೨

೨. ಗಾಳ, ರಾಘವೇಂದ್ರ ಪ್ರಕಾಶನ, ಅಂಕೋಲಾ, ಉ.ಕ.-೧೯೮೨

೩. ದಗಡೂ ಪರಬನ ಅಶ್ವಮೇಧ, ಕೃತಿ, ಬೆಂಗಳೂರು -೧೯೮೯

೪. ಅಮೃತಬಳ್ಳಿ ಕಷಾಯ, ಕ್ರೈಸ್ಟ್‌ಕಾಲೇಜು, ಬೆಂಗಳೂರು-೧೯೯೬

೫. ಬಣ್ಣದ ಕಾಲು, ನವ ಕರ್ನಾಟಕ ಪ್ರಕಾಶನ, ಬೆಂಗಳೂರು -೧೯೯೯

೬. ತೂಫಾನ್ ಮೇಲ್, ಅಂಕಿತ ಪುಸ್ತಕ, ಬೆಂಗಳೂರು-೨೦೦೮

೭. ಚಾರ್ ಮಿನಾರ್, ಅಂಕಿತ ಪುಸ್ತಕ, ಬೆಂಗಳೂರು -೨೦೧೨

ಅಂಕಣ ಬರಹ:

೧. ಬೊಗಸೆಯಲ್ಲಿ ಮಳೆ, ಅಂಕಿತ ಪುಸ್ತಕ, ಬೆಂಗಳೂರು-೨೦೦೭

೨. ಶಬ್ದತೀರ, ಅಂಕಿತ ಪುಸ್ತಕ, ಬೆಂಗಳೂರು -೨೦೦೬

೩. ಟೂರಿಂಗ್ ಟಾಕೀಸ್,ಮನೋಹರ ಗ್ರಂಥಮಾಲಾ, ಧಾರವಾಡ -೨೦೧೩

ನಾಟಕ:

೧. ಸೇವತಿ ಪ್ರಸಂಗ, ಅಕ್ಷರ ಪ್ರಕಾಶನ, ಹೆಗ್ಗೋಡು,೧೯೯೫

೨. ಜತೆಗಿರುವನು ಚಂದಿರ, ಅಕ್ಷರ ಪ್ರಕಾಶನ ಹೆಗ್ಗೋಡು,೨೦೦೧

೪. ಇತಿ ನಿನ್ನ ಅಮೃತಾ, ಮನೋಹರಗ್ರಂಥ ಮಾಲಾ, ಧಾರವಾಡ -೨೦೦೩

೫. ಆಕಾಶ ಬುಟ್ಟಿ (ಅಪ್ರಕಟಿತ)೨೦೦೪

ಅನುವಾದಿತಕೃತಿ

1. Dots and Lines (2004 –collections of short stories translated into English, Indialogs Publication, New Delhi.
   ಕೆಲವು ಕಥೆಗಳು ಬಿಡಿಯಾಗಿ ಅನುವಾದಿತಗೊಂಡು ಮರಾಠಿ ದೀಪಾವಳಿ ವಿಶೇಷಾಂಕಗಳಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ 'Indian Litreture' (English), 'ಸಮಕಾಲೀನ ಸಾಹಿತ್ಯ' (ಹಿಂದಿ) ವಿಶೇಷಾಂಕಗಳಲ್ಲಿ ಮತ್ತು ವಿವಿಧ ರಾಷ್ಟ್ರೀಯ ಆ್ಯಂಥಾಲಜಿಗಳಲ್ಲಿ ಪ್ರಕಟಗೊಂಡಿವೆ.

ಪುರಸ್ಕಾರಗಳು: ಸಾಹಿತ್ಯಕ್ಕಾಗಿ

ಕರ್ನಾಟಕ ಸಾಹಿತ್ಯಅಕಾಡೆಮಿ ಪುಸ್ತಕ ಪ್ರಶಸ್ತಿ:

ರಂಗದಿಂದೊಂದಿಷ್ಟು ದೂರ -೧೯೭೪

ತೆರೆದಷ್ಟೇ ಬಾಗಿಲು -೧೯೮೨

ದಗಡೂ ಪರಬನ ಅಶ್ವಮೇಧ-೧೬೮೯

ಅಮೃತಬಳ್ಳಿ ಕಷಾಯ -೧೯೯೬

ರಾಷ್ಟ್ರೀಯ 'ಕಥಾ' ಪ್ರಶಸ್ತಿ :೧೯೯೬

ಬಿ.ಎಚ್. ಶ್ರೀಧರ್ ಕಥಾ ಪ್ರಶಸ್ತಿ: ಅಮೃತ ಬಳ್ಳಿ ಕಷಾಯ -೧೯೯೭

ದಿನಕರ ದೇಸಾಯಿ ಕಾವ್ಯ ಪ್ರಶಸ್ತಿ : ನೀಲಿ ಮಳೆ -೧೯೯೮

ರುಜುವಾತು ಟ್ರಸ್ಟ್ ಫೆಲೋಷಿಪ್ : ೨೦೦೧

ಕುಸುಮಾಗ್ರಜ ಪುರಸ್ಕಾರ–ಯಶವಂತರಾವ್‌ಚವ್ಹಾಣ್ ಮುಕ್ತ ವಿದ್ಯಾಪೀಠ, ನಾಸಿಕ್ ಇವರ ವತಿಯಿಂದ ಅತ್ಯುತ್ತಮ ಭಾರತೀಯ ಲೇಖಕನಿಗೆ ನೀಡುವ 'ರಾಷ್ಟ್ರೀಯ ಸಾಹಿತ್ಯ ಪುರಸ್ಕಾರ' ಪಡೆದ ಚೊಚ್ಚಲ ಭಾರತೀಯ ಸಾಹಿತಿ.(೨೦೧೦)

ತುಮಕೂರು ವಿ.ವಿ.ದಿಂದ ಗೌರವ ಡಾಕ್ಟರೇಟ್ ಪದವಿ, ೨೦೧೧.

ಚಲನ ಚಿತ್ರ ಪ್ರಶಸ್ತಿಗಳು ಸಂಭಾಷಣೆಗಾಗಿ

ಚಿಗುರಿದ ಕನಸು – ೨೦೦೩

ಗೀತರಚನೆಗಾಗಿ

ಮುಂಗಾರು ಮಳೆ	-೨೦೦೬
ಈಟಿವಿ ಪ್ರಶಸ್ತಿ – ಮುಂಗಾರು ಮಳೆ	-೨೦೦೬
ಕಸ್ತೂರಿ ಸಿನಿಗಂಧ ಪ್ರಶಸ್ತಿ–ಮಿಲನ	-೨೦೦೭
ರಾಘವೇಂದ್ರ ಚಿತ್ರವಾಣಿ ಪ್ರಶಸ್ತಿ	-೨೦೦೭
ಚಾಣಕ್ಯ ಮಾಧ್ಯಮ ಪ್ರಶಸ್ತಿ	-೨೦೦೭
ಫಿಲ್ಮಫೇರ್ ಪ್ರಶಸ್ತಿ–ಗಾಳಿಪಟ	– ೨೦೦೯
ಮನಸಾರೆ	– ೨೦೧೦
ಸೌತ್ ಸ್ಕೋಪ್ ಪ್ರಶಸಿ -ಮನಸಾರೆ	-೨೦೧೦

‘ವಿಜಯ ನೆಕ್ಸ್ಟ್’ ಪತ್ರಿಕೆಯ ಓದುಗರ ಆಯ್ಕೆಯ ರಾಜ್ಯೋತ್ಸವದ ವರ್ಷದ ವ್ಯಕ್ತಿ (ಸಿನಿಮಾಕ್ಷೇತ್ರ:೨೦೧೦)

ಆಧಾರ:-

೧. ಜಯಂತ ಕಾಯ್ಕಿಣಿ ವಾಚಿಕೆ – ಡಾ॥ ಸಿ.ಎನ್ ರಾಮಚಂದ್ರನ್.

೨. ಇಂಟರ್ ನೆಟ್ ಕೃಪೆ.